Sri G. V. GOWDA.—Which is the distributing agency ?

Sri S. R. KANTHI.–It is the Government agency.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.–ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಎಂಟು ಲಕ್ಷ ಪುಸ್ತಕ ಎಷ್ಟು ಜನ ವಿದ್ಯಾರ್ಥಿಗಳಿಗೆ ಹಂಚುವುದಕ್ಕೆ ಸಾಕಾಗುತ್ತದೆ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ತಿಳಿದುಕೊಂಡಿರುವುದು ತಪ್ಪು; ಸ್ಯಾಂಪಲ್ ಸರ್ವೆ ಮಾಡಿ ಈ ರೀತಿ ಶೇಕಡ ಇಷ್ಟು ವಿದ್ಯಾರ್ಥಿಗಳಿಗೆ ಪುಸ್ತಕಗಳು ಇರುವದಿಲ್ಲ ಎಂದು ಕಂಡು ಬಂದಿದೆ :—

1 Standard	40 per cent
2 ,,	18 ,,
3 ,,	12 ,,
4 ,,	10 ,,
5 ,,	10 ,,
6 ,,	8 ,,
7 ,,	8 ,,

ಅಷ್ಟು ವಿದ್ಯಾರ್ಥಿಗಳಿಗೆ ಪುಸ್ತಕ ಕೊಡುವುದನ್ನು ಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಟ್ಟು ಪ್ರಿಂಟು ಮಾಡುವುದಕ್ಕೆ ಎಷ್ಟು ಖರ್ಚು ಆಗುವುದು ?

ಶ್ರೀ ಎಸ್. ಆರ್. ಕಂಠಿ.—ಪ್ರಾಥಮಿಕ ಶಾಲೆಯಲ್ಲಿ ಈ ಯೋಜನೆ ಇದೆ ಸೆಕೆಂಡರಿ ಸ್ಕೂಲುಗಳ ಬಗ್ಗೆ ಈ ಯೋಜನೆ ತಯಾರಾಗುತ್ತಿದೆ. ಇಷ್ಟು ಮಾತ್ರ ಹೇಳಬಹುದು. ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ; 55 ಮತ್ತು 107 ಅಂದರೆ ಸುಮಾರು 162 ಪುಸ್ತಕಗಳು ಪ್ರಿಂಟ್ ಆಗಬೇಕಾಗುತ್ತದೆ. ಇನ್ನು ಮುಂದೆ ಸಾಕಷ್ಟು ಪುಸ್ತಕಗಳನ್ನು ವರ್ಷೇ ವರ್ಷೇ ಫ್ರೀಯಾಗಿ ಪುಸ್ತಕ ಇಲ್ಲದವರಿಗೆ ಕೊಡಬೇಕೆಂದು ಇದೆ.

Members Representations

ಶ್ರೀ ಕೆ.ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ನಾನು ಒಂದು privilege motion ಕಳಿಸಿದ್ದೇನೆ. ಅದರ ಬಗ್ಗೆ ಏನಾಗಿದೆ ತಿಳಿಸಬೇಕು. ಮುಖ್ಯ ಮಂತ್ರಿಗಳು ಈ ಬಗ್ಗೆ ಹೇಳಿಕೆ ಕೊಟ್ಟಿಲ್ಲ, ಮತ್ತು ಪತ್ರಿಕೆಗಳಲ್ಲಿ ಅದನ್ನು ಕಾಂಟ್ರಡಿಕ್ಟ್ ಮಾಡಿಲ್ಲ.

Mr. SPEAKER.—I will deal with it at 4o'clock. The Hon'ble Minister for Education also may kindly be present at 4o'clock. Now General Discussion on the Budget.

BUDGET ESTIMATES FOR 1963-64—General Discussion

Debate continued.

† **Sri B. NANJAPPA** (Cubbonpet).—Mr. Speaker, Sir, the Defence Department have acquired more than thousand acres of land around Bangalore. They require water supply also. I would appeal to the Government to take up the water supply scheme very early. In the Budget there is no provision made for the Cauveri Water Supply Scheme. Even now I appeal to the Government through you, to take up the scheme without any delay.

About Education, they have not provided new buildings for Bangalore. The buildings in this City are there from a long time. In some of the schools here, there are not sufficient benches and tables. In most of the schools, if they require 8 or 10 teachers, there are hardly

(SRI B. NANJAPPA)

4 teachers. I have made complaints to the Department several times. So far they have not taken steps to meet the demands in this regard. I do not know whether the head of the department will supervise over the staff. In schools they have cut down the sports activities. Most of the schools do not have play-grounds. Also, no sports materials are supplied to the children. This should be taken into consideration especially when they are collecting sports fees.

A year ago our Chief Minister stated that he would like to have a uniform scale of pay of Rs. 100 for Class IV employees. That also, they have not implemented so far. They have given some more D. A. That will not be sufficient for this class of employees. The total emolument of a Class IV servant should not be less than Rs. 100 per month because day-to-day the prices of commodities are going up. The Deputy Commissioner of Mangalore had issued a statement regarding kerosene prices. In Bangalore the prices have been increased and kerosene is not available in many places. Immediate action should be taken to supply kerosene at reasonable prices.

All these years building grants used to be given to the scheduled castes and scheduled tribes but last year it has been stopped. A society was formed but bye-laws have not been framed yet. As a result most of the Harijans are deprived of these grants. Government should take immediate action to provide them with loans or grants.

From today's papers we understand that a Sewage Board would be constituted. I do not know what the Board is expected to do. Bangalore City is suffering a great deal owing to lack of adequate water supply. We have made several appeals to Government and the Chief Minister gave the assurance that this work would be taken up this year but the budget does not contain any provision for this. I request that the problem of water supply to the city should be taken up on a priority basis and the Emergency should not come in its way. In fact the water supply problem itself is an Emergent issue and should be tackled seriously.

Sir, Government had given the assurance that the pipe line would be laid by the end of December, 1962. So far that work remains incomplete and I do not know when it would be over. This is an urgent matter and requires immediate attention.

In most of the scholarship and other committees constituteed by Government, I find only non-congress M.L. As. are taken in as Members. Even there is politics. In those committees there are members who are neither in the Legislature or in the Corporation. I would plead that party-politics should play no part in selection of members to these commitees. Thank you.

Smt. VASANTALATA V. MIRJANKER (Kumta).—Sir, while welcoming the Budget, I would like to make a few observations. It is most commendable on the part of the Finance Minister to have presented a budget free from taxation but the enhancement of sales-tax on some of

the articles, causes difficulty. However, I do not want to enter into details. I would like to draw the attention of Government to matters connected with the coastal parts of Mysore State.

Sir, we are now in the third year of the Third Plan and it is of great importance to see that the schemes that are already on hand are properly implemented by the respective departments. It is therefore necessary to see and gear up the machinery wherever there is slackness from the State level downwards. Development of rural economy depends upon the development of agriculture or allied industries prevailing in those areas. Here I would like to point out that the new Mysore State has 200 miles of coastline as compared to the old Mysore State where there was no sea-coast. Naturally marine fisheries did not come within the ambit of Governmental activities. Now the situation has entirely changed. The development of fisheries has been taken up as a short-range programme yielding immediate results. In the case of ports greater attention is necessary. A proper appraisal of ports and their importance is essential since there was no Port Department in the old State of Mysore. I have been making repeated requests to some of the Ministers and Deputy Ministers, who are, directly or indirectly concerned with ports and mineral development, to visit these areas, study the problems and understand the importance of developing these ports and take steps to implement plans effectively and early. So far, my attempts have not succeeded. Now, I suggest that a committee with one of the Ministers or Deputy Ministers as the head be appointed to visit these ports, formulate schemes of development and fix-up relative priorities. Only then could we achieve the required results. Ports like Karwar, Bellikere, Bhatkal, Tadri, Honnnavar in North Kanara and Coondapur, Malpe and Mangalore in South Kanara are to be taken up simultaneously. As far as Karwar port is concerned, I am afraid the work is going on at a very slow pace and if it goes on at this rate, I am afraid we may not be able to keep up to the schedule. The approach to the development of minor ports is not as it should be. There should be a master-plan for the development of minor ports. Putting up a warf or construction of quarters for port officers or putting up godowns for certain articles received for import or export, are the only items that are undertaken at present. Even to complete these minor items, the period taken is considerably great.

2-30 P.M.

There are other problems requiring urgent attention of the Government such as providing harbour facilities, removal of silt, equipment for quick loading like Crane and Trolley and further more the navigational aids which are absolutely necessary. These are the ports through which the State intends to export ore and earn the required foreign exchange. The development work of these ports should not be held up or delayed for want of finances. I may say here that the approach for providing finances for the development of ports should be a proper one. The usual routine followed by the Finance Department is either refusing

(SMT. VASANTHALTHA)

to find money or to express inability to find money or simply referring to them year after year and leave the matters without much progress. I feel the Finance Department requires to be told to deviate from this policy stated already. The approach should be for the speedier execution of these works. I once again emphasize on the need of appointing a Committee with an official of the Ports Department as one of the members and a few members from this House to serve on the Committee, so that they may visit the port, study the problems and submit a report basing on which a master plan could be prepared and speedy implementation could be taken up. As regards the roads leading to these ports are concerned. Sir, communications are the very essentials of progress and development, and in the absence particularly of Railways in my district, improvement of these roads should be given a precedence over others. The development work of Hubli–Karwar Road is going on at a very slow speed. No mention has been made about the roads leading to Tadri port in Karwar District. This port should also be connected by a good road. This will be the nearest port to Hubli Railway Station, nearer than the Bellikere port which would save to the Government a very huge amount two rupees per every ton of ore exported through this port. I suggest that this road should also be taken up immediately for improvement and development.

Sir, we are now in the third year of the Third Five Year Plan and I feel it is the right time for us to engage ourselves in thinking of the Fourth Five Year Plan. The question of linking Karwar and Hubli by rail is a necessity and is long overdue. Our legitimate claims should not be overlooked again this time. The State Government should use the utmost pressure to see that atleast our claims are considered while formulating the Fourth Five Year Plan and I request the Chief Minister to see that no stone is left unturned to include this vital rail link from Hubli to Karwar in the Fourth Plan.

Coming to the Fishing harbours, those are not developed as yet in our State. Our port is richer in intensity of fish for various natural and other factors. The experiments carried out at Kerala have also disclosed voluminous data which leads to the same conclusion. Now norwegian project has been sanctioned to Karwar and I am sure the reports will be in support of what I have said already. So far, in our State old primitive method of fishing has been attempted. Deep-sea fishing has not been attempted despite the existence of fish-holes. I wonder why this industry has not been organised on a big scale when smaller countries like Europe and Japan could do much better. In spite of the initiative and drive exhibited by the Department, the progress as regards normal catch in coastal district are concerned, I should say, is very negligible. Without the mechanised type of boats for deep-sea fishing, it will not be possible to build up this industry. Every year 80 fishermen are trained in mechanised fishing in Mangalore and on completion of their training, they are provided with boats. There is

one boat-building yard at Mangalore and one at Karwar. But, they look like only Laboratory experiments. These should be placed on an industry-wide basis. Taking the statistics as one boat for every 5 sq. miles, there should be atleast 800 boats operating in that area. Even by the primitive methods, *i. e.*, Rampani nets that are used by the fishermen, at a single catch, the yield is about Rs. 30,000 and I do not understand why Government should not place this on par with agriculture in this time of emergency. With this end in view, I emphasize a few steps to be taken and attended to immediately, *i. e.*, to have a suitable place for storing the fish that is caught every day and to preserve them in good condition pending disposal to the market. Preservation of these fish in cold storage is absolutely essential and every ten miles there should be an Ice plant and some arrangements should be made to supply ice to the fishermen at reasonable rates. I should like to bring to the notice of the Government that all the ice factories sanctioned about 3 to 4 years back are still in an incomplete stage and some of them are not working. The Ice factory at Kumta for the last one year is not working.

Mr. SPEAKER.—Is the building complete ?

Smt. VASANTALATA V. MIRJANKAR.- Every thing is complete. It was taken over by the Government from a private party and was working since then.

Mr. SPEAKER.—Then why is it not working ?

Smt. VASANTALATA V. MIRJANKAR.—I do not know. All that I can say is that it is not working now. There are 12 Launches operating in that area and for want of freezing facilities thay are not getting good return for the fish caught there. One more Ice factory sanctioned for Bhakat has not come up at all.

As regards the marketing side, the attempts so far made are quite feeble and they have not touched the fringe of the problem. There is good market for prawns which would go to build up foreign exchange. As per figures prior to 1957, no prawns were sent to foreign countries from our State. The figures of last year reveal that about 50 lakhs were earned by way of dollars exchange. And this year about 200 tons have already been exported which exceeds last year's quantity and perhaps within the next three months, I am sure the figures will shoot up to a greater extent. In order to see that good market is created, an export promotion board is absolutely necessary for our State to tackle the export of lobsters, shrimps, machrets ? It is most fortunate that the Japanese have established a fish processing training centre in Mangalore. Sir, there is all the potential for establishing one such centre at Karwar also where at present a large quantity of fish caught is going waste. If this industry could be organised properly with adequate marketing facilities and arrangements for home consumption, it is bound to afford adequate employment to about one lakh of fishermen population of the coastal areas. The increase in the income can be put at an order of 2 crores of rupees and incidentally revenue to the State will be in the order of two lakhs.

(SMT. VASANTALATA)

Sir, the present Hon'ble Minister for Revenue when he was Deputy Minister of Food at the Centre had occasion to take several measures in respect of fishing industry and though he is not in charge of this portfolio, I am sure he will help to develop the fishing industry in this State. If he makes up his mind, he can increase the income of Mysore as regards fishing industry. I earnestly appeal to the Government and the Minister in charge of fisheries and the department in particular to make serious attemtps to build up this industry which also will solve the food problem proportionately at this time so that the rich kind of food which nature has gifted may be made available to the people of the State.

Sir, as regards Rural development programmes, I am sure our Government is going a bit too fast by entrusting the development programmes to the taluk boards. Taluk boards are still in the infant stage. Social welfare programmes as rightly pointed by the Hon'ble Member Smt. Champa Bai yesterday which are now handed over to the taluk boards, I feel, Sir, that the Development department does not feel social welfare programmes are part of developmental activities. I feel that it should not go to the taluk boards for implementation.

There is a demand from the taluk boards with forest areas for a share of the forest revenue which is pending before the Government for a long time and I am sure that the Government will see that an early decision in this regard is taken.

With these few remarks, I thank you, Sir, for giving me a chance to participate in this debate.

† ಶ್ರೀ ಡಿ. ಮುನಿಚೆನ್ನಪ್ಪ (ಬೆಂಗಳೂರು-ದಕ್ಷಿಣ).—ಮಾನ್ಯ ಸಭಾಪತಿಗಳೇ, ಈ 63-64ನೇ ವರ್ಷದ ಬಡ್ಜೆಟ್ಟನ್ನು ಈಗ ಸರ್ಕಾರದವರು ನಮ್ಮ ಮುಂದೆ ಮಂಡಿಸಿದ್ದಾರೆ. ಈ ಬಡ್ಜೆಟಿನ ಮೇಲೆ ಈಗಾಗಲೇ ಈ ಮಾನ್ಯ ಸಭೆಯ ಕೆಲವು ಸದಸ್ಯರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಈ ವಿಷಯದಲ್ಲಿ ಈಗ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ವಿಷಯ ಗಳನ್ನು ಮಾತ್ರ ನಾನೀಗ ಈ ಸಭೆಯ ಮಾನ್ಯಸದಸ್ಯರುಗಳ ಗಮನಕ್ಕೆ ತರಬಿಚ್ಛಿಸುತ್ತೇನೆ.

ಮೊದಲನೇಯದಾಗಿ ನಮ್ಮ ತಾಲ್ಲೂಕಿನ ಭಾಗದಲ್ಲಿ ಈಗ ಆ H.A.L. ಫಾಕ್ಟರಿ ಇದೆ. ಆ ನಮ್ಮ ಪ್ರದೇಶದಲ್ಲಿ ರೈತರಿಗೆ ಉಳುಮೆ ಮಾಡುವುದಕ್ಕೆ ಒಂದಿಷ್ಟು ಜಮೀನನ್ನು ಬಿಡದಂತೆ ಆ ಫ್ಯಾಕ್ಟರಿಗೆ ಅಲ್ಲಿರತಕ್ಕ ಜಮೀನನ್ನೆಲ್ಲಾ ಅಕ್ವೈರ್‍ಯರ್ ಮಾಡಿಕೊಂಡಿದ್ದಾರೆ. ಆದರೆ ಈಗ ಅವರು ಅಲ್ಲಿ ಏನು ಮಾಡುತ್ತಿದ್ದಾರೆಂದರೆ ಅಲ್ಲಿರತಕ್ಕ ಗ್ರಾಮಗ್ರಾಮಗಳನ್ನೇ ಸೇರಿಸಿಕೊಂಡು ಅವರು ಕಾಂಪೌಂಡನ್ನು ಹಾಕಿಕೊಳುತ್ತಿದ್ದಾರೆ. ಅಲ್ಲಿನ ಜನಗಳಿಗೆ ಒಡಾಡಲಿಕ್ಕೂ ಸಹ ಜಾಗವಿಲ್ಲದಂತಾಗಿದೆ. ಈಗ ಅಲ್ಲಿ ಒಂದು ಏರೋ ಇಂಜಿನ್ ಟೆಸ್ಟಿಂಗ್ ಫ್ಯಾಕ್ಟರಿ ಎಂತ ಮಾಡಿದ್ದಾರೆ ಅಲ್ಲಿ ಈ ಏರೋಪ್ಲೇನುಗಳನ್ನು ಟೆಸ್ಟ್ ಮಾಡುತ್ತಾರೆ. ಅದರ ಪಕ್ಕದಲ್ಲೇ ಕೆ.ಜಿ. ಶ್ರೀನಿವಾಸಪುರ ಎಂತ ಒಂದು ಗ್ರಾಮವಿದೆ. ಅಲ್ಲಿ ಈಗ ಆ ಇಂಜಿನ್‌ಗಳನ್ನು ಟೆಸ್ಟ್ ಮಾಡುವ ಕಾರ್ಯ ನಡೆಯುತ್ತಿರುವುದರಿಂದ ಆ ಗ್ರಾಮದಲ್ಲಿರತಕ್ಕ ಮುಕ್ಕಾಲು ಪಾಲು ಮನೆಗಳ ಗೋಡೆಗಳೆಲ್ಲ ಬಿರುಕುಬಿಟ್ಟಿವೆ. ಆದರೆ ಇಲ್ಲಿಯವರೆಗೂ ಯಾವ ಅಧಿಕಾರಿಗಳಾಗಲೀ ಆ ಗ್ರಾಮಕ್ಕೆ ಬಂದು ಆ ಜನಗಳ ತೊಂದರೆಯೇನು ಎಂಬುದನ್ನು ವಿಚಾರಿಸಿದವರಿಲ್ಲ.

ಇನ್ನು ಎರಡನೆಯದಾಗಿ—ಕುಡಿಯುವ ನೀರಿನ ಬಾವಿಗಳ ವಿಚಾರ. ಆ ಪ್ರದೇಶದಲ್ಲಿ ಎಲ್ಲೆಲ್ಲಿ ಒಂದೊಂದು ಕಡೆ ತಗ್ಗು ಪ್ರದೇಶವಿರುತ್ತದೆ ಅಂಥ ಕಡೆಗಳಲ್ಲೆಲ್ಲಾ ಆ ಫ್ಯಾಕ್ಟರಿಯವರು ಬೋರ್ ವೆಲ್‌ಗಳನ್ನು ಹಾಕಿಕೊಂಡಿದ್ದಾರೆ. ಅದರ ದೆಸೆಯಿಂದ ಬೇಸಿಗೆ ಕಾಲದಲ್ಲಿ ಆ ಸುತ್ತ ಮುತ್ತಲೂ ಗ್ರಾಮಗಳಲ್ಲಿರತಕ್ಕ ಜನರಿಗೆ ಆ ಗ್ರಾಮದ ಬಾವಿಗಳಲ್ಲಿ ಕುಡಿಯುವ ನೀರೇ ಸಿಕ್ಕುವುದಿಲ್ಲ. ಈ

ವಿಚಾರದಲ್ಲಿ 4-5 ತಿಂಗಳ ಹಿಂದೆ ಇದೇ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಆ ಪ್ರಶ್ನೆ ಚರ್ಚೆಯಾಗುತ್ತಿದ್ದಾಗ ಮಾನ್ಯ ಮಂತ್ರಿಗಳು ಅಂಥ ತೊಂದರೆಯಿರುವ ಕಡೆ ಆ ಗ್ರಾಮದ ಜನಗಳಿಗೂ ಬೋರ್‌ವೆಲ್‌ಗಳನ್ನು ಮಾಡಿಸಿ, ಅವುಗಳಿಗೆ ನಲ್ಲಿ ಸಹ ಹಾಕಿಸಿ ಜನರಿಗೆ ಕುಡಿಯುವ ನೀರಿನ ಸೌಕರ್ಯವನ್ನು ಕಲ್ಪಿಸಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಇದುವರೆಗೂ ಅವರು ಯಾವ ಕಾರ್ಯಕ್ರಮವನ್ನೂ ಸಹ ಕೊಂಡಿಲ್ಲ.

ಇನ್ನು ಮೂರನೆಯದಾಗಿ–ಈ ಹಿಂದೆ ಆ ಫ್ಯಾಕ್ಟರಿಗಾಗಿ ಅಲ್ಲಿದ್ದ ರೈತರಿಗೆ ಎಕರೆಗೆ 300-400 ರೂ. ಗಳನ್ನು ಕೊಟ್ಟು ಅವರ ಜಮೀನುಗಳನ್ನೆಲ್ಲ ಕಿತ್ತುಕೊಂಡರು. ಈ ದಿವಸ ಆ ಫ್ಯಾಕ್ಟರಿಯಲ್ಲಿ ಲಕ್ಷಾಂತರ ಜನರು ಕೆಲಸ ಮಾಡುತ್ತಿದ್ದಾರೆ. ಆದರೆ ಆ ಫ್ಯಾಕ್ಟರಿಯ ಸುತ್ತ ಮುತ್ತಲೂ ಇರುವ ಗ್ರಾಮದ ಜನಗಳಿಗೆ ಅವರು ಏನೂ ಸಹಾಯ ಮಾಡುತ್ತಿಲ್ಲ. ಆ ಕೆ. ಜಿ. ಶ್ರೀನಿವಾಸಪುರವೆಂಬ ಗ್ರಾಮಕ್ಕೆ ಈ ಹಿಂದೆ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರು ಒಂದಾವರ್ತಿ ಬಂದಿದ್ದರು. ಆಗ ಅವರು ಆ ಗ್ರಾಮವನ್ನು ಬೇರೆ ಕಡೆಗೆ ವರ್ಗಾಯಿಸಲು ಸರ್ವೆ ನಂ. 1ನೇ ಬಿನ್ನಮಂಗಲಕ್ಕೆ ಸೇರಿದ ಮನೆವಾರ್ತೆ ಕಾವಲಿನಲ್ಲಿ 17 ಎಕ್ರೆ 14 ಗುಂಟೆ ಜಮೀನನ್ನು ಕೊಡಿಸಿಕೊಡುವುದಾಗಿ ಆಶ್ವಾಸನ ಕೊಟ್ಟಿದ್ದರು. ಆದರೆ ಇತ್ತೀಚೆಗೆ ನಮ್ಮ ಟ್ರಸ್ಟ್ ಬೋರ್ಡಿನವರು ಆ ಜಾಗವನ್ನು ಯಾರೋ ಬೇರೆ ಖಾಸಗಿಯವರೊಬ್ಬರಿಗೆ ಲೇ-ಔಟ್ ಮಾಡಿ ಮಾರಾಟ ಮಾಡಲು ಅವರಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಆದರೆ ಇದುವರೆಗೂ ಅಲ್ಲಿ ಈ ರೈತರ ಬಗ್ಗೆ ಯಾವ ವಿಚಾರವೂ ಇಲ್ಲ. ಈಗಲಾದರೂ ನಮ್ಮ ಸರ್ಕಾರದವರು ಆ ಕಡೆಗೆ ಸ್ವಲ್ಪ ಗಮನ ಕೊಟ್ಟು ಆ ಪ್ರದೇಶದ ರೈತರ ಕುಂದು ಕೊರತೆಗಳನ್ನು ವಿಚಾರಮಾಡಿ ಅವರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಈ ಮಾನ್ಯ ಸಭೆಯಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಅಲ್ಲಿ ಒಂದು ಸ್ಯಾನಿಟರಿ ಬೋರ್ಡ್ ಎಂತ ಮಾಡಿದ್ದಾರೆ. ಅದಕ್ಕೆ ನಮ್ಮ ಡಿ.ಸಿ. ಅವರೇ ಅಧ್ಯಕ್ಷರು. ಸಬ್-ಡಿವಿಷನ್ ಆಫೀಸರು ಉಪಾಧ್ಯಕ್ಷರು. ಆಮೇಲೆ ಅವರಿಗೆ ಬೇಕಾದವರು ಇಬ್ಬರು ಮೆಂಬರುಗಳು ಆ ಕಮಿಟಿಯಲ್ಲಿದ್ದಾರೆ. ನಾನು ಆ ಚುನಾವಣಾ ಕ್ಷೇತ್ರದಿಂದ ಆರಿಸಿಬಂದ ವಿಧಾನಸಭಾ ಸದಸ್ಯನಾಗಿ ಅಲ್ಲಿಯ ರೈತರ ಕುಂದು ಕೊರತೆಗಳನ್ನು ವಿಚಾರಿಸುವುದಕ್ಕೆ ಅಲ್ಲಿ ನನಗೆ ಅವಕಾಶವಿಲ್ಲವಂತೆ. ಈ ರೀತಿಯ ಕಮಿಟಿ ಮಾಡಿಕೊಂಡಿದ್ದಾರೆ. ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

ವಿದ್ಯಾ ಇಲಾಖೆಯ ವಿಚಾರ ಏಳರಿಂದ ಹನ್ನೊಂದು ವರ್ಷದವರೆಗಿನ ಮಕ್ಕಳಿಗೆ ಕಡ್ಡಾಯವಾದ ಶಿಕ್ಷಣ ಕೊಡಬೇಕು ಎಂದೂ ಅವರನ್ನು ಶಾಲೆಗೆ ಕಳಿಸಲೇಬೇಕು ಎಂದೂ ಮಾಡಿದ್ದಾರೆ. ಹುಡುಗರು ಪಾಠಶಾಲೆಗಳಲ್ಲಿ ಓದುತ್ತಿದ್ದಾರೆ. ಕೆಲವು ಕಡೆ ಪಾಳು ಬಿದ್ದಿರುವ ಛತ್ರಗಳಲ್ಲಿ ಶಾಲೆಗಳು ನಡೆಯುತ್ತಿವೆ. ಹುಡುಗರಿಗೆ ವಿದ್ಯಾಭ್ಯಾಸಕ್ಕೆ ಸ್ಥಳವಿಲ್ಲ, ಕೋಟ್ಯಂತರ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುವಾಗ ಹಳ್ಳಿಗಳ ಕಡೆ ಹುಡುಗರಿಗೆ ಕುಳಿತುಕೊಳ್ಳುವುದಕ್ಕೆ ಸ್ಥಳ ಮಾಡಿ ಕೊಡದೆ ಹೋದರೆ ಹೇಗೆ ಎಂದು ಕೇಳುತ್ತೇನೆ.

ಕೃಷ್ಣರಾಜಪುರ ಗ್ರಾಮದಲ್ಲಿ ನಾಲ್ಕು ರೂಮುಗಳ ಒಂದು ಶಾಲೆಯನ್ನು ಕಟ್ಟಿದ್ದಾರೆ. ಅದನ್ನು ಕಟ್ಟಿ ಒಂದೆರಡು ವರ್ಷಗಳಾದುವು. ಅದಕ್ಕೆ ಸರ್ಕಾರದಿಂದ ಶೇಕಡ 60 ಗ್ರಾಮಸ್ಥರಿಂದ ಶೇಕಡ 40 ಹೀಗೆ ಹಣವನ್ನು ಕೊಟ್ಟಿದ್ದಾರೆ. ಈ ಕಟ್ಟಡವನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಇವೊತ್ತಿನವರೆಗೂ ಇದನ್ನು ವಿಚಾರಣೆ ಮಾಡದ ಅಧಿಕಾರಿಗಳೇ ಇಲ್ಲ.

ಬೇಗೂರು ಗ್ರಾಮದಲ್ಲಿ ಒಂದು ಹೈಸ್ಕೂಲು ನಡೆಯುತ್ತಿದೆ. ಇದಕ್ಕೆ ಮೂರು ವರ್ಷ ಕಾಲ ಗ್ರಾಂಟ್ ಕೊಡುವುದಿಲ್ಲ, ಮೂರು ವರ್ಷ ಕಳೆದಮೇಲೆ ಅರ್ಧಗ್ರಾಂಟ್ ಕೊಡುತ್ತೇವೆಂದು ಕೊಡಿಸಿದರು. ಮೂರು ವರ್ಷವಾದರೂ ಇದುವರೆಗೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈಗ ಶಾಲೆಯು ಆ ಗ್ರಾಮದ ಮುನಿನಾಗಪ್ಪ ಎಂಬುವವರ ಮನೆಯಲ್ಲಿ ನಡೆಯುತ್ತಿದೆ. ಅವರು ಕೆಳಗೆ ವಾಸಮಾಡಿಕೊಂಡು ಮೇಲೆ ಹೈಸ್ಕೂಲನ್ನು ನಡೆಸಲು ಪುಕ್ಕಟೆಯಾಗಿ ಕೊಟ್ಟಿದ್ದಾರೆ. ಮೂರು ವರ್ಷದಿಂದ ಅವರಿಗೆ ಎಷ್ಟು ತೊಂದರೆ ಇರಬಹುದು ಎಂದು ತಾವು ಯೋಜನೆ ಮಾಡಬೇಕು. ಮೂರು ವರ್ಷವಾದ ಮೇಲೆ ಅರ್ಧ ಗ್ರಾಂಟ್ ಕೊಡುತ್ತೇವೆಂದು ಹೇಳಿದವರು ಅದರ ಕಡೆಗೆ ಗಮನ ಕೊಟ್ಟಿಲ್ಲ.

ನಾವು ಮಾಡಿರುವ ಕೆಲಸವನ್ನು ಹೇಳಿಕೊಳ್ಳಬಾರದು. ಆದರೂ ಹೇಳಬೇಕಾದ ಪ್ರಮೇಯ ಬಂದಿದೆ, ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಮೂರು ಶಾಲೆಗಳನ್ನು ಕಟ್ಟಿಸಿಕೊಟ್ಟಿದ್ದೇನೆ. ಮೂರುನಾಲ್ಕು ವರ್ಷದ ಮೇಲಾಯಿತು. ಇದುವರೆಗೂ ಆ ಶಾಲೆಗಳಿಗೆ ಸುಣ್ಣ ಬಳಿಯುವವರಿಲ್ಲ, ಮಣ್ಣು ಹಾಕುವವರಿಲ್ಲ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ನೀವೇ ಬಳಿಸಿಕೊಡಿ.

ಶ್ರೀ ಡಿ. ಮುನಿಚಿನ್ನಪ್ಪ.—ಸರ್ಕಾರ ಅಪ್ಪಣೆ ಕೊಡಿಸಿದರೆ ಮಾಡುತ್ತೇನೆ. ಇದೊಂದೇ ಅಲ್ಲ, ಇಂಥ ಅನೇಕ ಶಾಲೆಗಳಿವೆ. ಶಾಲಾಕಟ್ಟಡಗಳನ್ನು ರಿಪೇರಿ ಮಾಡದೆ ಹೋದರೆ ಸಾವಿರಾರು ರೂಪಾಯಿ ಖರ್ಚುಮಾಡಿದ ಶಾಲೆಗಳ ಗತಿ ಏನು ಸ್ವಾಮಿ ?

ಸರ್ಕಾರದವರು ಪ್ರಾಥಮಿಕ ಶಾಲೆಗಳಿಗೆ ಶೇಕಡ 60 ಸಹಾಯ ಕೊಡಬೇಕು ರೈತರು ಶೇಕಡ 40 ಕೊಡಬೇಕು ಎಂದು ಇದುವರೆಗೂ ಇತ್ತು. ಇದನ್ನು ಈಗ ಬದಲಾಯಿಸಿದ್ದಾರೆ. ಇದುವರೆಗೂ ಇದ್ದಂತೆಯೇ ಮುಂದೆಯೂ ಕೊಡಬೇಕೆಂದು ನಾನು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ.

ರಸ್ತೆಗಳ ವಿಚಾರ.—ನಮ್ಮ ತಾಲ್ಲೂಕಿನಲ್ಲಿ ರಸ್ತೆಗಳನ್ನು ಮಾಡುತ್ತಿದ್ದಾರೆ. ರಸ್ತೆಯಲ್ಲಿ ಮೊಣಕಾಲುಉದ್ದ ಹಳ್ಳವಿದರೂ ಜಲ್ಲಿ ಹಾಕುವುದಿಲ್ಲ. ಆದರೆ ರಸ್ತೆ ಪಕ್ಕದಲ್ಲಿ ಒಂದಡಿಗೆ ಒಂದೂ ಮುಕ್ಕಾಲು ರೂಪಾಯಿನಂತೆ ಕೊಟ್ಟು ಉದ್ದಕ್ಕೂ ಎರಡೂ ಕಡೆ ಕಲ್ಲುಗಳನ್ನು ನೆಟ್ಟಿರುತ್ತಾರೆ. ಇದಕ್ಕೆ ಲಕ್ಷಾಂತರ ರೂಪಾಯಿ ಹೋಗುತ್ತದೆ. ರಸ್ತೆಗಳ ಪಕ್ಕದಲ್ಲಿ, ಹಳ್ಳಿಗಳ ಮುಂದೆ 10-15 ಮೈಲಿ ಉದ್ದದಷ್ಟು side drains ಮಾಡಿರುತ್ತಾರೆ. ಇವೆಲ್ಲ ಮಣ್ಣು ತುಂಬಿಕೊಂಡಿದ್ದು ಉಪಯೋಗವಿಲ್ಲವಂತಾಗಿದೆ. ಇದಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡಿದ್ದಾರೆ. ಮಣ್ಣು ತೆಗೆಯುವವರು ಯಾರೂ ಇಲ್ಲ. ಈ ರೀತಿ ದುಡ್ಡು ಹಾಳು ಮಾಡುತ್ತಿದ್ದರೆ ಏನು ಪ್ರಯೋಜನ? ವರ್ಷೇ ವರ್ಷೇ ಬಡ್ಜೆಟ್ ಮಂಡಿಸುತ್ತಾರೆ, ಹಣ ಖರ್ಚಾಗುತ್ತದೆ. ಆದರೆ ಖರ್ಚುಮಾಡಿದ ಹಣ ಸರಿಯಾಗಿ ವಿನಿಯೋಗವಾಗಬೇಕೆಂದು ನನ್ನ ಪ್ರಾರ್ಥನೆ.

ಕೆರೆಗಳು ಹೂಳು ತುಂಬಿಕೊಂಡು ನೀರು ಆಚೆ ಹೋಗುತ್ತಿದರೂ, ತೂಬುಗಳಲ್ಲಿ ನೀರು ಹೋಗುತಿದ್ದರೂ, ಅಥವಾ ಕಟ್ಟೆಯಲ್ಲಿ ಕಂಡಿಬಿದ್ದು ನೀರು ಹೋಗುತ್ತಿದ್ದರೂ ಯಾರೂ ನೋಡುವುದಿಲ್ಲ. ರಿವೆಟ್‌ಮೆಂಟ್ ಮಾಡಬೇಕೆಂದು ಹೇಳಿದರೆ ಮಾಡುವುದಿಲ್ಲ. ಹೂಳು ತೆಗೆಸುವುದಿಲ್ಲ. ದುಡ್ಡನ್ನು ಮಾತ್ರ ವ್ಯಯ ಮಾಡುತ್ತಿದ್ದಾರೆ. ಒಂದೇ ಕೆರೆಕಟ್ಟೆ ನಾಲ್ಕೈದು ಫರ್ಲಾಂಗ್ ಉದ್ದ ಇದೆ. ಅದಕ್ಕೆ ಇರುವ ಒಂದು ತೂಬಿನಿಂದ ಮತ್ತೊಂದು ಕಡೆಗೆ ನೀರು ಬರುವ ಹೊತ್ತಿಗೆ ಅರ್ಧ ನೀರು ಕೆಳಗಡೆ ಹೋಗುತ್ತದೆ. ದೊಡ್ಡ ದೊಡ್ಡ ಕೆರೆಗಳಿಗೆ ಎರಡು ತೂಬುಗಳನ್ನು ಹಾಕಿ ನೀರು ದುರ್ವಿನಿಯೋಗವಾಗದಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಅದೂ ಅಲ್ಲದೆ ಬಹಳ ಕೆರೆಗಳು ಹೂತು ಹೋಗಿದೆ. ಇಂಥ ಕೆರೆಗಳ ಕಟ್ಟೆಗಳನ್ನು ಎತ್ತರಿಸಿ ಬರುವ ನೀರೆಲ್ಲ ಅದರಲ್ಲಿ ನಿಲ್ಲುವಂತೆ ಮಾಡಿ ಎರಡು ಬೆಳೆಗಳಿಗೆ ಅನುಕೂಲ ಮಾಡಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯ ವಿಚಾರವಾಗಿ ಒಂದೆರಡು ಮಾತನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಈ ಇಲಾಖೆಯಲ್ಲಿ ದುಡ್ಡನ್ನು ಖರ್ಚು ಮಾಡುತ್ತಾರೆ. ಷೆಡ್ಯೂಲ್ಡ್ ಪಂಗಡದವರಿಗೆ ಅಕ್ವಿಜಿಷನ್‌ಗಾಗಿ ದುಡ್ಡು ಕೊಡುತ್ತಿದರು, ಮನೆ ಕಟ್ಟಿಕೊಳ್ಳಲು ದುಡ್ಡು ಕೊಡುತ್ತಿದ್ದರು. ಹೋದ ವರ್ಷದಿಂದ ಇದನ್ನು ನಿಲ್ಲಿಸಿದರು. ಸೊಸೈಟಿಗಳನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಯಾವ ಕಾಲಕ್ಕೆ ಮಾಡುತ್ತಾರೆಯೋ ನೋಡಬೇಕು. ಅಕ್ವಿಜಿಷನ್ ಕೆಲಸ ಜಾಗ್ರತೆ ಮಾಡಿಸಿ, ಅವರಿಗೆ ಜಾಗ ಕೊಡುವುದಕ್ಕಾದರೂ ಸಹಾಯ ಮಾಡಬಾರದೆ? ಜಾಗವಿದ್ದರೆ ಗುಡಿಸಲುಗಳನ್ನಾದರೂ ಹಾಕಿಕೊಳ್ಳುತ್ತಾರೆ. ಬಡವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಏನು ಸಹಾಯ ಮಾಡುವುದು ?

ಜಮೀನನ್ನು ದರಖಾಸ್ತಿನಲ್ಲಿ ಕೊಡುವುದರಲ್ಲಿ ಬಡವರಿಗೆ ಜಮೀನು ಕೊಡುತ್ತಿಲ್ಲ. ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಬೆಂಗಳೂರಿನಿಂದ ಐದಾರು ಮೈಲಿ ದೂರದೊಳಗೇ ಕೊಡುತ್ತಾರೆ. ಅವರನ್ನು ಕೇಳುವವರು ಯಾರೂ ಇಲ್ಲ. ಸಮಾಜ ಕಲ್ಯಾಣ ಶಾಖೆಯ ಮಂತ್ರಿಯವರು, ಈ ವಿಚಾರಕ್ಕೆ ಗಮನ ಕೊಟ್ಟು ಷೆಡ್ಯೂಲ್ಡ್ ಕೋಮಿನವರಿಗೆ, ಬಡ ಜನಾಂಗಕ್ಕೆ ಸಹಾಯ ಮಾಡಲು, ಅಕ್ವಿಜಿಷನ್ ಮಾಡಬೇಕಾಗಿರುವ ಜಮೀನುಗಳನ್ನು ಜಾಗ್ರತೆ ಅಕ್ವೈರ್ ಮಾಡಿಸಿ ಜಾಗವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಬಾವಿಗಳಿಗೆ ಸಬ್ಸಿಡಿ ಕೊಡುವ ವಿಚಾರ.—ಸರ್ಕಾರದವರು ಇದಕ್ಕಾಗಿ ಕೋಟಿಗಟ್ಟಲೆ ದುಡ್ಡು ಕೊಟ್ಟಿದ್ದಾರೆ. ಆದರೆ ರೈತರ ಕಷ್ಟ ಅವರಿಗೆ ಗೊತ್ತಿಲ್ಲ. ಒಂದು ಬಾವಿಯ ಸಬ್ಸಿಡಿ ತೆಗೆದುಕೊಳ್ಳಬೇಕಾಗಿದ್ದರೆ, ಅವನು ಒಂದೆರಡು ವರ್ಷ ಸುತ್ತಬೇಕು, ಇಷ್ಟಾದರೂ ಒಂದು ಸಾವಿರ ರೂಪಾಯಿ ಸಬ್ಸಿಡಿ ಬಂದರೆ ಅವನ ಕೈಸೇರುವುದು 600 ರೂಪಾಯಿ ಮಾತ್ರ. 400 ರೂಪಾಯಿಗೆ ದೇವರೇ ಗತಿ. ಈ ರೀತಿ ಆಗುತ್ತಿದೆ. ನನ್ನ ಹತ್ತಿರ ನೂರಾರು ಜನ ಬರುತ್ತಾರೆ. ಯಾರಿಗೆ ಜವಾಬು ಹೇಳಬೇಕು. ನಮ್ಮ ಮಾನ್ಯ ಮಂತ್ರಿಗಳ ಹತ್ತಿರ ಹೇಳಿಕೊಂಡರೆ ಅವರು ಮನಸ್ಸಿಗೆ ತೆಗೆದು ಕೊಳ್ಳಲಿಲ್ಲ. ಆಗಲಿ ಎಂದು ನಾನು ಸುಮ್ಮನಿದ್ದೇನೆ.

3-30 P.M.

ಆಮೇಲೆ ಪೋಲೀಸು ಖಾತೆ ವಿಚಾರವಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಪೋಲೀಸು ಶಾಖೆಯವರು ಬಹಳ ಹಾವಳಿ ಮಾಡುತ್ತಿದ್ದಾರೆ. ಒಂದು ಕಂಪ್ಲೇಂಟು ಕೊಡಬೇಕಾದರೆ ೨೫ ಮೈಲಿ ದೂರ ಹೋಗಬೇಕು. ಹೋಗಿ ಕೊಟ್ಟರೂ ಏನೂ ಮಾಡುವುದಿಲ್ಲ. ಇದನ್ನೆಲ್ಲಾ ಸರಿಯಾಗಿ ಪರಿಶೀಲಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ. ಕಂಪ್ಲೇಂಟುಗಳನ್ನು ಕೊಟ್ಟರೂ ಸರಿಯಾಗಿ ವಿಚಾರಣೆ ಮಾಡೋಲ್ಲ. ಪೋಲೀಸಿನವರ ವರ್ತನೆ ಸರಿಯಾಗಿಲ್ಲ ಎಂದು ಹೈಕೋರ್ಟಿನವರು ಕೂಡ ಒಂದು ಕೇಸಿನಲ್ಲಿ ಹೇಳಿದರು ಎಂದು ಹಿಂದೆ ಪೇಪರಿನಲ್ಲೂ ಬಂದಿತ್ತು. ತಾವುಗಳೂ ಓದಿರಬಹುದು. ಪೋಲೀಸಿನವರ ವ್ಯವಹಾರಗಳು ಸರಿಯಾಗಿಲ್ಲ. ಪೋಲೀಸಿನವರು ಐದಾರು ಸೆಕ್ಷನ್ನುಗಳನ್ನು ಹಾಕಿ ಬಿಡುತ್ತಾರೆ. ಡಕಾಯಿತಿ, ಮರ್ಡರು ಇತ್ಯಾದಿ ಎಲ್ಲ ಸೇರಿಸಿ ಬಿಡುತ್ತಾರೆ. ಇದನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಸಾಲು ಮರಗಳು.—ಬನ್ನೇರು ಘಟ್ಟದ ರಸ್ತೆಯಲ್ಲಿ ನಾಲ್ಕು ಮರಗಳನ್ನು ನೋಡಬಹುದು. ಯಾರೋ ಹಿಂದೆ ಪೋಲೀಸು ಇಲಾಖೆಯಲ್ಲಿದ್ದವರು ಅಕೌಂಟೆಂಟ್‌ರಾಗಿದ್ದವರು, ಇದರ ಹಕ್ಕನ್ನು ಪಡೆದಿದ್ದರು ಎಂದು ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ಇದೆ. ಇದನ್ನು ಜೋಡಿ ಎಂದು ಮಾಡಿ ಅವರಿಗೆ ಕೊಡಲಾಗಿದೆ. ಈಗ ಇಲ್ಲಿರುವ ಮರಗಳನ್ನೇ ಕಡಿದು ಇಟ್ಟಿಗೆ ಗೂಡುಗಳಿಗೆ ಉಪಯೋಗಿಸುತ್ತಿದ್ದಾರೆ. ಇಲ್ಲಿ ಸಿಕ್ಕಿದವರೆಲ್ಲಾ ಮರ ಕಡಿಯುತ್ತಿದ್ದಾರೆ. ಮತ್ತು ರಸ್ತೆಗಳಲ್ಲೂ ದಿಮ್ಮಿಗಳು ಬಿದ್ದಿರುತ್ತವೆ. ಇದನ್ನೆಲ್ಲಾ ಸರಿಪಡಿಸಬೇಕೆಂದು ಪೋಲೀಸಿನವರಿಗೆ ಫೋನು ಮಾಡಿದ್ದರೂ ಏನು ಮಾಡಲಿಲ್ಲ. ಹೀಗಿದೆ ಪೋಲೀಸು ಇಲಾಖೆ.

ಇನ್ನು ಲಾರಿಗಳ ವಿಚಾರ ಸ್ವಲ್ಪ ಹೇಳಬೇಕಾಗಿದೆ.—ಲಾರಿ ಇಡುವವರು ಮೂರು ತಿಂಗಳಿಗೊಂದಾವರ್ತಿ ಎಂಟುನೂರು ಚಿಲ್ಲರೆಯಷ್ಟು taxನ್ನು ಕೊಡಬೇಕು. ಈ ರೀತಿ ಟ್ಯಾಕ್ಸು ಹೆಚ್ಚಾಗಿ ಕೊಡುತ್ತಿರುವುದರಿಂದ ಎಷ್ಟೋ ಜನ ಲಾರಿ ಮಾಲೀಕರು ಲಾರಿಯನ್ನು ಶೆಟ್ಟರ ಬಳಿ ಅಡಮಾನ ವಿಟ್ಟಿದ್ದಾರೆ. ಮುಕ್ಕಾಲು ಭಾಗ ಲಾರಿಯವರ ಪಾಡು ಹೀಗಿದೆ. ಏನೋ ಕಾಲು ಭಾಗದವರು ಲಾರಿ ಮಾಲೀಕರಾಗಿದ್ದಾರೆ. ಇವರು ಲಾರಿ ತೆಗೆದುಕೊಂಡು ಬೆಂಗಳೂರಿಗೆ ಬಂದರೆ ಲಾರಿ ಹಿಂದೆಯೇ ಅನೇಕ ಪೋಲಿಸು ಅಧಿಕಾರಿಗಳು ಬರುತ್ತಾರೆ. ಇವರ ಹಾವಳಿಯಿಂದ ಲಾರಿಯನ್ನು ನಡೆಸುವುದೇ ಕಷ್ಟವಾಗಿದೆ. ಅಲ್ಲದೇ ಈ ಲಾರಿಯವರನ್ನು first aid boxನಲ್ಲಿ ದಾರ ಇದೆಯೇ, ಸೂಜಿ ಇದೆಯೇ, ಹೀಗೆ ಚೆಕ್ ಮಾಡಿ, ಕೊನೆಗೆ ಏನೂ ಮಾಮೂಲು ದೊರೆಯದೇ ಹೋದರೆ 50-100 ರೂ. ಹೀಗೆ ಜುಲ್ಮಾನೆ ಹಾಕಿಸಲು ಪ್ರಯತ್ನ ಮಾಡುತ್ತಾರೆ. ಬ್ರೇಕು ಸರ್ಟಿಫಿಕೇಟು ತೆಗೆದುಕೊಳ್ಳಬೇಕಾದರೆ ನಾಲ್ಕೈದು ನೂರು ಖರ್ಚು ಮಾಡಿದ್ದರೂ ಸರ್ಟಿಫಿಕೇಟು ಕೊಡುತ್ತಿಲ್ಲ. ಈ ರೀತಿಯಾದ ಕಷ್ಟಗಳನ್ನು ಜನರಿಗೆ ಪೋಲೀಸರು ಕೊಡುತ್ತಿದ್ದಾರೆ. ಮತ್ತೆ ನನ್ನ ಮೇಲೆ ಒಂದು ಎಲೆಕ್ಷನ್ನು ಕೇಸು ಹೋಗಿದೆ. ಅದರ ವಿಚಾರವಾಗಿ ಸ್ವಲ್ಪ ಹೇಳಬೇಕಾಗಿದೆ.

ಅಧ್ಯಕ್ಷರು.— ಕೇಸಾಗಿ ಮುಗಿದಿದೆಯೋ ಹೇಗೆ?

ಶ್ರೀ ಡಿ. ಮುನಿಚಿನ್ನಪ್ಪ.—ಈ ಕೇಸಾಗುವಾಗ ಕೋರ್ಟಿನಲ್ಲಿ ಕೆಲವು ರೌಡಿಗಳನ್ನು ಕೂರಿಸಿದ್ದಾರೆ. ಈ ರೀತಿ ಮಾಡಬಾರದು ಎಂದು ನಾನು ಅಧಿಕಾರಿಗಳಿಗೆಲ್ಲಾ ತಿಳಿಸಿದ್ದರೂ ಇವೊತ್ತಿನವರೆಗೂ ಏನಾಗಲಿಲ್ಲ. ಮುಂದೆ ಏನಾಗುತ್ತೊ ಹೇಳುವುದಕ್ಕಾಗುವುದಿಲ್ಲ. ಈ ವಿಷಯವನ್ನು ಈ ಸಭೆಯ ಮುಂದೆ ತಿಳಿಯಲಿ ಎಂದು ಇಷ್ಟು ಹೇಳಿದ್ದೇನೆ.

ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise and meet again after half-an-hour.

The House adjourned for recess at Five Minutes past Three of the Clock and reassembled at Thirty-five Minutes past Three of the Clock.

[MR. DEPUTY SPEAKER in the Chair.]

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರಲ್ಲಿ ನನ್ನ ಒಂದು ಪ್ರಾರ್ಥನೆ. ಆಯವ್ಯಯದ ಅಂದಾಜು ಪಟ್ಟಿಯ ಮೇಲೆ ನಾವು ಮಾತನಾಡಬೇಕಾದುದು ಅಗತ್ಯ. ನಮ್ಮ ಅಭಿಪ್ರಾಯಗಳು ಬೇರೆ ಬೇರೆಯಾಗಿರುತ್ತವೆ. ಮತ್ತೆ ಆಡಳಿತ ಪಕ್ಷದವರು ಅದನ್ನು ಹೇಳುವುದಕ್ಕೆ ಬೇಕಾದಷ್ಟು ಅವಕಾಶಗಳಿರುತ್ತವೆ. ನಾವು ಎರಡು, ಮೂರು ದಿವಸಗಳಿಂದಲೂ ಕಾದಿದ್ದೇವೆ. ಹಿಂದೆ ಬೇರೆ ವಿಷಯದಲ್ಲಿ ನಾವು ಮಾತನಾಡಿರುತ್ತೇವೆಂದು ಹೇಳುವುದರಲ್ಲಿ ಸ್ವಲ್ಪ ಆತಂಕ, ಅಡ್ಡಿಯಾಗಿದೆ. ಅದರಿಂದ ನಮಗೂ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

Mr. DEPUTY SPEAKER.—I shall try to accommodate as many members as possible.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಮಾನ್ಯ ಸಭಾಪತಿಗಳೇ, ಈ ದಿವಸ ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ೬೩-೬೪ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮತ್ತು ಅದರ ಮೇಲೆ ಕೊಟ್ಟಿರತಕ್ಕ ವಿವರವಾದ ಭಾಷಣವನ್ನು ಕೇಳಿ ನಾನು ಈ ಸಂಧರ್ಭದಲ್ಲಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದಕ್ಕೋಸ್ಕರ ನಿಂತಿದ್ದೇನೆ. ಆ ಬಗ್ಗೆ ನನಗೆ ತಿಳಿದಿರತಕ್ಕ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ಮತ್ತು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸ್ವಾಮಿ, ಅನೇಕ ಅಂಕಿ ಅಂಶಗಳನ್ನೊಳಗೊಂಡಿರತಕ್ಕ ಒಂದು ದೊಡ್ಡ ನಿಘಂಟನ್ನು ಸರ್ಕಾರದವರು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಮುಖ್ಯವಾಗಿ ವ್ಯವಸಾಯದ ಬಗ್ಗೆ ಬಹಳ ದೀರ್ಘವಾದ ಅಂಕಿಅಂಶಗಳನ್ನು ನಮಗೆ ಕೊಟ್ಟಿದ್ದಾರೆ. ಇದಕ್ಕೋಸ್ಕರ ದೇಶದಲ್ಲಿ ವ್ಯವಸಾಯ ಮಾಡುವ ವ್ಯವಸಾಯಗಾರರಿಗೆ ಲೋನುಗಳನ್ನು ಮತ್ತಿತರ ಸೌಲಭ್ಯಗಳನ್ನು ಸರಕಾರ ಕೊಡತಕ್ಕದ್ದು ಮತ್ತು ಉತ್ತಮವಾದ ಬೀಜಗಳನ್ನು ಆಯಾ ಸಂದರ್ಭದಲ್ಲಿ ಬೆಳೆಯುವವರಿಗೆ ಹಂಚುವುದು, ಕಟ್ಟೆಗಳನ್ನು ರಿಪೇರಿ ಮಾಡಿಸಲಿಕ್ಕೆ ಸಬ್ ಸಿಡಿಗಳನ್ನು ಕೊಡುವುದು, ಸಹಕಾರ ಸಂಘಗಳ ಮೂಲಕ (Handling charge)ಗಾಗಿ ಸಬ್‌ಸಿಡಿ ಇತ್ಯಾದಿ ಅನೇಕ ತರಹದ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಹಾಗೂ ಇನ್ನೂ ಅನೇಕ ರೀತಿಯ ಸಾಲಗಳನ್ನು ವ್ಯವಸಾಯದ ಉತ್ಪತ್ತಿಗಾಗಿ ಕೊಟ್ಟಿರತಕ್ಕದ್ದು: ಇವೆಲ್ಲವನ್ನೂ ಗಮನವಿಟ್ಟು ನೋಡಿದ್ದೇನೆ. ಹಾಗೂ ಸರಕಾರದವರು ಸರಕಾರಿ ನೌಕರರಿಗೆ Dearness Allowance ಕೊಡತಕ್ಕ ರೂಪದಲ್ಲಿ, ಮತ್ತು ತೆರಿಗೆಗಳಾವುದನ್ನು ಹೊಸದಾಗಿ ವಿಧಿಸದೆ ಸರಳವಾದ ಬಡ್ಜೆಟ್ಟನ್ನು ನಮ್ಮ ಹಣ ಕಾಸಿನ ಮಂತ್ರಿಗಳು ಇಟ್ಟಿರುವುದಕ್ಕಾಗಿ ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ರೀತಿ ಅಭಿನಂದಿಸುತ್ತಾ ಇದರಲ್ಲಡಗಿರತಕ್ಕ ಹಿನ್ನೆಲೆಯನ್ನು ಸೂಕ್ಷ್ಮವಾಗಿ ನಾವು ಪರಿಶೀಲನೆ ಮಾಡಿ ನೋಡಿದರೆ reading between the lines ನಂತೆ ಸ್ವಲ್ಪ ಪರಿಶೀಲನೆಗೆ ಕಾಣಬರುವ ಕೆಲವಾರು ನ್ಯೂನತೆಗಳನ್ನು, ಆವಶ್ಯಕತೆಗಳನ್ನು ಸರಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಮಾನ್ಯ ಹಣಕಾಸಿನ ಸಚಿವರು ವ್ಯವಸಾಯ ಇಲಾಖೆಯ ವಿಷಯವಾಗಿ ದೀರ್ಘವಾಗಿ ತಿಳಿಸಿರುತ್ತಾರೆ. ವ್ಯವಸಾಯದ ಅಭಿವೃದ್ಧಿ ಬಹಳ ಚೆನ್ನಾಗಿ ಆಗಿದೆ, ಇಷ್ಟು ಎಕರೆಗಳಷ್ಟು ಸಾಗುವಳಿಯಾಗಿದೆ ; ಇಷ್ಟು ಉತ್ಪತ್ತಿ ಬಂದಿದೆ ; ಅನೇಕ ಸಾವಿರ ಲಕ್ಷ ಜನಗಳಿಗೆ ಅಭಿವೃದ್ಧಿ ಕೆಲಸಗಳಾಗಿದೆ ಎನ್ನುವ ಅಂಕಿ ಅಂಶಗಳನ್ನೆಲ್ಲಾ ಕೊಟ್ಟಿದ್ದಾರೆ.

ಅಂಕಿ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಹೆಚ್ಚು ಉತ್ಪತ್ತಿ ತೋರಿಸಿದರೆ ಗುರಿ ಸಾಧನೆ ಮಾಡಿದಂತಾಯಿತೇ ಎಂದು ಕೇಳುತ್ತೇನೆ. ಇಂಟೆನ್ಸಿವ್ ಕಲ್ಟಿವೇಷನ್ ನಡೆಯಬೇಕು. ಒಂದು ಎಕರೆ ಭೂಮಿಯಲ್ಲಿ 10 ಪಲ್ಲಾ 12 ಪಲ್ಲಾ ಬೆಳೆದು ತೋರಿಸಿದರೆ ಇಂಥ ಪ್ರಯೋಗಗಳಿಂದ ಏನೂ ಪ್ರಯೋಜನವಾಗುವುದಿಲ್ಲ. 10—20 ಎಕರೆ ಜಮೀನು ಹೆಚ್ಚಾಗಿ ಸಾಗುವಳಿಯಾಗಬೇಕು. ಸಾಕಷ್ಟು ಹೆಚ್ಚು ಜಮೀನು ಸಾಗುವಳಿಯಾಗಿಲ್ಲ. ಉತ್ತಮ ಬೀಜ ಗೊಬ್ಬರ ವ್ಯವಸಾಯಗಾರರಿಗೆ ಒದಗಿಸಿಕೊಡುವುದು ಅಗತ್ಯ. ಇದು ಸರಕಾರದ ಗಮನಕ್ಕೆ ಬರಬೇಕಾಗಿದೆ. ಒತ್ತಾಯಪೂರ್ವಕ ಒಂದು ವಿಚಾರ ಹೇಳುವುದೆಂದರೆ ಈ ಬಗ್ಗೆ ಚೆನ್ನಾಗಿ ಸಂಶೋಧನೆ ನಡೆಯಬೇಕು. ಅದಕ್ಕೆ ಪ್ರೋತ್ಸಾಹಬೇಕು. ಜನರು ದೇವಸ್ಥಾನಕ್ಕೆ ಭಯ ಭಕ್ತಿ, ವಿಶ್ವಾಸದಿಂದ ಹೋಗುವ ಹಾಗೆ ರೈತರು ರಿಸರ್ಚ್‌ಸೆಂಟರುಗಳಿಗೆ ಹೋಗಬೇಕು. ಸಂಶೋಧನೆ ನಡೆಸಿ ಕಂಡು ಹಿಡಿದ ಹೊಸ ಹೊಸ ಪ್ರಯೋಗಗಳ ವಿಚಾರವನ್ನು ರೈತರು ಕಲಿತುಕೊಂಡು ಜಮೀನು ಸಾಗುವಳಿಯಲ್ಲಿ ಸುಧಾರಣೆ ಮಾಡುವ ಆತ್ಮ ವಿಶ್ವಾಸ ಈ ಸಂಶೋಧನಾ ಕೇಂದ್ರಗಳಿಂದ ಉಂಟಾಗಬೇಕು. ಈಗ ಇರತಕ್ಕ

ರಿಸರ್ಚ್ ಸೆಂಟರಿನಲ್ಲಿ ರೈತ ಕಲಿತುಕೊಳ್ಳತಕ್ಕಂಥ ಸಂಗತಿ ಇಲ್ಲವೇ ಇಲ್ಲ. ಆದ್ದರಿಂದ ಈ ಸಂಶೋಧನಾ ಕೇಂದ್ರಗಳಲ್ಲಿ ಸಾಕಷ್ಟು ಸುಧಾರಣೆ ಮಾಡತಕ್ಕದ್ದು ಅಗತ್ಯ. ನಮ್ಮ ದೇಶದಲ್ಲಿ ವ್ಯವಸಾಯ ನಿಜವಾಗಿಯೂ ಅಭಿವೃದ್ಧಿಯಾಗಬೇಕಾಗಿದ್ದರೆ, ಪಂಚವಾರ್ಷಿಕ ಯೋಜನೆಯ ಪುಸ್ತಕಗಳಲ್ಲಿ ಮತ್ತು ಬಜೆಟ್‌ನಲ್ಲಿ ಭಾಷಣದಲ್ಲಿ ಪ್ರಥಮ ಪ್ರಾಮುಖ್ಯ ಕೊಡುವ ಹಾಗೆ, ರಿಸರ್ಚ್ ಬಗ್ಗೆ ಒಂದು ಚಾಪ್ಟರ್ ಬರೆದು ವ್ಯವಸಾಯದಲ್ಲಿಯ ಹೊಸ ಹೊಸ ಸ್ಕೀಮ್ಸ್ ವಿಷಯ, ರಿಸರ್ಚ ಮಾಡಿ ಏನೇನು ಪ್ರಗತಿ ಕಂಡು ಬಂದಿದೆ ಎನ್ನುವ ವಿವರಣೆ ಕೊಡಬೇಕು. ಇದಲ್ಲದೆ ಇನ್ನೊಂದು ಸೂಚನೆ ಮಾಡಲು ಬಯಸುತ್ತೇನೆ. ಅಗ್ರಿಕಲ್ಚರಲ್ ರಿಸರ್ಚ್ ಏನೇನು ನಡೆಯುತ್ತಾ ಇದೆ ಎಂಬುದಕ್ಕೆ ಪ್ರತಿವರ್ಷ ಒಂದು White Paper ಅಂದರೆ ಶ್ವೇತ ಪತ್ರ ಹೊರಡಿಸಬೇಕು ಎಂದು ಒತ್ತಾಯ ಪೂರ್ವಕ ಹೇಳ ಬಯಸುತ್ತೇನೆ.

ಇನ್ನು ಧಾರಣೆವಾಸಿಯ ಅಂಶ ಲೆಕ್ಕದ ರೂಪದಲ್ಲಿ ಹೇಳಿದ್ದಾರೆ. ಸರಕಾರಕ್ಕೆ ಅರಿಕೆ ಮಾಡಿ ಕೊಳ್ಳುವುದೇನೆಂದರೆ ಧಾರಣೆವಾಸಿ ಏರುತ್ತಿದ್ದರೆ ಅದು ಯಾವ ಮಟ್ಟದಲ್ಲಿ ಏರುತ್ತಿದೆ, ಇಳಿಯುತ್ತಿದ್ದರೆ ಯಾವ ಮಟ್ಟದಲ್ಲಿ ಇಳಿಯುತ್ತಿದೆ ಎನ್ನುವುದನ್ನು ಒಂದು ಆಧಾರದ ಮೇಲೆ ಹೇಳಬೇಕು. ಏನೋ ಹೆಚ್ಚು ಕಡಿಮೆಯಾಗಿದೆಯೆಂದು ಅಂದಾಜಿನ ಮೇಲೆ ಹೇಳುವುದು ಸರಿಯಲ್ಲ. ಇದನ್ನು ಶಾಸ್ತ್ರೀಯವಾಗಿ ತಿಳಿಸಬೇಕು. ಶಾಸ್ತ್ರೀಯವಾಗಿ ತಿಳಿಸುವುದಕ್ಕೆ ಅಗತ್ಯವಿರುವ ಅಂಕಿ ಅಂಶಗಳು ಸರಕಾರದಲ್ಲಿಲ್ಲ. ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಹೇಳಿದರೆ ಯಾರಿಗೂ ಪ್ರಶ್ನೆ ಮಾಡತಕ್ಕ ಅವಕಾಶವಿರುವುದಿಲ್ಲ. ಧಾರಣೆವಾಸಿ ಹೆಚ್ಚಾಗುತ್ತಿದೆ ಎಂಬ ಕೂಗು ಕೇಳಿಬರುವುದಿಲ್ಲ. ರಕ್ಷಣೆ ಕೊಡಿ ಎಂದು ಹೇಳಬೇಕಾಗಿಲ್ಲ. Cost of Production, ಮಾರ್ಕೆಟ್ ಪರಿಸ್ಥಿತಿ ಅನುಸರಿಸಿ ಕೊಂಡು ಹೋಗುತ್ತದೆ. ಬ್ಲಾಕ್ ಮಾರ್ಕೆಟ್ ಮಾಡುವುದಕ್ಕೆ ರಕ್ಷಣೆ ದೊರೆಯುವುದು ಸರಿಯಲ್ಲ. ಆದುದರಿಂದ ಇದನ್ನು ಶಾಸ್ತ್ರೀಯವಾಗಿ ಪರಿಶೀಲನೆ ಮಾಡಬೇಕಾದುದು ಅಗತ್ಯ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಬೆಲೆ ಗೊತ್ತು ಮಾಡುವುದು ನಮ್ಮ ರಾಜ್ಯ ಸರಕಾರವಲ್ಲ. ಅದು ಕೇಂದ್ರ ಸರಕಾರದ ವಿಷಯ. ಅವರು ಯಾವ ಆಧಾರದ ಮೇಲೆ ಪ್ರೈಸ್ ಗೊತ್ತು ಮಾಡುವರೋ ನನಗೆ ಗೊತ್ತಿಲ್ಲ.

ಶ್ರೀ ವಿ. ಮುನಿಯಪ್ಪ.—ಧಾರಣೆವಾಸಿ ಹೆಚ್ಚು ಕಡಿಮೆಯಾಗುವುದನ್ನು ಶಾಸ್ತ್ರೀಯವಾಗಿ ಹೇಳುವಂತಿರಬೇಕು. ಈ ಮನೋಭಾವ ಭಾರತ ಸರಕಾರಕ್ಕೆ ಬಂದಿದೆ. ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ಅವರು ದಕ್ಷಿಣ ವಲಯದ ಮೀಟಿಂಗಿನಲ್ಲಿ ಈ ಬಗ್ಗೆ ಸಂಶೋಧನೆ ನಡೆಸುವ ಸಲುವಾಗಿ ಕೊಯಮತ್ತೂರ ಸುತ್ತು ಮುತ್ತು ಸಂಶೋಧನೆ ನಡೆಸಿ ಅಂಕಿ ಅಂಶಗಳನ್ನು ಕಲೆ ಹಾಕುವ ಸಲುವಾಗಿ ಒಂದು ಯೋಜನೆ ಕಳುಹಿಸಿದ್ದಾರೆ. ಈ ಅಂಕಿ ಅಂಶಗಳ ಸಂಗ್ರಹಣೆ ನಡೆದರೆ ಇದರಿಂದ ಸರಕಾರಕ್ಕೆ ಕಷ್ಟವಾಗುತ್ತದೆ. ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿದಂತಾಗುತ್ತದೆ. ಸರಕಾರದಲ್ಲಿ ಒತ್ತಾಯ ಪೂರ್ವಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಅಂಕಿ ಅಂಶಗಳ ಆಧಾರವನ್ನು ಒದಗಿಸಿ ಕೊಡಬೇಕು. ವ್ಯವಸಾಯ ಇಲಾಖೆಯಲ್ಲಿ ಇದರ ಏರ್ಪಾಟು ಆಗಬೇಕು.

ಸ್ವಾಮಿ, ವ್ಯವಸಾಯ ಉತ್ಪಾದನೆ ಹೆಚ್ಚಿಸುವುದಕ್ಕೋಸ್ಕರ ಅನೇಕರು ಸಹಾಯ ಮಾಡುತ್ತಿದ್ದಾರೆ ಸುಧಾರಿತ ಯಂತ್ರೋಪಕರಣ ಒದಗಿಸತಕ್ಕಂಥದ್ದು ಅವಶ್ಯಕ. ಯಂತ್ರೋಪಕರಣ ಉಪಯೋಗಿಸದೆ ಇನ್ನು 50 ವರ್ಷ ವ್ಯವಸಾಯ ಮಾಡಿದರು ಸಹ ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಲಾಗುವುದಿಲ್ಲ. ವ್ಯವಸಾಯದ ಮೇಲೆ ಅವಲಂಬಿಸಿರುವ ಜನಸಂಖ್ಯೆ ಶೇ 70 ರಿಂದ ಶೇ 55ಕ್ಕೆ ಇಳಿಸುತ್ತೇವೆಂದು ಮೂರನೆ ಪಂಚವಾರ್ಷಿಕಯೋಜನೆಯಲ್ಲಿ ಹೇಳಿರುವುದು ಕಾರ್ಯಗತವಾಗಬೇಕಾದರೆ ವ್ಯವಸಾಯನ್ನು ಯಂತ್ರೀಕರಣ ಮಾಡುವುದು ಅತ್ಯವಶ್ಯಕ.

ಎಲ್ಲಿಯವರೆಗೇ ವ್ಯವಸಾಯದಲ್ಲಿರತಕ್ಕಂಥ ಜನಸಂಖ್ಯೆ ಕಡಿಮೆಮಾಡುವ ಬೇರೆ ಉಪಕಸುಬುಗಳನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಧಾರಣೆಗಳು ಏರುವುದು ಅನಿವಾರ್ಯ ಸಮಸ್ಯೆ. ಎಕರೇಜ್ ಯೀಲ್ಡ್ ಜಾಸ್ತಿ ಮಾಡುವುದಕ್ಕೋಸ್ಕರ ವ್ಯವಸಾಯ ಯಂತ್ರೋಪಕರಣಗಳನ್ನು ತಾಲ್ಲೂಕಿಗೆ ಹೆಚ್ಚಾಗಿ ಕೊಡಬೇಕು. ಈಗ ಸರ್ಕಾರದವರು ನೂರಾರು ಟ್ರಾಕ್ಟರುಗಳನ್ನು ಒದಗಿಸಿ ಕೊಡುವ ಆಲೋಚನೆ ಮಾಡಿದ್ದಾರೆಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ತಾವು ಕೊಡುವುದು 25—30 H. P. ಇರತಕ್ಕಂಥ ಟ್ರಾಕ್ಟರುಗಳು. ನೀವು ಒದಗಿಸುವ ಟ್ರಾಕ್ಟರುಗಳು ಪ್ರತಿ ವ್ಯವಸಾಯ ಕ್ಕೂ, ಅಂದರೆ ಕುಂಟೆ ಹೊಡೆಯುವುದಕ್ಕೆ, ಕಳೆ ತೆಗೆಯುವುದಕ್ಕೆ; ಕುಯಿಲು ಮಾಡುವುದಕ್ಕೆ, ಉಪಯೋಗಿಸುವ ಹಾಗಿರಬೇಕು. ಅನೇಕ ರೈತರು ತೆಗೆದು ಕೊಂಡ ಈ ಟ್ರಾಕ್ಟರುಗಳನ್ನು ಪಿ. ಡಬ್ಲ್ಯೂ. ಡಿ ಕಂಟ್ರಾಕ್ಟ್ ತೆಗೆದುಕೊಂಡು ಅದಕ್ಕೆ ಉಪಯೋಗಿಸುತ್ತಿದ್ದಾರೆ. ದೊಡ್ಡ ಟ್ರಾಕ್ಟರಿಂದ ನಮ್ಮ ರೈತನಿಗೆ ಉಪಯೋಗವಾಗಿಲ್ಲ. 5-10 H. P. ಒಳಗೆ ಇರುವ ಸಣ್ಣ ಟ್ರಾಕ್ಟರುಗಳನ್ನು ರೈತರಿಗೆ ಒದಗಿಸಬೇಕು. ಜಪಾನ್ ಮತ್ತಿತರ ದೇಶಗಳಲ್ಲಿ ಸಣ್ಣ ಟ್ರಾಕ್ಟರುಗಳನ್ನು ರೈತರಿಗೆ ಒದಗಿಸುತ್ತಿದ್ದಾರೆಂದು ಬೇರೆ ಕಡೆ ಅನುಭವ ಪಡೆದಿರುವ ಸ್ನೇಹಿತರಿಂದ ಕೇಳಿದ್ದೇನೆ ನೋಡಿ

(ಶ್ರೀ ವಿ. ಮಸಿಯಪ್ಪ)

ದ್ದೇನೆ. ನಮ್ಮ ರೈತರೂ ಅಂಥ ಟ್ರಾಕ್ಟರುಗಳನ್ನು 10—15, 20 ಎಕರೆ ವ್ಯವಸಾಯಕ್ಕೆ ಧಾರಾಳವಾಗಿ ಉಪಯೋಗಿಸಬಹುದು. ಎರಡು ಜೊತೆ ದೊಡ್ಡ ಎತ್ತುಗಳನ್ನು ಕಟ್ಟಿಕೊಳ್ಳುವುದಕ್ಕೆ ಬದಲಾಗಿ ಇಂಥ ಟ್ರಾಕ್ಟರುಗಳನ್ನು ಸಲೀಸಾಗಿ ಉಪಯೋಗಿಸಬಹುದು. ಈ ದೇಶದಲ್ಲಿ ಟ್ರಾಕ್ಟರುಗಳ ಉತ್ಪತ್ತಿಯಾಗದಿರುವುದರಿಂದ ಹೊರಗಡೆಯಿಂದ ತರಿಸುತ್ತಿರಾ. ಡಾಲರ್ ಏರಿಯಾದಿಂದ ತರಿಸುವುದು ಕಷ್ಟ.

ಸಾಫ್ಟ್ ಕರೆನ್ಸಿ ಏರಿಯಾದಿಂದ ತರಿಸಿ. ಇದೊಂದು ಅನುಕೂಲ ಮಾಡಿ ಕೊಡಿ ವ್ಯವಸಾಯದ ಉತ್ಪಾದನೆ ಜಾಸ್ತಿಯಾಗುತ್ತದೆಂದು ಈ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಈಗ ಸಣ್ಣ ಟ್ರಾಕ್ಟರುಗಳ ತಯಾರಿಗೆ ಬೋರ್ ಡ್ರಿಲ್ಲಿಂಗ್ ಮೆಷೀನ್ಸ್ ಕಂಪೆನಿಯವರು ಮುಂಬೈನೊಳಗೆ ಅವರದು ಒಂದು ಫ್ಯಾಕ್ಟರಿ ಮಾಡಿದ್ದಾರೆ? ಅದನ್ನು ರೈತರಿಗೆ ಕೊಡುವುದಕ್ಕೆ ಒಪ್ಪುತ್ತೀರ ?

ಶ್ರೀ ವಿ. ಮಸಿಯಪ್ಪ.—10—12 ಹಾರ್ಸ್‌ಪವರಿಯೊಳಗಿರುವ ಸಣ್ಣ ಟ್ರಾಕ್ಟರುಗಳನ್ನು ರೈತರಿಗೆ ಕೊಡಿ, ಯಾವ ಮೇಕೇ ಆಗಲಿ ನನ್ನ ಅಭ್ಯಂತರವಿಲ್ಲ. (I don't mind what make it is).

ಸಣ್ಣ ನೀರಾವರಿ ಯೋಜನೆಗಳಲ್ಲಿ ಸರ್ಕಾರದವರು ಒಂದು ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ. ದೇಶಾದ್ಯಂತ ಬಾವಿಗಳು, ವಿದ್ಯುಚ್ಛಕ್ತಿ ಮತ್ತು ಸಣ್ಣ ಕೆರೆಗಳನ್ನು ಕಟ್ಟುವುದಕ್ಕೋಸ್ಕರ ಬಹಳ ಹೆಚ್ಚಿನ ಸಹಾಯ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ನಾವೂ ನೋಡುತ್ತಾ ಇದ್ದೇವೆ. ಇದಕ್ಕೆ ಸರ್ಕಾರವನ್ನು ನಾನು ಮಾನಸಾರೆ ವಂದಿಸುತ್ತೇನೆ. ಅವರೇ ಹೇಳಿರುವ ಹಾಗೆ 1300 ಚಿಲ್ಲರೆ ಸಣ್ಣ ನೀರಾವರಿ ಕೆಲಸಗಳ ಜೊತೆಗೆ. ಇನ್ನೂ 1200 ಕೆಲಸಗಳಿಗೆ ಸರ್ವೆ ಎಸ್ಟಿಮೇಟ್ ಆಗಿ, ಪೆಂಡಿಂಗ್ ಇದೆಯೆಂದು ಹೇಳಿದ್ದಾರೆ. ಈಗಾಗಲೇ ಕೆಲಸವಾಗಿರತಕ್ಕಂಥದ್ದನ್ನು ನೋಡಿದರೆ ನಿರಾಶಾದಾಯಕವಾಗುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಉಳಿಯುವ ಕೆಲಸವನ್ನು ಯಾವಾಗ ಕೈಗೊಳ್ಳುತ್ತೀರ, ಯಾವಾಗ ಪೂರೈಸುತ್ತೀರ ಅನ್ನತಕ್ಕಂಥಾದ್ದು ನಮಗೆ ಸ್ವಲ್ಪ ಶಂಕೆಯಾಗಿದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ಈ ಜನವರಿ 26ನೇ ತಾರೀಖು ಒಂದು Drive ಅನೇಕ ಕ್ಷೇತ್ರಗಳಲ್ಲಿ ಈ ಸಣ್ಣ ಕೆಲಸಗಳ ಯೋಜನೆ ಕೆಗೆದುಕೊಂಡರು ಶಾಸನ ಸಭಾ ಸದಸ್ಯರಿಂದ ಮತ್ತು ಇನ್ನು ಇತರರಿಂದ ಕೆಲವು ಕೆರೆಗಳಿಗೆ ಗುದ್ದಲಿ ಪೂಜೆ ಮಾಡಿಸಿದರು. ಇವುಗಳಲ್ಲಿ ಯಾವು ಕಾರ್ಯ ರೂಪಕ್ಕೆ ಬರುತ್ತವೆ ಅನ್ನತಕ್ಕಂಥಾದ್ದನ್ನು ಯೋಚನೆ ಮಾಡಬೇಕಾಗಿದೆ. ಆದರೆ ಅವುಗಳೆಲ್ಲವೂ ಬಹಳ ಅಗತ್ಯವೆಂದು ಯೋಚಿಸಿ, ತಾವೇನೋ ಬಜೆಟ್ ಭಾಷಣದಲ್ಲಿ ಹೇಳಿದಿರಿ "ಕೇಂದ್ರ ಸರ್ಕಾರವನ್ನು 1. $1\frac{1}{2}$ ಕೋಟಿರೂಪಾಯಿ ಹೆಚ್ಚು ಹಣವನ್ನ ಕೊಡಿ ಎಂದು ಒತ್ತಾಯಮಾಡಿದ್ದೇವೆಂದು. ನಾವು ಈ ಯೋಜನೆಗಳನ್ನು ಕಾರ್ಯಗತ ಮಾಡುವಂತೆ ಕೇಂದ್ರ ಸಹಾಯ ಬರುವಂತೆ ಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ ; ತಮ್ಮ ಒತ್ತಾಯದ ಫಲಿತಾಂಶ ಈ ಹೆಚ್ಚಿನ ನೆರವು ಸಿಗುವಂತಾಗಲಿ. ಕೇಂದ್ರ ಸರ್ಕಾರದಿಂದ ಈ ಹಣ ದೊರೆಯಲೇ ಬೇಕು.

Mr. DEPUTY SPEAKER.—The Hon'ble members time is up.

ಶ್ರೀ ವಿ. ಮಸಿಯಪ್ಪ.—ರಾಜ್ಯಪಾಲರ ಭಾಷಣದ ಮೇಲೆಯೂ ನಾನು ಭಾಷಣ ಮಾಡಲಿಲ್ಲ. ಡಿಮ್ಯಾಂಡುಗಳ ಮೇಲೆಯೂ ಮಾತನಾಡುವ ಹಾಗಿಲ್ಲ.

ಉಪಾಧ್ಯಕ್ಷರು.—ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ಬೇಗ ಮುಗಿಸಿ.

ಶ್ರೀ ವಿ. ಮಸಿಯಪ್ಪ.—ಕೃಷ್ಣ-ಗೋದಾವರಿ ನೀರಿನ ಹಂಚಿಕೆ ವಿಚಾರದಲ್ಲಿ ಸಾಕಷ್ಟು ಚರ್ಚೆನಡೆದಿದೆ. ನಾನು ಆದ್ದರಿಂದ ಹೆಚ್ಚಿನ ಭಾಷಣಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ಇದರಲ್ಲಿ ಆಸಕ್ತಿ ಇವೆ. ಕೃಷ್ಣ ನೀರಿನ ಸರಿಯಾದ ಭಾಗ ಮೈಸೂರಿಗೆ ಸಿಗಬೇಕಾದ್ದು ನ್ಯಾಯ. ಕೃಷ್ಣೆಗೂ ವೇದಾವತಿಗೂ ನಡುವೆ ಜನತೆ ಹಳ್ಳಬರುತ್ತದೆ. ಬರೀ ಲಕ್ಕವಳ್ಳಿ ಭಾಗದ ಹೆಚ್ಚುವರಿ ನೀರನ್ನು ತಂದು ಕೊಟ್ಟರೆ ಸಂಸ್ಥಾನದ ಅರ್ಧಕ್ಕಿಂತ ಹೆಚ್ಚು ಭಾಗ ಅಭಾವಕ್ಕೆ ಒಳಗಾಗಿರುವುದರಲ್ಲಿ ಕೆಲವು ಭಾಗಕ್ಕಾದರೂ ಸೌಲಭ್ಯವನ್ನು ಒದಗಿಸಿಕೊಟ್ಟಂತಾಗುತ್ತದೆಂದು ಈ ಸಂಧರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಒಂದನೆಯದಾಗಿ ಕಾವೇರಿ ನದಿ ನೀರಿನ ವಿಷಯ. ನಾವು 1974 ರ ಹೊತ್ತಿಗೆ ನಮ್ಮ ಭಾಗಕ್ಕೆ ಎಷ್ಟು ನೀರು ಬರಬೇಕೋ ಅಷ್ಟನ್ನು ಉಪಯೋಗಿಸಬೇಕು, ಉಪಯೋಗಿಸದೆ ಹೋದರೆ ಎಲ್ಲಾ ಮದ್ರಾಸಿಗೆ ಪೂರ್ಣವಾಗಿ ಹೋಗುತ್ತದೆ. ಹಿಂದೆ ವಾಣಿ ವಿಲಾಸ ಸಾಗರ ಕಟ್ಟಬೇಕಾದ್ದರೆ, ಎಗಚಿ ನದಿ ನೀರನ್ನು ತಿರುಗಿಸಿ ಮುಂದಕ್ಕೆ ಸೌಲಭ್ಯ ಮಾಡಿಕೊಡಬೇಕೆಂದು ಹೇಳಿದ್ದಾರೆ ; ಹಾಸನ ಡಿಸ್ಟ್ರಿಕ್ಟಿನವರು ಇದನ್ನು ಕೇಳುತ್ತಾ ಇದ್ದಾರೆ. ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ನಾವು ಕೇಳುತ್ತಾ ಇದ್ದೇವೆ. ಇದರಿಂದ ಇನ್ನು ಅನೇಕರಿಗೆ ಹೆಚ್ಚು ಸೌಲಭ್ಯ ಕೊ ತ ಆಗುತ್ತದೆ.

ಈ ಡ್ಯೆರಿ ಫಾರವುುಗಳ ವಿಚಾರದಲ್ಲಿ ಬಹಳ ಮಾತನಾಡಬೇಕೆಂಬ ಇಷ್ಟವಿದೆ. ಆದರೆ ಟೈಮು್‌ ಇಲ್ಲದಿರುವುದರಿಂದ. ಈಗ ಒಂದು ಮುಖ್ಯವಾದ ವಿಷಯವನ್ನು ಹೇಳುತ್ತೇನೆ. ಫಿಷರೀಸ್‌ನಲ್ಲಿ marine fishery ಗೆ ಸರ್ಕಾರ ಹೆಚ್ಚು ಆಸಕ್ತಿ ವಹಿಸುತ್ತದೆ. ಅದಕ್ಕಿಂತ inland fishery ಗೆ ಹೆಚ್ಚು ಆಸಕ್ತಿ ವಹಿಸಬೇಕಾದ್ದು ಆಗತ್ಯ. ಏಕೆಂದರೆ ವಾಣಿ ವಿಲಾಸ ಸಾಗರದಲ್ಲಿ ಮೊನ್ನೆ ಮೀನನ್ನು 2—3 ತಿಂಗಳ ಕಾಲ ಹಿಡಿದು ಕಲ್ಕತ್ತಾಕ್ಕೆ ಕಳುಹಿಸಿದರು ಕಲ್ಕತ್ತಾದಲ್ಲಿ ಸಮುದ್ರದ ಸೌಲಭ್ಯವಿದ್ದರೂ ನಮ್ಮ ಕಡೆಯ ಮೀನಿಗೆ ಹೆಚ್ಚು ಗಿರಾಕಿ, ಧಾರಣೆ ಇದೆ. ಏಕೆಂದರೆ ಅಕಸ್ಮಾತ್ತಾಗಿ ಸಮುದ್ರದ ನೀರಿಗೆ ಅಟಾಮಿಕ್ ರೇಡಿಯೇಷನ್ನಿನ ದುಷ್ಪರಿಣಾಮುಗಳು ಆಗಿರಬಹುದೆಂದು. ಆದ್ದರಿಂದ inland ಫಿಷರೀಸಿಗೆ ಹೆಚ್ಚು ಪ್ರೋತ್ಸಾಹ ಕೊಡುವುದು ಆಗತ್ಯ.

ಆ ಮೇಲೆ ಮೊನ್ನೆ ನಮ್ಮ ಸ್ನೇಹಿತರಾಗಿರತಕ್ಕಂಥ ಶ್ರೀ ಮಾರ್ಲ ಗೌಡರು ಈ ಸಭೆಯ ಮುಂದೆ ಮಾತನಾಡುತ್ತಾ ಚಿತ್ರದುರ್ಗ ಜಿಲ್ಲೆಯ ಆಡಳಿತದ ಬಗ್ಗೆ ಮತ್ತು ಜಿಲ್ಲಾಧಿಕಾರಿಗಳ ಬಗ್ಗೆ ಒಂದೆರಡು ಮಾತುಗಳನ್ನು ಪ್ರಸ್ತಾಪಮಾಡಿದರು. ಅದರಲ್ಲಿ ನಮ್ಮ ತಾಲ್ಲೂಕಿನ ಒಂದು ಘಟನೆಯನ್ನು ಕೂಡ ಈ ಸಂದರ್ಭದಲ್ಲಿ ಅವರು ಹೇಳಿದರು. ಅದಕ್ಕೋಸ್ಕರವಾಗಿ ಈ ಬಗ್ಗೆ ಒಂದೆರಡು ಮಾತುಗಳನ್ನು ಹೇಳತಕ್ಕಂಥಾದ್ದು ನನ್ನ ಕರ್ತವ್ಯವೆಂದು ಭಾವಿಸಿ ಹೇಳಬೇಕಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು, Dy. Minister for Co-operative, ಮತ್ತು ಪಾರ್ಲಿಮೆಂಟರಿ ಸೆಕ್ರೆಟರಿಯವರು ಹಣ ವಸೂಲಮಾಡತಕ್ಕಂಥ ಸಂಧರ್ಭದಲ್ಲಿ ನಮ್ಮ ತಾಲ್ಲೂಕಿನಲ್ಲಿ, ನಾನು ಕೂಡ ಇದ್ದೆ. ಯಾವ ವಿಧವಾದಂಥ ಅಪಾದನೆಗಳಿಗೆ ಒಳಗಾಗುವಂಥ ಸನ್ನಿವೇಶ ಈ ಹಣ ವಸೂಲಿಮಾಡುವುದರಲ್ಲಿ ನಡೆದಿಲ್ಲ ಎಂದು ನಾನು ಇವತ್ತು ಹೇಳಬೇಕಾಗಿದೆ. ಎರಡನೆಯದಾಗಿ ಚಿತ್ರದುರ್ಗ; ಹೊಸದುರ್ಗ, ಹೊಳಲ್ಕೆರೆ ಮತ್ತು ಚಳ್ಳಕೆರೆ ಪ್ರಾಂತ್ಯಗಳಲ್ಲಿ ಹಣ ಸಂಗ್ರಹಣೆ ಮಾಡಿದೆವು, ನಮ್ಮ ವಿರೋಧ ಪಕ್ಷಗಳ ಸ್ನೇಹಿತರೇ ಜಿಲ್ಲಾಧಿಕಾರಿಗಳಿಂದ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಹಣ ವಸೂಲಿ ನಡೆದಿದೆ ಎಂದು ಹೇಳಿದ್ದನ್ನು ಅವರ ಬಾಯಿನಿಂದಲೇ ಕೇಳಿದ್ದೇವೆ.

[MR. SPEAKER in the Chair]

ಆದಿವಾಳ ದೇವಸ್ಥಾನದ ಭಂಗಾರವನ್ನು ತೆಗೆದುಕೊಂಡು ಹೋದರು ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಆ ದೇವಸ್ಥಾನದ ಪೂಜಾರಿಗಳು, ವಹಿವಾಟುದಾರರೂ ತಾವೇ ಸ್ವೇಚ್ಛೆಯಿಂದ ಕೊಟ್ಟೆವೆಂದು ಹೇಳಿದ್ದನ್ನು ಅವರ ಬಾಯಿನಿಂದಲೇ ಕೇಳಿದೆ. ಅವರೇ ಯಾವ ವಿಧವಾದ ಕಡ್ಡಾಯವನ್ನು ಉಪಯೋಗಿಸದೆ, ಸಂತೋಷವಾಗಿ ಬೆಳ್ಳಿ ಭಂಗಾರವನ್ನು ತೆಗೆದುಕೊಂಡು ಹೋಗಿ ಎಂದು ಕೊಟ್ಟರು.

ಆದ್ದರಿಂದ ಈ ಸಭೆಯಲ್ಲಿ ಇಲ್ಲದೇ ಇರತಕ್ಕ ಅಧಿಕಾರಿಗಳ ಬಗ್ಗೆ ಆಪಾದನೆ ಮಾಡುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಿ ಹೇಳುವುದು ಸೂಕ್ತ ಎಂದು ಭಾವನೆ ಮಾಡುತ್ತೇನೆ.

Sri B. L. GOWDA.—Sir, if my friend yields, for a minute, I am prepared to substantiate my allegations.

4-00 P.M.

ಅವರು ತಯಾರಾಗಿದ್ದರೆ ಎಂಕ್ವೈರಿ ಕಮಿಟಿ ಮಾಡಬಹುದು. ಸುಮ್ಮ ಸುಮ್ಮನೆ ಹೇಳಿದರೆ ಏನು ಪ್ರಯೋಜನ?

Sri K. LAKKAPPA.—If my friend with yield...

Mr. SPEAKER.—I am not permitting him to yield. He has already taken half-an-hour.

ಶ್ರೀ ವಿ. ಮಸಿಯಪ್ಪ.—ಅವರು ಎಷ್ಟು ಮಟ್ಟಿಗೆ substantiate ಮಾಡುವುದಕ್ಕೆ ತಯಾರಾಗಿದ್ದಾರೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ substantiate ಮಾಡಲಿಕ್ಕೆ ನಾನು ತಯಾರಾಗಿದ್ದೇನೆ.

ಡಿಪ್ರೆಸ್ಡ್ ಕ್ಲಾಸ್‌ನವರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ ಒಂದು ವಿಚಾರ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಇತ್ತೀಚೆಗೆ ಸರ್ಕಾರದವರು ಒಂದು ಆರ್ಡರ್ ಹೊರಡಿಸಿದ್ದಾರೆ. ಸೋಷಿಯಲ್ ವೆಲ್‌ಫೇರ್ ಮಿನಿಸ್ಟರು, ಫಾರೆಸ್ಟ್ ಮಿನಿಸ್ಟರು ಮತ್ತು ಡೆಪ್ಯೂಟಿ ಮಿನಿಸ್ಟರು ಸೋಷಿಯಲ್ ವೆಲ್‌ಫೇರ್ ಅಂಡ್ ಪ್ಲಾನಿಂಗ್ ಇವರೆಲ್ಲರೂ ಇರತಕ್ಕ ಒಂದು ಸಭೆಯಲ್ಲಿ ಕೈಕೊಂಡಿರುವ ತೀರ್ಮಾನ ಅದು ಎಂದು ಹೇಳಿದ್ದಾರೆ. ತಾಲ್ಲೂಕಿನ ತಹಸೀಲ್‌ದಾರರು, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು, ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರು ಈ ಮೂರು ಜನ ಇರತಕ

(ಶ್ರೀ ವಿ. ಮಸಿಯಪ್ಪ)

ಒಂದು ಸಮಿತಿಯವರು ತಾಲ್ಲೂಕಿನಲ್ಲೆಲ್ಲಾ ಸಂಚಾರ ಮಾಡಿ ಎಷ್ಟೆಷ್ಟು ಜನರಿಗೆ ಮನೆ ಇಲ್ಲ ಎಂಬ ವರದಿಯನ್ನು 6 ತಿಂಗಳೊಳಗೆ ಸರ್ಕಾರದವರಿಗೆ ಕಳುಹಿಸಬೇಕೆಂದೂ ಆ ನಂತರ ಆ ಮನೆಗಳಿಗೆ ದುಡ್ಡು ಕೊಡಲಾಗುವುದು ಎಂದೂ ಹೇಳಿದ್ದಾರೆ. ಈ ಆರ್ಡರ್ ಬಂದು ಎರಡು ಮೂರು ತಿಂಗಳಾಗಿದೆ. ಇನ್ನೂ ಯಾವ ವಿಧವಾದ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆ ವರದಿ ಬರುವುದು ಎಂದು ? ಈ ವರ್ಷದಲ್ಲಿ ಆ ಮನೆಗಳಿಗೆ ದುಡ್ಡು ಒದಗಿಸುವುದಕ್ಕೆ ಸಾಧ್ಯವೆ ? ಎಂಬುದನ್ನು ಮಾತ್ರ ತಿಳಿಸುತ್ತಾ ಇದ್ದೇನೆ.

ಸ್ವಾಮಿ ಹಿರಿಯೂರು ತಾಲ್ಲೂಕಿನಲ್ಲಿ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಸುಮಾರು 6-7 ವರ್ಷಗಳಿಂದ ಜಾರಿಯಲ್ಲಿತ್ತು ಈಗೇನು ಇದೆಯೋ ಇಲ್ಲವೋ ಗೊತ್ತಿಲ್ಲ. ತಾವು ಕೊಟ್ಟಿರತಕ್ಕ ವರದಿಪ್ರಕಾರ ಜಾರಿಯಲ್ಲಿದೆ, ಕೆಲವು ಯೋಜನೆಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಆಲೂರು, ಯಳನಡು, ಹೆಮಡಾಳು ಈ ಮೂರು ಕಡೆಯೂ ಈ ಬಗ್ಗೆ Estimate ಮಾಡಿದ್ದೀರಿ. ಗ್ರಾಮದವರು ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅಷ್ಟಾದರೂ ಆ ಯೋಜನೆ ಮುಂಜೂರಾಗಿಲ್ಲ 4-5 ವರ್ಷದಿಂದ ಪೆಂಡಿಂಗ್‌ನಲ್ಲಿದೆ. ಪರಿಶೀಲನೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು....

†**Sri V. S. PATIL.**—(Belgaum-I) On a point of order: Sir, we are discussing the Budget under rule 163 of the Rules of Procedure. That rule is quite specific and it reads that the Assembly has an opportunity to discuss the budget as a whole or any question of principle involved therein. According to the Practice and Procedure of the Indian Parliament on page 427 by S. S. MORE: an instance is given:

> "During the general discussion of the Budget on Railways on the 26th May 1952, the Member proceeded to refer to specific grievance. The Speaker intervening observed that the General Discussion must be utilised for making a general survey of the administration which would be in order and members would be wasting their time practically by referring to specific grievances which can be legitimately done when the Demands for Grants come up."

Here Sir, I am listening to the Member's speeches carefully...

Mr. SPEAKER.—The speech of only this particular member of all Members ?

Sri V. S. PATIL.—Of all Members Sir. I am raising this point of order in respect of all such speeches. Everybody is almost referring to a specific grievance of his village of his taluk, of his block or of his district; any particular instance of a Department, budget to have been referred to at the time of Demands for Grants. On this discussion as I said, all these rules are observed in breach. That is why I have raised this point of order and I want a specific ruling on this point in order to curtail the wasting time of this House.

Mr. SPEAKER.—I entirely agree with the Hon'ble Member Sri V. S. Patil that the procedure is very clear, explicit and unequivocal. But I must enforce it very strictly in which case every Member will tear me to pieces: Not only this rule, but there are several other rules which I will enforce...

Sri V. S. PATIL.—Otherwise, why should there be these rules ?

Sri V. M. DEO.—(Gubbi) If this rule had been observed strictly. I would have got more time, Sir.

Mr. SPEAKER.—I am more than doubtful whether the Hon'ble member would have got any time at all.

Sri Masiyappa may kindly conclude.

ಶ್ರೀ ವಿ. ಮಸಿಯಪ್ಪ.—ವಿದ್ಯಾಭ್ಯಾಸದ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ರಾಜ್ಯಾಂಗದ ಪ್ರಕಾರ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಎಲ್ಲಾ ಕಡೆಯಲ್ಲೂ ಜಾರಿಗೆ ಕೊಟ್ಟಿದ್ದೀರಿ. ಇವತ್ತು ಏನು ನಡೆಯುತ್ತಾ ಇದೆ ಎಂದರೆ ಸ್ಕೂಲು ದೊಡ್ಡದು ಆಗುತ್ತಾ ಇದೆ. ಸಾಕಾದಷ್ಟು ಉಪಾಧ್ಯಾಯರ ಸಂಖ್ಯೆ ಇಲ್ಲ. ಈ ವ್ಯವಸ್ಥೆ ಮಾಡಿ ಎಂದು ಹೋದ ಬಡ್ಜೆಟ್ ಕಾಲದಿಂದಲೂ ಹೇಳುತ್ತಾ ಇದ್ದೇವೆ. ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿ ಅಂತ ಮಾಡಿ ಚಿತ್ರದುರ್ಗ, ಬೆಂಗಳೂರು ಡಿವಿಜನ್‌ನಲ್ಲಿ 12,000 ಅರ್ಜಿಗಳು ಬಂದವು, 2000 ಉಮೇದುವಾರರನ್ನು ಚುನಾಯಿಸಬೇಕು. 6 ತಿಂಗಳು ಕುಳಿತುಕೊಂಡರೂ ಆಗುವುದಿಲ್ಲ ಎಂದು ಡಿವಿಜನಲ್ ಕಮೀಷನರು ಹೇಳುತ್ತಾರೆ. ಹೀಗಿರುವಾಗ ಇವತ್ತಿಗೂ ಸಾಕಾದಷ್ಟು ಉಪಾಧ್ಯಾಯರನ್ನು ಕೊಡುವುದಕ್ಕೆ ಯಾವ ವಿಧವಾದ ಬದಲಿ ಏರ್ಪಾಡನ್ನೂ ಮಾಡದೇ ಇರುವುದು ಬಹಳ ಯೋಚನೆಮಾಡಬೇಕಾದ ವಿಚಾರವಾಗಿದೆ. ಅಲ್ಲದೆ 7-8ನೇ ತರಗತಿ ವಿದ್ಯಾರ್ಥಿಗಳು ಮುಂದಿನ ವರ್ಷ ಹೈಸ್ಕೂಲಿಗೆ ಬರುತ್ತಾರೆ. ಆಗ ಈ ಸಂಖ್ಯೆ ಒಂದಕ್ಕೆ 2ರಷ್ಟಾಗುತ್ತದೆ. ಅಂತಹ ಸಂದರ್ಭದಲ್ಲಿ ಸಾಕಾದಷ್ಟು ಹೈಸ್ಕೂಲುಗಳನ್ನು ಒದಗಿಸುವುದಕ್ಕೆ ಏನು ಮಾಡಿದ್ದೀರಿ ಎಂಬುವನ್ನು ಬಡ್ಜೆಟ್ ಭಾಷಣದಲ್ಲಾಗಲೀ, ಅಂಕಿ ಅಂಶಗಳಲ್ಲಾಗಲೀ ತಿಳಿಸಿಲ್ಲ. ಅಷ್ಟೇ ಅಲ್ಲ ಹಿಂದಿನ ಸಾಲಿನಲ್ಲಿ ಕೊಟ್ಟಿರತಕ್ಕ 40-43 ಹೈಸ್ಕೂಲುಗಳಿಗೆ ಗ್ರಾಂಟ್ ಇನ್-ಏಡ್ ಕೊಟ್ಟಿಲ್ಲ. ಮುಂದೆ ಪ್ರಾರಂಭವಾಗತಕ್ಕ ಹೈಸ್ಕೂಲುಗಳ ಪರಿಸ್ಥಿತಿ ಏನಾಗುತ್ತದೆ ಎಂಬ ವಿವರಣೆ ಕೊಟ್ಟಿಲ್ಲ. ಅಥವಾ ಗ್ರಾಂಟ್-ಇನ್-ಏಡ್ ಸಿಕ್ಕುತ್ತದೆ ಎಂಬ ಭರವಸೆಯನ್ನು ಕೂಡ ಕೊಟ್ಟಿಲ್ಲ. ಇದನ್ನು ವಿದ್ಯಾಮಂತ್ರಿಗಳು ತೀವ್ರವಾಗಿ ಗಮನದಲ್ಲಿಟ್ಟುಕೊಂಡು ಬೇಕಾಗುವಷ್ಟು ಹಣವನ್ನು ಹಣಕಾಸಿನ ಮಂತ್ರಿಗಳಿಂದ ಪಡೆದು ತಕ್ಕ ಸೌಲಭ್ಯ ಒದಗಿಸಲೇಬೇಕೆಂದು ಕಡ್ಡಾಯವಾಗಿ ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರಿಗೆ ನನ್ನ ಧನ್ಯವಾದವನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I said I will give my ruling at 4 O'Clock.

Sri S. M. KRISHNA.—(Rose to speak).

Mr. SPEAKER.—I have already communicated my reply.

Sri S. M. KRISHNA.—You are calling upon the Education Minister to make a statement to this House with reference to this particular question. The House has got to infer what the matter is. So, I think I would well within......

Mr. SPEAKER.—I will follow the procedure. The only thing is that the reply is given to you a little early.

†**Sri S. R. KANTHI** (Minister for Education).—Sir, in this respect, already the Hon'ble Chief Minister has given a reply that what has been said by me is no deviation from the policy of education in our State. In fact, Sir, I am surprised to know that the statement that I have made now which is a repetition of the statement made in the past, should assume such importance.

Mr. SPEAKER.—I am more concerned with what is called a breach of privilege. Otherwise it does not concern me.

ಶ್ರೀ ಎಸ್. ಗೋಪಾಲಗೌಡ.—ಸಭೆಯ ಮುಂದೆ ವಿಷಯ ಏನು ನಡೆಯುತ್ತಾ ಇದೆ ?

Mr. SPEAKER.—I do not allow a person who has no patience to disturb the proceedings.

ಶ್ರೀ ಎಸ್ ಗೋಪಾಲಗೌಡ.—Patience ಇದೆ ಸ್ವಾಮಿ, ತಾವು ಅದರೂ ಹೇಳಿ! ವಿಷಯ ಏನು ಎಂಬುದನ್ನು ತಾವು ಹೇಳಬೇಕು.

Mr. SPEAKER.—I will do it in a proper way not as per the dictation of any member.

ಶ್ರೀ ಎಸ್. ಗೋಪಾಲಗೌಡ.—ಯಾವ ರೂಲ್ ಪ್ರಕಾರ ಅವರಿಗೆ ಅವಕಾಶ ಕೊಟ್ಟಿದ್ದೀರಿ. ಏನು ವಿಷಯ ? ನನಗೆ ಗೊತ್ತಾಗಬೇಕೋ ಇಲ್ಲವೋ ?

Mr. SPEAKER.—The Hon'ble Member will kindly resume his seat.

(SRI GOPALA GOWDA persisted in standing)

Mr. SPEAKER.—When I am on my legs, if he still stands up again, I think I will have to enforce the rule.

He is dictating and saying that I must tell him what is happening and till then he will not allow me to proceed.

Sri S. GOPALA GOWDA.– Am I not entitled to know what is going on in the House ?

Mr. SPEAKER.—He is entitled to know but he is not here to cross-examine the Speaker. If he does not understand, he must ask for clarification.

ಶ್ರೀ ಎಸ್. ಗೋಪಾಲಗೌಡ.—ವಿಷಯ ಏನೆಂಬುದೇ ಗೊತ್ತಿಲ್ಲದಿರುವಾಗ ನಾವು ಕೇಳಿ ತಿಳಿದುಕೊಳ್ಳುವುದಾದರೂ ಹೇಗೆ ?

ಅಧ್ಯಕ್ಷರು.—ಅವರೀಗ ಹೇಳುತ್ತಾರೆ, ತಿಳಿದುಕೊಳ್ಳಿ. ಆಗಲೂ ಗೊತ್ತಾಗದಿದ್ದರೆ ಕೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟೆಲ್ಲ ಮಾಡುವುದಕ್ಕೆ ಬದಲಾಗಿ ಆ ವಿಷಯ ಏನೆಂಬುದನ್ನು ಹೇಳಿಬಿಟ್ಟಿದ್ದರಾಗಿತ್ತು. ಇಷ್ಟು ವ್ಯಥೆಪಡಬೇಕಾದ್ದೇ ಇರಲಿಲ್ಲ.

Mr. SPEAKER.—What has the Hon'ble Minister for Education got to say about the privilege motion ?

‡ **Sri S. R. KANTHI.**—Sir, the substance of the motion is that the Hon'ble Minister has made a statement recently about handing over Government colleges and schools to the private agencies.

Sir, I have nowhere stated that the Government would hand over colleges and schools to private agencies and the motion that has been tabled is not correct. I have only repeated what the past Government *i.e.* Jatti's Government had stated already. I have been repeating it times without number and the repetition, I suppose, is not making a fresh statement of policy. It is not correct on the part of the members to have tabled this; they ought to have consulted me in this matter before tabling such a motion. Sir, when I had the honour to occupy the Chair which you are occupying now, I have given a ruling to the effect that a statement of a policy made outside the House when the House is sitting is not a breach of privilege. But, it is not wise for any Minister to make a statement outside the House on important matters and matters of policy when the session is going on. I refute both the charges.

Chair's ruling *re*: statement made by Minister for Education outside the House when the house is in session.

Mr. SPEAKER.—Now, I would like to remind the House that I have said many times that Members should follow as to what is going on in the House. A couple of days ago, Sriyuths Krishna and Lakkappa raised a point of order saying that the Hon'ble Minister for Education had made a very important statement outside the House when the Assembly was in session. I directed them to put it in writing and also said that if there was anything that they wanted to invoke, they might

do so. They gave notice to me and after that they raised it on the floor of the House. All this must be within the knowledge of every Hon'ble Member of this house. If a member is not present and if he cannot follow what is going on, he must listen and understand what things are happening in the House. The House may also remember that this morning I said that I would give my ruling at 4 O'clock and also directed the Hon'ble Finance Minister to convey my request to the Education Minister to be present. He is here. At this stage, I have called upon him. Now the Member gets up and says as to what is going on in the House, that he wants to know and till that is made known to him, he will not allow the proceedings. This is not at all a healthy attitude. I request the Hon'ble Members to co-operate with me. I am trying to co-operate with every one of them. I have been ever-looking some of the rules in order that more opportunities are given to Members and I want to see that the House proceeds in a very dignified manner. If, on the other hand, members beg in to assert, the only thing left to me is enforcing the rules rigidly; it is not necessary. Let us try to get on smoothly and see that the work is done.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಮೊದಲನೆಯ ವಾಕ್ಯದಲ್ಲಿಯೇ "1963–64ನೇ ಸಾಲಿನ ಆಯವ್ಯಯ ಅಂದಾಜನ್ನು ಈ ಸಭೆಯಲ್ಲಿ ತಮ್ಮ ಮುಂದೆ ಮಂಡಿಸುವುದು ಒಂದು ಸುಯೋಗವೆಂದು ಭಾವಿಸುತ್ತೇನೆ" ಎಂದು ನಮ್ಮ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ನಿಜವಾಗಿಯೂ ಅವರು ಬಹಳ ಧೈರ್ಯಸ್ಥರು ಎಂದು ನಾನು ಹೇಳದೆ ವಿಧಿಯಿಲ್ಲ. ಏಕೆಂದರೆ ನಮ್ಮ ಅಲ್ಪ ಸ್ವಲ್ಪ, ಚಿಕ್ಕ ಪುಟ್ಟ ಬಡ್ಜೆಟ್ಟನ್ನು ನೋಡಿಕೊಂಡರೆ ಎದೆ ಝುಂ ಎನ್ನುತ್ತದೆ. ಬರುವುದು ನೋಡಿದರೆ ಯಾವುದೂ ಅಲ್ಲಿಲ್ಲ, ಖರ್ಚು ನೋಡಿದರೆ ಎಷ್ಟೊಂದು ? ಇಂಥಿಂಥಾದ್ದು, ಎಲ್ಲೆಲ್ಲಿಂದಲೋ ಬರಬೇಕಾಗಿದ್ದು, ಯಾವ ಯಾವ ಕಡೆಯಿಂದಲೋ ಬರಬೇಕಾದ್ದು, ಇಷ್ಟು ಹಣ ಬರುವ ಥಾದ್ದನ್ನು ತೆಗೆದುಕೊಂಡು ಅಂದಾಜುಗಳನ್ನು ತಯಾರು ಮಾಡಿ, ಎಲ್ಲಾ ಮಾಡಿಸಿ ನಡೆಸಿ ಬಿಡುತ್ತೇನೆ, ನಾನು ಹಿಡಿದು ನಡೆಸಿಕೊಂಡು ಹೋಗುತ್ತೇನೆ ಎಂದು ಹೇಳುತ್ತಿದ್ದಾರೆ. ನಿಜವಾಗಿಯೂ ಇವರಿಗೆ ಎಷ್ಟು ಧೈರ್ಯ ! ಅದನ್ನು ಮೆಚ್ಚ ಬೇಕಾದ್ದೇ ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ತಮ್ಮ ಬೆಂಬಲವಿರುವುದರಿಂದಲೇ ಧೈರ್ಯ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ತುರ್ತು ಪರಿಸ್ಥಿತಿಯಲ್ಲಿ ಒಂದೊಂದು ಕಾಸೂ ಭದ್ರವಾಗಿಟ್ಟುಕೊಳ್ಳುತ್ತೇವೆ. ಒಂದೊಂದು ಕಾಸೂ ಸರಿಯಾಗಿ ಸೇರಿಸಿ ಖರ್ಚು ಮಾಡುತ್ತೇವೆ ಎನ್ನುವ ಕಾಲದಲ್ಲಿ ಅವರು ಧೈರ್ಯ ಇದೊಂದಕ್ಕೆ ಅಲ್ಲ, ಅನೇಕ ತರಹ ಧೈರ್ಯ ಮಾಡಬೇಕಾಗಿ ಬರುತ್ತದೆ. ದೇಶದಲ್ಲಿ ಎಷ್ಟೋ ಬಾಬುಗಳಿಗೆ ಎಷ್ಟೆಷ್ಟೋ ಜನಗಳ ಕೈಯಲ್ಲಿ ಹಣವನ್ನು ಕೊಟ್ಟು ಖರ್ಚು ಮಾಡಿಸುತ್ತಾರೆ. ಅದು ಹೇಗೆ ನಡೆಯುತ್ತಿದೆ ಎಂದು ಒಂದನ್ನು ಹೇಳುತ್ತೇನೆ. ನಮ್ಮಲ್ಲಿ ರಾಗಿ, ಜೋಳ, ಬತ್ತ ಇವೆಲ್ಲ ಬಹಳ ಜಾಸ್ತಿ ಬೆಳೆದಿದೆ ಎಂದು ಒಂದು ಕಡೆ ಪಟ್ಟಿ ಕೊಟ್ಟಿದ್ದಾರೆ. ಅದನ್ನು ನೋಡಿದರೆ ನಮ್ಮಲ್ಲಿ ಹೆಚ್ಚಿರುವ ಜನಸಂಖ್ಯೆಗೆ ಈ ಆಹಾರ ಪದಾರ್ಥಗಳು ಸಾಕೇ ? ಇದನ್ನು ಮಾಡಿರುವುದು ಸಂತೋಷವೇ ? ಎಂದು ಅವರನ್ನು ಕೇಳುತ್ತ ನಿಜವಾಗಿ ರೈತಾಪಿ ಜನಗಳು ಎಷ್ಟು ಕಷ್ಟದಲ್ಲಿದ್ದಾರೆ. ಅವರಿಗೆ ಯಾವ ತರಹ ಅನುಕೂಲ ಮಾಡಿಕೊಡಬೇಕು ಎನ್ನುವುದನ್ನು ಬಿಟ್ಟು ಜಾಸ್ತಿ ಬೆಳೆ ತೆಗೆದಿದ್ದಾರೆಂದು ಸಂತೋಷಪಟ್ಟು ನನ್ನ ಸೌಭಾಗ್ಯವೆಂದು ಹೇಳಿರುವುದನ್ನು ನೋಡಿದರೆ ನನಗಾದರೂ ಸ್ವಲ್ಪ ಆಶ್ಚರ್ಯವಾಗುತ್ತದೆ.

ಇಟ್ಟಿಗೆ, ಹಂಚು, ತೇಗ, ತಾಮ್ರ ಇವೆಲ್ಲದರ ಬೆಲೆ ಜಾಸ್ತಿಯಾಯಿತು ಎಂದು ಹೇಳಿದ್ದಾರೆ. ಇವು ರೈತ ತೆಗೆದುಕೊಳ್ಳುವ ಪದಾರ್ಥಗಳು. ಆದರೆ ಅವನು ಬೆಳೆಯುವ ಪದಾರ್ಥಗಳ ಬೆಲೆ ಕಡಮೆಯಾಗಿದೆ. ಹೀಗಾಗಿ ರೈತನು ತಾನು ಕೊಂಡುಕೊಳ್ಳುವ ಪದಾರ್ಥಗಳಿಗೆ ಎಷ್ಟು ಕಷ್ಟ ಪಡಬೇಕು ! ಆಹಾರ ಪದಾರ್ಥಗಳ ಬೆಲೆ ಬಹಳ ಕಡಿಮೆಯಾಗದಂತೆ ನೋಡಿಕೊಳ್ಳಲು ಸೊಸೈಟಿಗಳವರು ಆಹಾರ ಧಾನ್ಯಗಳು ಕೊಂಡು ಕೊಂಡು ಶೇಖರಿಸುವ ವ್ಯವಸ್ಥೆ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರು ಹೇಳಿದರು. ಇದು "ಊರು ಸೂರೆ ಹೋದವೇಲೆ ಕೋಟೆ ಬಾಗಿಲು ಹಾಕಿ" ದಂತೆ ಆಗಿದೆ. ರೈತ ತಾನು ಬೆಳೆದ ಬತ್ತವನ್ನು ಮಾರಿ ಜೀವಿಸಬೇಕಾಗಿದೆ. ಅದಕ್ಕೆ ಸರಿಯಾದ ಬೆಲೆ ಬರುವಂತೆ ಸರ್ಕಾರದವರು ಸಕಾಲದಲ್ಲಿ ಕ್ರಮ ತೆಗೆದುಕೊಳ್ಳ

ಬೇಕು. ಸರ್ಕಾರ ಮಾಡುತ್ತಿರುವುದನ್ನು ನೋಡಿದರೆ ಇವರಿಗೆ ನಿಜವಾಗಿಯೂ ರೈತರ ವಿಚಾರದಲ್ಲಿ ಕರುಣೆ ಇದೆಯೇ ಇಲ್ಲವೇ ಎಂದು ನನಗೆ ಒಂದೊಂದು ಸಲ ಅನುಮಾನ ಬರುತ್ತದೆ.

ಇನ್ನು ಮುಂದಕ್ಕೆ ಹೋದರೆ employment exchange ವಿಚಾರ. ಈ employment exchange ಬಗ್ಗೆ ಮೊನ್ನೆ ಪ್ರಶ್ನೆಗಳ ಸಮಯದಲ್ಲಿ 29 ಸಾವಿರ ಅರ್ಜಿಗಳು ರಿಜಿಸ್ಟರಾಗಿದೆ ಎಂದು ಹೇಳಿದರು. ಇದು ಬೆಂಗಳೂರಿನಲ್ಲಿ ಮಾತ್ರ ಇವರಿಗೆಲ್ಲಾ ಕೆಲಸ ಸಿಕ್ಕುವುದು ಯಾವಾಗ. ಮೈಸೂರಿನಲ್ಲಿರುವ employment exchange ವಿಚಾರ ಹೇಳುವುದಕ್ಕೆ ಹೋದರೆ ಅದು ಒಂದು ದೊಡ್ಡ ನಾಟಕವಾಗಿದೆ. ಯಾರ ಹೆಸರು ಹಾಕಬೇಕಾದರೂ ಅವರಿಗೆ ನಾನಾ ತರಹ ಸಮಾಧಾನ ಮಾಡಬೇಕಾಗಿ ಬರುತ್ತದೆ. ಹೀಗಾಗಿ ಯಾರ ಹೆಸರೂ ಹೋಗುತ್ತ ಇಲ್ಲ. ಒಂದು ಕಡೆ ಲಿಸ್ಟ್‌ನಲ್ಲಿ ಹೆಸರು ಹೋಯಿತು ಎಂದರೆ, ಒಬ್ಬರು ಸೆಲೆಕ್ಟ್ ಆದರೆ ಬಾಕಿಯವರಿಗೆ ಯಾವ ತರಹ chance ಸಹ ಇರುವುದಿಲ್ಲ. ಆ employment exchange ಇರುವುದು ಕುತ್ತಾಗಿ ಯಾವ ತರಹ ಅನುಕೂಲವೂ ಆಗುತ್ತಿಲ್ಲ.

ರೈತರ ವಿಚಾರದಲ್ಲಿ, ವ್ಯವಸಾಯ, ಆರ್ಥಿಕ ವ್ಯವಸ್ಥೆ ಬಗ್ಗೆ ಹೇಳುತ್ತಾ ನೀರಾವರಿ ಸೌಕರ್ಯ ಸಾಲದ ಸೌಲಭ್ಯ, ಉತ್ತಮ ಬೀಜ, ಗೊಬ್ಬರ, ಮರ ಮುಟ್ಟು ಇವುಗಳನ್ನು ಒದಗಿಸಿದ್ದರಿಂದ ಆಹಾರೋತ್ಪಾದನೆಯ ಗುರಿಯನ್ನು ಮುಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದು ಬರೀ ನಾಟಕ. ನಮ್ಮಂಥವರಿಗೇ ಹೀಗೆಲ್ಲ.........

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಜೀವನವೇ ಒಂದು ನಾಟಕ.

ಶ್ರೀಮತಿ ಕೆ. ನಾಗರತ್ನಮ್ಮ.—ಅದು ದೊಡ್ಡದಾಗಿದೆ ನಾಟಕ. ಅದಕ್ಕೆ ಏನೂ ಹೇಳುವ ಹಾಗೆಯೇ ಇಲ್ಲ.

ಆಗ್ರಿಕಲ್‌ಚರ್ ಡಿಪಾರ್ಟುಮೆಂಟಿನ ಮೂಲಕ ಗೊಬ್ಬರದ ಸೌಕರ್ಯ ಕೊಟ್ಟಿದ್ದೇವೆಂದು ಹೇಳುತ್ತಾರೆ. ಗೊಬ್ಬರ ಕೇಳಿದರೆ ಕೊಡುವುದಿಲ್ಲ. ಬೀಜ ಕೇಳಿದರೆ ಬೀಜ ಕೊಡುತ್ತಾರೆ, ಅದು ಹೇಗಿರುತ್ತೋ ಏನೋ ಮೊಳಕೇನೆ ಬರುವುದಿಲ್ಲ. ಇನ್ನು ಕೆರೆಕಟ್ಟೆಗಳನ್ನು ರಿಪೇರಿ ಮಾಡಿ ನೀರಾವರಿಗೆ ಅನುಕೂಲಮಾಡಿಕೊಡುತ್ತೇವೆನ್ನುತ್ತಾರೆ. ಆದರೆ, ನೀರಾವರಿಗೆ ಸಾಲವನ್ನು ಕೇಳಿದವರಿಗೆ ಕೆಲವರಿಗೆ ಮಾತ್ರ ಸಿಗುತ್ತದೆ. ಆದರೆ ರೈತರು ಸಾಲ ತೆಗೆದುಕೊಳ್ಳುವುದಕ್ಕಿಂತ ವಿಷ ಸಿಕ್ಕಿದರೆ ಕುಡಿದುಬಿಡುವುದು ಸುಖವಾಗಿರುತ್ತದೆ. ಅಷ್ಟು ಮಟ್ಟಿಗೆ ರೈತರ ಗತಿಯಾಗಿದೆ. ಎಲ್ಲೂ ಅವರಿಗೆ ಸಾಲ ದೊರೆಯುವುದಿಲ್ಲ. ಅಲ್ಲದೆ ಒಂದು ಸಾವಿರ ರೂಪಾಯಿನಷ್ಟು ಎಕರೆಗೆ ಬೆಲೆ ಇದ್ದರೂ ಅದಕ್ಕೆ ಒಂದು ನೂರು ರೂಪಾಯಿಗಳಂತೆ ಬೆಲೆ ಕಟ್ಟಿದರೆ ಯಾರೂ ಸಾಲ ಕೊಡುತ್ತಿಲ್ಲ. ಹೀಗಾದರೆ ಇಂತಹ ಜನಕ್ಕೆ ಸಾಲ ಹೇಗೆ ದೊರೆಯಬೇಕು ?

ಇನ್ನು ಬಾವಿಗಳನ್ನು ತೆಗೆಸಬೇಕು ಎಂದು ದುಡ್ಡು ಕೊಡುತ್ತಾರೆ. ಬಾವಿಗಳಾಗದಿದ್ದರೂ ದುಡ್ಡನ್ನು ಕೊಡುತ್ತಾರೆ. ಬಾವಿ ಆಗಿದೆಯೇ ಇಲ್ಲವೇ ಎನ್ನುವುದನ್ನೂ ನೋಡುವುದಕ್ಕೆ ಹೋಗವುದಿಲ್ಲ. ಕೆಲವು ಕಡೆಗಳಲ್ಲಿ ಬಾವಿ ತೆಗೆಯಲು ಆಗುವುದಿಲ್ಲ. ನಮ್ಮ ಭಾಗದಲ್ಲಿ ಬಾವಿ ತೋಡಬೇಕಾದರೆ ಬಹಳ ಆಳವಾಗಿ ತೆಗೆಸಬೇಕು. ಅಲ್ಲದೆ ಬರೀ ಕಲ್ಲುಬಂಡೆಗಳು ಸಿಗುತ್ತವೆ. ಇದಕ್ಕೆ ನೀವು ಈಗ ಕೊಡುತ್ತಿರುವ ಖರ್ಚಿಗೆ ಹತ್ತರಷ್ಟು ಖರ್ಚು ನಮಗೆ ಬರುತ್ತದೆ. ಮನೆಯವರೆಲ್ಲ ಸೇರಿ ಬಾವಿಗಳನ್ನು ತಗೆಸಿ ಎಂದು ಹೇಳುತ್ತಾರೆ. ಎಷ್ಟು ಅವರು ಡೈನಮೇಟು ಹಾಕಿ ತೆಗೆಯುವುದಕ್ಕೆ ಸಾಧ್ಯವೇ ? ಇಂತಹ ಕಷ್ಟಗಳು ನಮ್ಮ ತಾಲ್ಲೂಕಿನಲ್ಲಿದೆ. ಇದರಿಂದ ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದು ಬಾವಿಯನ್ನು ತೆಗೆಯುವ ಕೆಲಸವನ್ನು ಸರಕಾರವೇ ಮಾಡಿ ಅವರಿಂದ ಎಷ್ಟು ನೀರು ಬರುತ್ತದೋ ನೋಡಿಕೊಂಡು ಸಪ್ಲೈ ಮಾಡಿ ಅದಕ್ಕೆ ತಕ್ಕಂತೆ ವಾಟರ್‌ರೇಟು ಇತ್ಯಾದಿಗಳನ್ನು ಹಾಕಿ ಬೇಕಾದರೆ ಒಂದಿಷ್ಟು ತುತ್ತು ಇನ್‌ಸ್ಟಾಲ್‌ಮೆಂಟಿನಂತೆ ಕೊಡಬೇಕೆಂದರೂ ಎಲ್ಲ ರೈತರೂ ಕೊಡುವುದಕ್ಕೆ ಸಿದ್ಧರಾಗುತ್ತಾರೆ. ಇದನ್ನು ನಮ್ಮ ತಾಲ್ಲೂಕಿನಲ್ಲಾದರೂ ಮಾನ್ಯಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಗೊಬ್ಬರದ ವಿಚಾರ ಮಂಗಳೂರಿನಲ್ಲಿ ಒಂದು ಫ್ಯಾಕ್ಟರಿ ಮತ್ತು ಬೆಂಗಳೂರಿನಲ್ಲಿ ಒಂದು ಫ್ಯಾಕ್ಟರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಎಲ್ಲಿ ಬೇಕಾದರೂ ಮಾಡಲಿ. ನಮಗೆ ಬೇಕಾಗಿರುವುದು ಗೊಬ್ಬರ. ಅದಕ್ಕೆ ಮಾನ್ಯತೆ ಕೊಡಬೇಕು. ಮತ್ತು ಜನಕ್ಕೆ ಸಿಕ್ಕುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇರಿಗೇಷನ್ನು ವಿಚಾರದಲ್ಲಿ ಮಾತನಾಡುತ್ತ ಹೇಳುವುದಾದರೆ, ಚೀಫ್ ಮಿನಿಸ್ಟರಿಗೆ ನಮ್ಮ ತಾಲ್ಲೂಕಿನ ಮೂರೆಹೊಳೆ ಪ್ರಾಜೆಕ್ಟು ಆಗದೆ ಬಹಳ ವರ್ಷದಿಂದ ನಿಂತಿದೆ. ಇದನ್ನು ಬೇಗನೆ ಮಾಡಿಸಬೇಕೆಂದು ಕೇಳಿದ್ದಕ್ಕೆ ನನಗೆ ನನ್ನ ಪತ್ರಕ್ಕೆ ಜವಾಬಾಗಿ ನಾಳಿದ್ದು ಇಂಜನೀಯರವರು ಹೋಗುತ್ತಾರೆ ಎಂದು ಗೊತ್ತಾಗಿರುವುದನ್ನು ನೋಡಿದರೆ ನಮ್ಮ ಭಾಗದ ಕಡೆಗೆ ಇಷ್ಟು ಬೇಗ ಸರಕಾರಿ ಕೆಲಸ ಆಗಬೇಕಾಗಿದ್ದರೆ ನಮ್ಮ ತಾಲ್ಲೂಕು ಕನಸು ಕಂಡಂತೆ ಒಳ್ಳೆಯ ಭವಿಷ್ಯವಿದೆ

(ಶ್ರೀಮತಿ ಕೆ. ನಾಗರತ್ನಮ್ಮ)

ಎಂದು ಕಾಣುತ್ತದೆ. ನಮ್ಮ ಚೀಫ್ ಮಿನಿಸ್ಟರವರು ಇನ್ನು ಮುಂದೆ ಮುಂಜಾಗರೂಕತೆ ವಹಿಸಿ ಇದನ್ನು ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈ ಪ್ರಾಜೆಕ್ಟೇನಾದರೂ ಆದ್ರೆ ಇದರಿಂದ ಸುಮಾರು ಇಪ್ಪತ್ತೈದು, ಮೂವತ್ತು ಸಾವಿರ ಎಕರೆ ಭೂಮಿಗೆ ನೀರಾವರಿ ಸೌಕರ್ಯ ಒದಗಿ ಇಲ್ಲಿರುವ ಎಷ್ಟೋ ಜನಗಳಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮತ್ತೊಮ್ಮೆ ನಮ್ಮ ಚೀಫ್‌ಮಿನಿಸ್ಟರನ್ನು ಕೇಳುವುದು ಈ ವಿಚಾರವನ್ನು ಸರಿಯಾಗಿ ನೋಡಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

Rural Communication ವಿಚಾರವಾಗಿ ಮಾತನಾಡುತ್ತ ನಮ್ಮ ಶ್ರೀಮಾನ್ ಪೇವಯ್ಯನವರು ಮಾತನಾಡುತ್ತ ಮಲೆನಾಡಿನಲ್ಲಿ ಸಂಚಾರಮಾರ್ಗಗಳಿಲ್ಲ-ಇಲ್ಲಿಗೇ ಸಂಚಾರ ಮಾರ್ಗಗಳಿರ್ಲಾ ಆಗಬೇಕು, ಎಂದರು. ಕೆಲವು ತಾಲ್ಲೂಕಿನಲ್ಲಿ ಸಂಚಾರ ಮಾರ್ಗಗಳಿಗೆ ರಸ್ತೆ ಇಲ್ಲ, ಎಂದು ಹೇಳಿದ್ದರೆ ಯೋಗ್ಯವಾಗಿತ್ತು. ಸರಕಾರಿ ಬಸ್ಸು ಹಾಕಿಬಿಟ್ಟು ಓಡಾಡಲು ಸರಿಯಾದ ರಸ್ತೆ ಅನುಕೂಲವಿಲ್ಲ. ನಮ್ಮ ಭಾಗದ ಕಡೆ ಯಾರೂ ಬಂದು ನೋಡಿಲ್ಲ ಎಂದು ಕಾಣುತ್ತೆ. ಪ್ರತಿಯೊಬ್ಬರೂ ಬೇಗೂರಿನಿಂದ ಗುಂಡ್ಲುಪೇಟೆಯವರೆಗೆ ಬಸ್ಸಿನಲ್ಲಿ ಬರುವವರು 50-50 ನಯಾಪೈಸಾದಂತೆ ಹೆಚ್ಚು ಕೊಡಬೇಕಾಗುತ್ತದೆ ಬಡವನಾದ ರೈತನಿಗೆ 50 ನಯಾಪೈಸಾ ಎಂದರೆ, ಅವನಿಗೆ ಒಂದು ಹೊತ್ತಿನ ಅನ್ನ ಆಗುತ್ತೆ. ಹೀಗೆ ಕೆಲವು ಗ್ರಾಮಗಳು ಒಂದು ದ್ವೀಪದ ಹಾಗೆ ಆಗಿವೆ. ಇಂತಹ ರಸ್ತೆಗಳನ್ನು ಮಾಡಲು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟರೆ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಪಿ.ಡಬ್ಲ್ಯು.ಡಿ. ಮಿನಿಸ್ಟರನ್ನು ಕೇಳಿದರೆ ದುಡ್ಡಿಲ್ಲ ಎನ್ನುತ್ತಾರೆ. ಇದು ನನ್ನ ತಾಲ್ಲೂಕಿಗೆ ದುಡ್ಡಿಲ್ಲವೇನೋ ? ಬಾಕೀ ಎಲ್ಲ ರಸ್ತೆಗಳಿಗೆ ಕೊಡುವುವಕ್ಕೆ ದುಡ್ಡಿದೆ. ರೋಡುಗಳು ಕೆಟ್ಟಹೋದರೆ ಬಸ್ಸುಗಳು ಹೇಗೆ ಓಡಾಡಲು ಅನುಕೂಲವಾಗುತ್ತದೆ. ಗುಂಡ್ಲುಪೇಟೆಯಿಂದ ತೆರಕಾಣಂಬಿ ಸಂತೆಗೆ ಜನ ಹೋಗುವುದಕ್ಕೆ ಸರಿಯಾದ ರಸ್ತೆಯ ಅವಕಾಶವಿಲ್ಲದೇ ಬಹಳ ಸಂಕಟ ಪಡುತ್ತಿದ್ದಾರೆ. ಈ ರೋಡುಗಳನ್ನು ಈಗಲಾದರೂ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬಡ್ಜೆಟ್ಟು ಭಾಷಣವನ್ನು ಬಹಳ ಅಚ್ಚುಕಟ್ಟಾಗಿ ನಮ್ಮ ಮಂತ್ರಿಗಳು ಮಾಡಿದ್ದಾರೆ. ಅವರು ''ನಾನು ದುಂದುಗಾರಿಕೆ ಮಾಡುವುದಿಲ್ಲ, ನೀವು ಕೊಟ್ಟ ಹಣವನ್ನು ಭದ್ರವಾಗಿ ಇಟ್ಟುಕೊಳ್ಳುತ್ತೇನೆ'' ಎಂದು ನಮ್ಮ ಫೈನಾನ್ಸ್ ಮಿನಿಸ್ಟರು ಇಲ್ಲಿ ಹೇಳಿದ್ದಾರೆ. ಇದು ಎಷ್ಟು ತಮಾಷೆಯಾಗಿದೆ ಎಂದರೆ ಮಕ್ಕಳ ಕೈಯಲ್ಲಿ ಪೆಪ್ಪರುಮೆಂಟನ್ನು ಕೊಟ್ಟು ಅದನ್ನು ತಿನ್ನಬೇಡ, ತಿನ್ನಲಿಕ್ಕಲ್ಲ ಎಂದರೆ ಅದು ಸುಮ್ಮನಿರುತ್ತದೆಯೋ ? ಹಾಗೆ ಇದರಲ್ಲಿ ದುಡ್ಡನ್ನು ಸ್ಯಾಂಕ್ಷನ್ ಮಾಡಿ ನಾವು ಭದ್ರವಾಗಿ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದರೆ ಇದು ಎಷ್ಟು ತಮಾಷೆಯಾಗಿದೆ ನೋಡಿ.

ಶಿಕ್ಷಣ ಖಾತೆಗೆ ಬಂದರೆ, ಇದು ನಿಜವಾಗಿಯೂ ಬಹಳ ವ್ಯಸನಕರವಾದ ಪ್ರಸಂಗವಾಗಿದೆ. ಎಷ್ಟು ದುಡ್ಡು ಅವರ ಕೈಯಲ್ಲಿ ಕೊಟ್ಟಿದ್ದಾರೆಂದರೆ 18.76 ಕೋಟಿಯಷ್ಟು ಶಿಕ್ಷಣಕ್ಕಾಗಿ ಒದಗಿಸಿರುವುದು. ಶ್ರೀಮಾನ್ ಕಂಠಿಯವರು ಹೋಗತಕ್ಕ ದಾರಿ ಏಕೆ ಹೀಗಾಯಿತು. ಇವರಿಗೇನಾಯಿತು? ನಮ್ಮಲ್ಲಿ ಒಂದು ಗಾದೆ ಇದೆ '' ಹುಚ್ಚಲ್ಲ ಬೆಪ್ಪಲ್ಲ, ಶಿವಲೀಲೆ '' ಎಂದು. ಹೀಗೆ ಶಿವಲೀಲೆಯಿಂದ ಹಾಗೆ ಅವರು ಕೆಲಸ ಮಾಡುತ್ತಿದ್ದಾರೆ. ನನಗೆ ಅದು ಶಿವಲೀಲೆಯಂತೇನೇ ಕಾಣುತ್ತಿರುವುದು. ನಮ್ಮ ಹಿಂದಿನ ಮಂತ್ರಿಗಳಾಗಿದ್ದ ಶ್ರೀಮಾನ್ ಅಣ್ಣಾರಾಯರು ಸ್ವಲ್ಪ ಏನಾದರೂ ಒರಟಾಗಿ ಮಾತನಾಡುತ್ತಿದ್ದರೂ ಅವರು ಕೆಲಸ ಆಗುವುದಿದ್ದರೆ ಆಗುತ್ತೆ ಎಂದು ಹೇಳುತ್ತಿದ್ದರು ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಿಬಿಡುತ್ತಿದ್ದರು. ಅವರ ಕೈಲಾಗುತ್ತಿದ್ದ ಎಷ್ಟೋ ಕೆಲಸವನ್ನು ಬೇಕಾದಷ್ಟು ಮಾಡಿಯೂ ಕೊಟ್ಟರು. ಈಗಿರುವ ಮಂತ್ರಿಗಳಿಗೇನಾಗಿದೆ ಎಂದರೆ ಕಸ್ತೂರಿ ಸಂಗಡ ಕುಸ್ತಿ ನಾವು ಮಾಡಬಹುದು ಆದರೆ ಸಗಣಿ ಸಂಗಡ ಸರಸ ಮಾಡಬಾರದು ಎಂಬಂತೆ ನಮ್ಮ ಕಷ್ಟವನ್ನು ಪದೇ ಪದೇ ಹೇಳುತ್ತಿದ್ದರೂ ಯಾವುದೂ ಆಗುತ್ತಿಲ್ಲ. ಅದೇ ಕತೆಯನ್ನು ಪುನಃ ಹೇಳಬೇಕಾಗಿದೆ. ಮಹಾರಾಣೀಸ್ ಕಾಲೇಜು ಮತ್ತು ವಾಣೀವಿಲಾಸ ಕಾಲೇಜಿನಲ್ಲಿ ಎಷ್ಟೋ ಕೆಲಸಗಳಾಗಬೇಕು. ಮೈಸೂರಿನಲ್ಲಿರುವ ಕಾಲೇಜಿನ ಮಕ್ಕಳಿಗೆ ಎಷ್ಟು ಕಷ್ಟವಾಗಿದೆ ಎಂದರೆ ಕೂಡಲು ಸರಿಯಾದ ಜಾಗವಿಲ್ಲ. Home Scienceಗಾಗಿ ಬರಬೇಕಾದರೆ ಬೆಂಗಳೂರಿಗೆ ಬರಬೇಕು. Science Subjects ಓದಲು ಮಹಾರಾಜಾಸ್ ಕಾಲೇಜಿಗೇ ಹೋಗಬೇಕು. ಹೀಗಾಗಿರುವುದರಿಂದ ದಯಮಾಡಿ ಈ ಕಾಲೇಜಿಗೆ ಸರಿಯಾದ ಕಟ್ಟಡ ಕಟ್ಟಿಸಿಕೊಡಿ, ಸರಿಯಾಗಿ ಕಾಲೇಜು ಕೆಲಸ ಮಾಡುತ್ತೆ ಎಂದು ಐದಾರು ವರ್ಷದಿಂದಲೂ ಹೇಳುತ್ತಿದ್ದರೂ ಇದುವರೆಗೂ ಮಾಡಿಕೊಡಲಿಲ್ಲ, ಮೊನ್ನೆ ದಿವಸ ತಾನೇ ನಾವೆಲ್ಲ ಇಲ್ಲಿ ನೋಡಿದೆವು ಹೆಣ್ಣು ಮಕ್ಕಳಿಗೆ ಗೌರವವನ್ನು ಸರಿಯಾಗಿ ಕೊಡುವುದಿಲ್ಲ. Deputy Education Ministerಗೆ ಕೊಟ್ಟಂಥಾ ಗೌರವವನ್ನಲ್ಲಿ ಅವರಿಗೆ ನಮ್ಮ ವಿದ್ಯಾ ಸಚಿವರು ಫೈಲನ್ನು ಸಹ ಕೊಡಲಿಲ್ಲ. ಅವರಿಗೇನು ಯೋಗ್ಯತೆ ಇರಲಿಲ್ಲವೇ ? ಅವರನ್ನೇಕೆ ನೇಮಕ ಮಾಡಿದಿರಿ ?

ಬೇಡದಿದ್ದರೆ ವಜಾಮಾಡಲಿ, ಅವರಿಗೆ ಆ ಶಕ್ತಿ ಇಲ್ಲದಿದ್ದರೆ ಏತಕ್ಕಾಗಿ ಅವರನ್ನು ಇಟ್ಟುಕೊಂಡು ಈ ರೀತಿ ಆಭಾಸ ಮಾಡುತ್ತೀರಿ ? ಹೆಣ್ಣುಮಕ್ಕಳು ಎಂದು ಅನ್ಯಾಯ ಮಾಡುವುದೇ ನಿಮಗೆ ಕೆಲಸ ವಾಗುತ್ತದೆ. ಅವರಿಗೆ ಕೆಲಸ ಹರಿಯೊಲ್ಲ ಎಂದರೆ ಬಿಟ್ಟುಬಿಡಿ.

ಶ್ರೀ ಕೆ. ಪಿ. ರೇವಣಶಿದ್ದಪ್ಪ.—ಗಂಡಸರಾಗಿರುವವರಿಗೂ ಅದೇ ಆಗಿದೆ (ನಗು)

ಈ ದೇಶದಲ್ಲಿದ್ದ ಕಾಲೇಜು ಟೀಚರೊಬ್ಬರು ಹದಿನೈದು ಇಪ್ಪತ್ತು ವರ್ಷಗಳ ಕಾಲ ಹೊರಗಡೆ ಎಂದರೆ ಬಿಜಾಪುರ, ಧಾರವಾಡ ಈ ಭಾಗಗಳಲ್ಲಿ ಚೆನ್ನಾಗಿ ಕೆಲಸ ಮಾಡಿ ಈಗ ತಮ್ಮ ಊರಾದ ಮೈಸೂರಿಗೆ ಬಂದರೆ ಪುನಃ ಅವರನ್ನು ಎಲ್ಲೋ ಬಹಳ ದೂರವಾದ ಭಾಗಕ್ಕೆ ಬಿಜಾಪುರ ಜಿಲ್ಲೆಯಲ್ಲಿ ಹೋಗಬೇಕೆಂದು ಟ್ರಾನ್ಸ್‌ಫರು ಮಾಡಿದ್ದಾರೆ. ಇದಕ್ಕೇನು ಅವರು ತಪ್ಪುಮಾಡಿದರು? ಎಂದು ಅವರು ಇಪ್ಪತ್ತುವರ್ಷಗಳ ಕಾಲ ನಾನು ಹೊರಗಡೆ ಇದ್ದಾಗ ಯಾವ ತಪ್ಪನ್ನೂ ಮಾಡಿಲ್ಲ. ಏಕೆ ಹಾಕು ತ್ತೀರಿ ಎಂದರೆ ಅಲ್ಲಿಗೆ ಹೋಗುವವರು ಯಾರೂ ಇಲ್ಲವೆಂದರಂತೆ ಇಲ್ಲಿ ಒಂದು ಶಿವಲೀಲೆಯಾಗುತ್ತಿದೆ. ಹೀಗೆ ಚೆನ್ನಾಗಿ ಕೆಲಸಮಾಡಿದವರಿಗೆ ಇದು ಪನಿಷ್‌ಮೆಂಟೇ ? ಯಾರೂ ಹೋಗುವುದಿಲ್ಲ ಎನ್ನು ತ್ತಾರೆ. ನೀವು ಇಪ್ಪತ್ತು ವರ್ಷ ಹೊರಗಿದ್ದು ಚೆನ್ನಾಗಿ ಕೆಲಸ ಮಾಡಿದ್ದೀರಿ, ಅಲ್ಲಿ ಅಂತಹ ಕೆಲಸ ಮಾಡುವ ಹೆಣ್ಣುಮಕ್ಕಳಿಲ್ಲ ಎಂದು ಇವರನ್ನೇ ಒತ್ತಾಯದಿಂದ ನೀವೇ ಹೋಗಿ ಎನ್ನುತ್ತಾರೆ, ಇದಾವ ನೀತಿ. ಇದು ಅಡ್ಮಿನಿಸ್ಟ್ರೇಷನ್ನಿನಲ್ಲಿರುವ ಶಿವಲೀಲೆಯಲ್ಲದೆ ಬೇರೆ ಏನೂ ಅಲ್ಲ.

ಒಬ್ಬೊಬ್ಬರಿಗೆ ಒಂದೊಂದು ಕಾನೂನು, ಅವರಿಗೆ ಇಷ್ಟ ಬಂದವರಿಗೆ ಒಂದು ಕಾನೂನು, ಇವರಿಗೆ ಬರದವರಿಗೆ ಒಂದು ಕಾನೂನು. ಹೀಗೆ ಏಕೆ ಮಾಡಿದ್ದೀರೆಂದು ಕೇಳಿದರೆ, ನಾನು ಮಾಡಿಲ್ಲ, ಡಿ.ಪಿ.ಐ. ಮಾಡಿದ್ದಾರೆಂದು ಹೇಳುತ್ತಾರೆ ; ಅದು ಒಂದು ಕಾನೂನು ; ಅವರನ್ನು ಕೇಳಿದರೆ, ಮಿನಿಸ್ಟರು ಮಾಡಿದ್ದಾರೆಂದು ಹೇಳುತ್ತಾರೆ. ನಿಮಗೆ ಇಷ್ಟ ಬಂದವರಿಗೆ ಒಂದೊಂದು ಕಾನೂನೇ ? ಪ್ರತಿಯೊಂದಕ್ಕೂ ನಿಗದಿಯಾದ ಕಾನೂನಿಲ್ಲವೇ ? ಇದು ಒಂದು ಶಿವಲೀಲೆ.

ಹಿಂದಿ ವಿದ್ವಾನ್‌ಗಳ ವಿಚಾರ ಅನೇಕರು ಹೇಳಿದ್ದಾರೆ. ಅನೇಕರು ಹಿಂದಿಯಲ್ಲಿ ಎಂ.ಎ. ಪರೀಕ್ಷೆಗೆ equivalent ಆಗಿರುವ ಪರೀಕ್ಷೆ ಪಾಸ್ ಮಾಡಿದ್ದಾರೆ. ಅವರಿಗೆ ಗವರ್ನ್‌ಮೆಂಟಿನವರು ಟ್ರೇನಿಂಗ್ ಕೊಟ್ಟಿದ್ದಾರೆ. ಅವರ ಬಗ್ಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಅವರು ಎಷ್ಟೇ ಅಪ್ಲಿಕೇಷನ್ಸ್, ರೆಪ್ರೆಸೆಂಟೇಷನ್ಸ್ ಕಳುಹಿಸಿದರೂ ಅವಕ್ಕೆ ಬೆಲೆಯೇ ಇಲ್ಲ ; ಪ್ರಪಂಚದ ಮೇಲೆ ಇರದ ಹಾಗೆ ಅವರ ಸ್ಥಿತಿ ಆಗಿದೆ. ಯಾರಾದರೂ ಟೆಂಪೊರರಿ ಹ್ಯಾಂಡ್ಸ್ ಅವರಲ್ಲಿದ್ದರೆ ಅವರನ್ನೂ ಕೆಲಸಕ್ಕೆ ತೆಗೆದುಕೊಳ್ಳಿ. ನಿಮಗೆ ದುಡ್ಡು ಕಡಿಮೆಯಾಗುತ್ತಿದೆಯೇ ? ಅವರನ್ನು ಏತಕ್ಕೆ ಟ್ರೇನ್ ಮಾಡಿದಿರಿ ? ಟ್ರೇನ್ ಮಾಡಿರುವುದರಿಂದ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಿ. ನಿಮಗೆ ಕೆಲಸ ಕೊಡುವುದಕ್ಕಾಗ ದಿದ್ದರೆ, ಟ್ರೇನ್ ಮಾಡಬೇಡಿ. ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಬೇಕಾದಷ್ಟು ಹೇಳುತ್ತೀರ ; ಒಣ ಪುರಾಣ ಹೇಳುವುದಕ್ಕೆ ಬದಲು ಟ್ರೇನಿಂಗ್ ಆಗಿರುವವರನ್ನು ಕೆಲಸವನ್ನು ತೆಗೆದುಕೊಂಡು ಅವರ ಜೀವನಕ್ಕೆ ಅನುಕೂಲಮಾಡಿಕೊಡಿ.

ಈ Scholarship Committee ವಿಚಾರದಲ್ಲಿ ಇಷ್ಟರವರೆಗೆ ಎಲ್ಲಾ ಹೇಳಿದ್ದಾರೆ. ಈ Scholarship Committee ಯಲ್ಲಿ ಕೆಲವರನ್ನು ಚೇರ್ಮನ್ನಾಗಿ ಮಾಡಿದ್ದಾರೆ. ಸ್ಕಾಲರ್‌ಷಿಪ್ ಹಂಚಬೇಕೆಂದು ಇಟ್ಟುಕೊಂಡ ಮೀಟಿಂಗಿನ ಇಂಟಿಮೇಷನ್ ಯಾವ ದಿವಸ ಚೇರ್ಮನ್ನಿಗಾಗಲಿ, ಇತರ ಸದಸ್ಯರಿಗಾಗಲೀ ಬರಬೇಕು ? ನಾಳೆ ಮೀಟಿಂಗ್ ಇಟ್ಟುಕೊಂಡರೆ, ಇಂಥ ದಿವಸ ಮೀಟಿಂಗ್ ಇದೆ, ಬರಬೇಕು ಎಂದು ಪ್ರಯರ್ ನೋಟೀಸ್ ಕೊಡುವುದೇ ಇಲ್ಲ ; ಅದೇನು ಮೆಂಬರುಗಳು ಬರಬಾರ ದೆಂದೇ ಹಾಗೆ ಮಾಡುತ್ತಾರೆಯೋ ? ಅಸೆಂಬ್ಲಿ ಸೇರುವ ಹಿಂದಿನ ದಿವಸ, ಮರುದಿವಸ ಮೀಟಿಂಗ್ ಇದೆಯೆಂದು ಇಂಟಿಮೇಷನ್ ಬರುತ್ತದೆ. ಏತಕ್ಕೆ ಇಂಥ ವ್ಯವಹಾರ. ನಮ್ಮ ಆರ್ಥಿಕ ಮಂತ್ರಿಗಳಿಗೆ ಹೇಳಿಬಿಟ್ಟರೆ, ಮಾರ್ಚಿ ತಿಂಗಳಿಗೆ ಮುಂಚಿತವಾಗಿಯೇ ಸ್ಕಾಲರ್‌ಷಿಪ್ ಹಂಚುತ್ತೇವೆಂದು ಹೇಳುತ್ತಾರೆ. ಸ್ವಲ್ಪವಾದರೂ ಮಾಡಿರುವ ತಪ್ಪು ಒಪ್ಪಿಕೊಳ್ಳಿ. ಮೊರಾರ್ಜಿಯವರು ಬೊಂಬಾಯಿನಲ್ಲಿ ಅವರು ಮಾಡಿದ ತಪ್ಪನ್ನು ಒಪ್ಪಿಕೊಳ್ಳುತ್ತಿದ್ದರು : ''ಹೌದು, ನಾನು ತಪ್ಪು ಮಾಡಿದ್ದೇನೆ, ಅದನ್ನು ಸರಿ ಮಾಡುತ್ತೇನೆ'' ಎಂದು ಹೇಳುತ್ತಿದ್ದರು. ಈ ಸ್ಕಾಲರ್‌ಷಿಪ್ ವಿಚಾರ ಈ ಸಭೆಯಲ್ಲಿ ಮೊನ್ನೆ ಬಂದಾಗ, ಚೀಫ್ ಮಿನಿಸ್ಟರು ಎದ್ದು ''ಹೌದು, ಕೊಡುವುದರಲ್ಲಿ ತಡವಾಗಿದೆ, ಮುಂದೆ ಬೇಗ ಹಣ ಕೊಟ್ಟು ಅನುಕೂಲ ಮಾಡಿಕೊಡುವ ಹಾಗೆ ಮಾಡುತ್ತೇನೆ'' ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಆದರೆ ಆರ್ಥಿಕ ಮಂತ್ರಿಗಳು ಹಠ ; ಮಾರ್ಚಿಯೊಳಗೆ ಸ್ಕಾಲರ್‌ಷಿಪ್ ಕೊಟ್ಟಿರುವೆವು ಎಂದು ಹೇಳು ತ್ತಾರೆ ; ಈ ತರಹ ಅನ್ಯಾಯ ಕೆಲಸಕ್ಕೆ ಹೋಗಬೇಡಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಪ್ಪು ಒಪ್ಪಿಕೊಳ್ಳುವುದೊಂದು ಮೊರಾರ್ಜಿಯವರು ಜತ್ತಿಯವರಿಗೆ ಹೇಳಿಕೊಟ್ಟಿಲ್ಲ ; ಇನ್ನೆಲ್ಲಾ ಹೇಳಿಕೊಟ್ಟರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೌದು, ಹೌದು, ಎಲ್ಲಾ ಹೇಳಿಕೊಟ್ಟಿದ್ದಾರೆ. ಚೀಫ್ ಮಿನಿಸ್ಟರು ಹೇಳುತ್ತಾ ಇದ್ದರು ಎಲ್ಲೋ ಒಂದು ಸ್ಥಳದಲ್ಲಿ ದೇವಾಲಯಕ್ಕೆ ಕಾಯಿ ಇಲ್ಲ, ಹಣ್ಣಿಲ್ಲ, ನನ್ನ ದರ್ಶನಕ್ಕೆ ಬಂದಿದ್ದೇನೆ. ದೇವ ಎಂದನಂತೆ ಭಕ್ತ ವರವೂ ಇಲ್ಲ, ಶಾಪವೂ ಇಲ್ಲ, ಹೊರಟು ಹೋಗು ಎಂದು ದೇವರು ಹೇಳಿದನಂತೆ. ನಾವು ಎಲ್ಲಿಂದ ವಿದ್ಯಾ ಮಂತ್ರಿಗಳಿಗೆ ಹಣ್ಣು, ಕಾಯಿ, ತೆಗೆದುಕೊಂಡು ಹೋಗೋಣ ? ಎಜುಕೇಷನ್ ಮಿನಿಸ್ಟರಿಗೆ ಹಣ್ಣು, ಕಾಯಿ, ಆಶೀರ್ವಾದ ಕೊಡತಕ್ಕಂಥ ಜನ ಇರುವಾಗ ನಮ್ಮನ್ನು ಕೇಳುತ್ತಾರೆಯೇ ? ಆ ತರಹ ದಯವಿಟ್ಟು ಮಾಡಬೇಡಿ.

ಶ್ರೀ ಕೆ. ಪುಟ್ಟಸ್ವಾಮಿ (ನಗರ ಆಡಳಿತ ಶಾಖೆಯ ಮಂತ್ರಿಗಳು).—ಆಶೀರ್ವಾದ ಕೊಡಿರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆಶೀರ್ವಾದ ದೊಡ್ಡವರು ಕೊಡುತ್ತಾರೆ.

ಇನ್ನೂ ಅನೇಕ ಜನ ಮಾತನಾಡುವವರಿದ್ದಾರೆ ಮತ್ತು ನಮ್ಮ ಸ್ಪೀಕರು ಗಂಟೆ ಹೊಡಿಯುತ್ತಿದ್ದಾರೆ. ಈಗ ಇಷ್ಟು ಹೇಳಿ, ಡಿಮ್ಯಾಂಡಿನ ಮೇಲೆ ಮಾತನಾಡುವ ಕಾಲದಲ್ಲಿ ಬಾಕಿ ವಿಚಾರಗಳನ್ನು ಹೇಳುತ್ತೇನೆ. ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ನಮ್ಮ ಮುಂದೆ ರಾಜ್ಯದ ಆರ್ಥಿಕ ಸಚಿವರು 1963-64 ನೇ ಸಾಲಿನ ಹುಟ್ಟುವಳಿ ಮತ್ತು ಖರ್ಚಿನ ಆಯವ್ಯಯದ ಅಂದಾಜನ್ನು ಮಂಡಿಸಿರತಕ್ಕಂಥಾದ್ದನ್ನು ನಾನು ಸಮರ್ಥನೆ ಮಾಡುತ್ತೇನೆ; ಮತ್ತು ಹಾಗೂ ಹಣಕಾಸಿನ ಸಚಿವರು ಬಹಳ ಬುದ್ಧಿವಂತಿಕೆಯಿಂದ ಕೇವಲ 40 ಲಕ್ಷ ರೂಪಾಯಿಗಳ ಖೋತ ತೋರಿಸಿದ್ದಾರೆ. ಈ ಹಣದ ಕೊರತೆಯನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಹೊಸ ತೆರಿಗೆಗಳೇನೂ ಇಲ್ಲವೆಂದು ಈ ಸಭೆಯಲ್ಲಿ ಅವರ ಭಾಷಣದಲ್ಲಿ ತಿಳಿಸಿದರು ಸ್ವಾಮಿ, ಮುಖ್ಯವಾಗಿ ನಾವು ಒಂದು ಅಂಶವನ್ನು ಯೋಚನೆ ಮಾಡಬೇಕಾಗಿದೆ. ಈಗ ಮೂರು ತಿಂಗಳ ಕೆಳಗೆ ಭೂಕಂದಾಯವನ್ನು ಒಂದಕ್ಕೆ ಎರಡು ಪಟ್ಟಿನಷ್ಟು ಕೊಡತಕ್ಕಂಥ ಏನು ಒಂದು ಬಿಲ್ಲನ್ನು ತಂದು ಪಾಸ್ ಮಾಡಿದೆವೋ, ಅದೊಂದು ಹಣದಿಂದ ಸುಮಾರು 5 ಕೋಟಿ ರೂಪಾಯಿ ಜಾಸ್ತಿ ಭರ್ತಿಯಲ್ಲಿ ಹಾಕಿದರು. 1961-62 ನೇ ಸಾಲಿನಲ್ಲಿ ಭೂಕಂದಾಯದ ಹುಟ್ಟುವಳಿ 484.54 ಲಕ್ಷ ರೂಪಾಯಿಗಳು ಅಂದಾಜಿಗೆ, ನನ್ನಲ್ಲಿರತಕ್ಕಂಥ ಎಸ್ಟಿಮೇಟಿನಲ್ಲಿ ಹೇಳುವುದಾದರೆ ಒಂದಕ್ಕೆರಡರಷ್ಟು ಮಾಡದೆ ಹೋಗಿದ್ದರೆ ಇವತ್ತಿನ ದಿವಸ 4-5 ಕೋಟಿ ರೂಪಾಯಿ ಖೋತಾ ಬರುತ್ತಿತ್ತು ಅನ್ನತಕ್ಕಂಥಾದ್ದನ್ನು ಯೋಚನೆ ಮಾಡಬೇಕಾಗಿದೆ. ಆದರೆ ಈ ಒಂದು ಖೋತ ಬರತಕ್ಕಂಥ ಹಣವನ್ನು ವ್ಯವಸಾಯ ಮಾಡತಕ್ಕಂಥ ರೈತ ಇವತ್ತು ಭರ್ತಿ ಮಾಡಿಕೊಟ್ಟಿದ್ದಾನೆ, ಹೀಗೆ ಮಾಡಿಕೊಟ್ಟಿರತಕ್ಕ ರೈತನ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಬೇಕಾಗಿದೆ.

ಹಣಕಾಸಿನ ಸಚಿವರು ತಮ್ಮ ಮೊದಲನೆ ಬಜೆಟ್ಟಿನಲ್ಲಿ, ಅಕ್ಕಿ, ಜೋಳ, ರಾಗಿ, ಕಡ್ಲೇಕಾಯಿ, ಹತ್ತಿ, ಕಬ್ಬು, ಕಾಫಿ ಈ ಬೆಳೆಗಳಲ್ಲಿ ಅಭಿವೃದ್ಧಿ ಹೊಂದಿಕೊಂಡು ಬರುತ್ತಾ ಇದ್ದೇವೆ ಮತ್ತು ಒಬ್ಬನ ತಲಾ ವರಮಾನ 1950-51 ನೇ ಸಾಲಿಗಿಂತ, 1960-61 ನೇ ಸಾಲಿಗೆ 311 ರೂಪಾಯಿ ಆದಾಯ ಬರತಕ್ಕಂಥ ನಿರೀಕ್ಷಣೆ ಇದೆ ಅನ್ನತಕ್ಕಂಥಾದ್ದನ್ನು ಹೇಳಿದ್ದಾರೆ. ನಾನಾದರೂ ಈಗ ಉತ್ಪತ್ತಿ ಆದಾಯದಲ್ಲಿ ಹಾಗೆ ಇಲ್ಲ ಅನ್ನತಕ್ಕಂಥಾದ್ದನ್ನು ಹಣಕಾಸಿನ ಸಚಿವರ ಗಮನಕ್ಕೆ ಸ್ವಲ್ಪ ತರುತ್ತೇನೆ. ಕಾರ್ಖಾನೆಯಲ್ಲಿ ತಯಾರಾಗತಕ್ಕಂಥ, ವಿಜ್ಞಾನದಿಂದ ತಯಾರಾಗತಕ್ಕಂಥ ಸಮಸ್ತ ಕಬ್ಬಿಣವಾಗಲಿ, ಔಷಧಿ ಸಾಮಾಗ್ರಿಗಳಾಗಲಿ, ಬಟ್ಟೆಯಾಗಲೀ, ಯಾವುದೇ ಸಾಮಾನಾಗಲಿ, ಅದನ್ನು ಫ್ಯಾಕ್ಟರಿಯಲ್ಲಿ ಉತ್ಪತ್ತಿ ಮಾಡುವುದಕ್ಕೆ ಏನು ಒಂದು ಖರ್ಚು ತಗುಲುತ್ತದೋ, ಆ ಖರ್ಚಿನ ಆಧಾರದ ಮೇಲೆ ಒಂದು ರೇಟನ್ನು fix ಮಾಡಿರತಕ್ಕಂಥಾದ್ದು ಸಹಜ. ಇಂಥ ಕೆಲವು ವಸ್ತುಗಳ ಮೇಲೆ ಮೊನ್ನೆ ತಾನೆ ಕೇಂದ್ರ ಸರ್ಕಾರದವರು ಕೂಡ ಕೆಲವು ತೆರಿಗೆಗಳನ್ನು ಹಾಕಿದ್ದಾರೆ. ಹೀಗಾದನಂತರ ಆ ತೆರಿಗೆಗಳು ಕೊಂಡುಕೊಳ್ಳತಕ್ಕಂಥ ಒಬ್ಬ ರೈತನ ಮೇಲೆ ಬಿದ್ದು, ಖೋತ ಭರ್ತಿಯಾಗುತ್ತದೆಯೇ ವಿನಃ ಉತ್ಪತ್ತಿ ಮಾಡತಕ್ಕಂಥ ಮನುಷ್ಯನ ಮೇಲೆ ಯಾವ ಒಂದು ನಷ್ಟದ ಫಲವೂ ಆಗುತ್ತಾ ಇಲ್ಲ.

6-00 P.M.

ಇವತ್ತು ಸೀಮೆ ಎಣ್ಣೆ ಒಂದು ಸೀಸೆಗೆ 10 ಪೈಸ ಜಾಸ್ತಿಯಾಗಿದೆ. ಇದು ಯಾರಮೇಲೆ ಬೀಳುತ್ತದೆ ? ಈ ದಿವಸ ಬಡತನದಲ್ಲಿರತಕ್ಕ ರೈತನ ಮೇಲೆ ಬೀಳುತ್ತದೆ. ಹೀಗಾಗಿ ರೈತ ಕೊಂಡುಕೊಳ್ಳತಕ್ಕ ವಸ್ತುಗಳ ಮೇಲೆ ಹೆಚ್ಚಿನ ಬೆಲೆ ಬಿದ್ದು ಅವನ ಮನೆಯಲ್ಲಿರತಕ್ಕ ನಂದಾದೀಪ ಆರಿ ಹೋಗುತ್ತಾ ಇದೆ. ಒಂದು ವಿಷಯವನ್ನು ಹೇಳುತ್ತೇನೆ ವ್ಯವಸಾಯದ ವಸ್ತುಗಳನ್ನು ಅವನು ಬೆಳೆಯುತ್ತಾನೆ, ಈಗತಾನೆ ಟ್ಯಾಕ್ಸ್ ಹಾಕತಕ್ಕ ವಸ್ತುಗಳ ವಿಚಾರ ಹೇಳಿದೆನಲ್ಲಾ ಅವು ವಿಜ್ಞಾನದಿಂದ ಆಗತಕ್ಕ ವಸ್ತುಗಳು, ರೈತ ಬೆಳೆಯತಕ್ಕ ವಸ್ತುಗಳು ಮಳೆ ದೆಶೆಯಿಂದ ಮತ್ತು ಭಗವಂತನ ಆಶೀರ್ವಾದದಿಂದ ಭೂಮಿಯಲ್ಲಿ ಆಗತಕ್ಕ ಫಸಲು ಬರಬೇಕು. ಅಷ್ಟರೊಳಗಾಗಿ ರೋಗ ಬರಬಹುದು, ಹಂದಿಗಳ ಕಾಟ ಜಾಸ್ತಿ ಆಗಬಹುದು, ಹಕ್ಕಿಗಳು ತಿನ್ನಬಹುದು, ಹೆಚ್ಚು ಮಳೆ ಬಂದು ಲುಕ್ಸಾನಾಗಬಹುದು. ಇಷ್ಟೆಲ್ಲಾ ಆಗಿ ಜನತೆಗೂ ಮತ್ತು ಭಗವಂತನಿಗೂ

ಕೂಡ ಅರ್ಪಿತವಾಗತಕ್ಕ ಆಹಾರ ಧಾನ್ಯವನ್ನು ಬೆಳೆಯುತಕ್ಕವನು ಯಾರು ? ರೈತ. ಈ ದಿವಸ ವ್ಯವಸಾಯದ ಇಲಾಖೆಯವರು ರಾಜ್ಯದಲ್ಲಿ ವ್ಯವಸಾಯದ ಫಾರಂಗಳನ್ನು ಮಾಡಿ ಬತ್ತ, ರಾಗಿ, ಜೋಳ, ನವಣೆ, ಕಬ್ಬು ಇತ್ಯಾದಿಯಾಗಿ ಅನೇಕ ಧಾನ್ಯಗಳನ್ನು ಬೆಳೆಯುತ್ತಾ ಇದ್ದಾರೆ. ರೈತರಿಗೆ ಮಾದರಿಯಾಗಿ ತೋರಿಸುತ್ತಾ ಇದ್ದಾರೆ. ಇದನ್ನು ಸರ್ಕಾರದವರು ಚೆನ್ನಾಗಿ ಯೋಚನೆ ಮಾಡ ಬೇಕಾಗುತ್ತದೆ. ಇಲಾಖೆಯಲ್ಲಿ ಎಷ್ಟು ಖರ್ಚು ಮಾಡಿದ್ದಾರೆ-ಒಂದು ಎಕರೆಯಲ್ಲಿ ಎಷ್ಟುಮಟ್ಟಿಗೆ ಉತ್ಪನ್ನ ಬಂದಿದೆ, ಯಾವ ಧಾನ್ಯವೇ ಆಗಲೀ ಖರ್ಚು ಮಾಡಿರತಕ್ಕ ಹಣಕ್ಕೂ ಉತ್ಪನ್ನವಾಗಿರತಕ್ಕ ಆಹಾರ ಧಾನ್ಯಕ್ಕೂ ಲೆಕ್ಕಾಚಾರ ಹಾಕಿ ನೋಡಬೇಕು. ಈ ಅಂಕಿ ಅಂಶ ವ್ಯವಸಾಯದ ಇಲಾಖೆಯಲ್ಲಿ ಇದೆ. ತಾವು ಯೋಚನೆ ಮಾಡಬೇಕು. ಫ್ಯಾಕ್ಟರಿಯಲ್ಲಿ ಹೇಗೆ ಖರ್ಚಾಗತಕ್ಕ ಮಾಲನ್ನು ತಯಾರಾಗುವ ಖರ್ಚಿನ ಮೇಲೆ ಲೆಕ್ಕಾಚಾರ ಹಾಕಿ ರೇಟ್ ನಿಗದಿ ಮಾಡುತ್ತಾರೆಯೋ ಹಾಗೆ ಅತಿ ಮುಖ್ಯವಾದ ಆಹಾರ ಧಾನ್ಯದಮೇಲೂ ಒಂದು ಧಾರಣೆಯನ್ನು ನಿಗದಿ ಮಾಡಬೇಕು. ಆ ತರಹ ಮಾಡುತ್ತಿಲ್ಲ. ತುಂಬಾ ಅನ್ಯಾಯವಾಗುತ್ತಾ ಇದೆ. ಒಬ್ಬ ರೈತ ಒಂದು ಜೊತೆ ಎತ್ತು ತೆಗೆದುಕೊಳ್ಳಬೇಕಾದರೆ 500-600 ರೂಪಾಯಿ ಆಗುತ್ತದೆ. ಒಂದು ಗಾಡಿಗೆ 500 ರೂಪಾಯಿ ಆಗುತ್ತದೆ. ಗೊಬ್ಬರ ದುಬಾರಿಯಾಗಿದೆ. ಕಬ್ಬಿಣ ದುಬಾರಿಯಾಗಿದೆ. ಹೀಗಿರುವಾಗ ನಾನು ಬರೀ ವ್ಯವಸಾಯವನ್ನೇ ಅವಲಂಬಿಸಿ ಕೊಂಡಿರುವವನು. ಇನ್ನಾವ ಬಿಸಿನೆಸ್ಸೂ ನನ್ನಲ್ಲಿ ಇಲ್ಲ. ಒಂದು ಪಲ್ಲಾ ದಪ್ಪ ಬತ್ತಕ್ಕೆ 35 ರೂಪಾಯಿ ಬೆಲೆಯನ್ನು ನಿಗದಿ ಮಾಡುವುದಕ್ಕೆ ಸಾಧ್ಯವಿದೆ. 38 ರೂಪಾಯಿ ಸಣ್ಣ ಬತ್ತಕ್ಕೆ ನಿಗದಿ ಮಾಡಲು ಸಾಧ್ಯವಿದೆ. ಈ ರೀತಿ ಒಂದು ಧಾರಣೆಯನ್ನು ನಿಗದಿ ಮಾಡದೇ ಹೋದ ಪಕ್ಷಕ್ಕೆ ಗ್ರಾಮದಲ್ಲಿರತಕ್ಕ, ಬಡತನದಲ್ಲಿರತಕ್ಕ ರೈತನಿಗೆ ನೀವು ಯಾವ ಒಂದು ರೀತಿಯಲ್ಲೂ ಅವನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸತಕ್ಕ ಕೆಲಸಕ್ಕೆ ಕೈಹಾಕಿದಂತಾಗುವುದಿಲ್ಲ. ಏಕೆ ಹೇಳುತ್ತೇನೆ ಎಂದರೆ ಮೊನ್ನೆತಾನೆ ಒಂದಕ್ಕೆ ಎರಡರಷ್ಟು ಕಂದಾಯವನ್ನು ಜಾಸ್ತಿ ಮಾಡಿದ್ದೀರಿ. ಈ ರೀತಿ ಜಾಸ್ತಿ ಮಾಡುವುದರಲ್ಲಿದ್ದೀರೇ ಹೊರತು ಬೆಳೆಯುತಕ್ಕ ವಸ್ತುಗಳ ಮೇಲೆ ಧಾರಣೆ ನಿಗದಿ ಮಾಡತಕ್ಕ ಕೆಲಸದಲ್ಲಿ ತೊಡಗಿಲ್ಲ. ಜನ ಮಾತನಾಡುತ್ತಾ ಇದ್ದಾರೆ, ನಾನಾದರೂ ಹೇಳುತ್ತೇನೆ ಈ ವಿಷಯದಲ್ಲಿ ಧಾರಣೆ ನಿಗದಿ ಮಾಡದಿದ್ದ ಪಕ್ಷದಲ್ಲಿ ಒಂದಾನೊಂದು ದಿವಸ ಕ್ರಾಂತಿಯಾಗಿ ರೈತರು ದಂಗೆ ಏದ್ದಾರು ಎಂಬ ಒಂದು ಸೂಚನೆಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕಬ್ಬು ಬೆಳೆಯುವ ಪ್ರದೇಶದಲ್ಲಿ ರಸ್ತೆ ಸಂಚಾರ ಮಾರ್ಗಕ್ಕೆ 20 ಲಕ್ಷ ರೂಪಾಯಿ ಇಡೀ ಮೈಸೂರು ರಾಜ್ಯಕ್ಕೆ ಕೊಟ್ಟಿದ್ದೀರಲ್ಲಾ ಇದು ಸಾಕೇ? ನೀರು ಇರತಕ್ಕ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಬಹುದೇ ಹೊರತು ಖುಷ್ಕಿ ಜಮೀನಿನಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲ. ಆ ಪ್ರದೇಶದಲ್ಲಿ ಒಂದು ಲಾರಿ ಹೋಗಬೇಕಾದರೆ ರಸ್ತೆ ಚೆನ್ನಾಗಿರಬೇಕು. ಈ ವಿಷಯದಲ್ಲಿ ಹಣಕಾಸಿನ ಸಚಿವರು ಗ್ರಾಮಾಂತರ ಪ್ರದೇಶದಲ್ಲಿ ಕಬ್ಬು ಬೆಳೆಯುತಕ್ಕವರ ಬಗ್ಗೆ ತಮ್ಮ ಎರಡು ಕಣ್ಣು, ಎರಡು ದೃಷ್ಟಿಯನ್ನಿಡಬೇಕು, ರಸ್ತೆ ಮಾರ್ಗಕ್ಕೆ ಹೆಚ್ಚು ಹಣ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ ನಮ್ಮ ಕಾರ್ಮಿಕ ಸಚಿವರೂ ಇದ್ದಾರೆ, ಮನೆಗಳನ್ನು ಕಟ್ಟಿಸತಕ್ಕ ಸಚಿವರೂ ಇದ್ದಾರೆ, ಗ್ರಾಮಾಂತರ ಪ್ರದೇಶದಲ್ಲಿ ವಸತಿ ಸೌಕರ್ಯಕ್ಕೆ 6 ಲಕ್ಷ ರೂಪಾಯಿ ಒದಗಿಸಿದ್ದೀರಿ. ಇದು ಹೇಗೆ ಸಾಕಾಗುತ್ತದೆ? ಹೇಳಿ. ರಾಜ್ಯದಲ್ಲಿ ಒಟ್ಟು 25,880 ಗ್ರಾಮಗಳು ಇವೆ. 6 ಲಕ್ಷ ರೂಪಾಯಿಗಳು ಹೇಗೆ ಸಾಕಾಗುತ್ತದೆ? ಅಥವಾ ಕೊಡುವುದಕ್ಕಾಗುವುದಿಲ್ಲ ಎಂದು ಆದರೂ ಹೇಳಿ. ಪಟ್ಟಣ ವಾಸಿಗಳಿಗೆ ಕೋಟ್ಯಾಂತರ ರೂಪಾಯಿ ಹಣ ಇದುವರೆಗೂ ಖರ್ಚು ಮಾಡಿದ್ದೀರಿ. ಗ್ರಾಮಾಂತರ ಪ್ರದೇಶಕ್ಕೆ ಒದಗಿಸಿರುವುದು ನಿಜವಾಗಿಯೂ ಬಹಳ ಕಡಿಮೆ. ವರ್ಷಕ್ಕೆ 2 ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಕಡಿಮೆ. ಅಷ್ಟಾದರೂ ಕೂಡ ಖರ್ಚು ಮಾಡಬೇಕೆಂದು ಹಣಕಾಸಿನ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಮೆಡಿಕಲ್ ಕಾಲೇಜಿನ ವಿಚಾರ. ಗ್ರಾಮಾಂತರ ಪ್ರದೇಶಗಳಲ್ಲಿ, ಟೌನ್‌ಗಳಲ್ಲಿ ಆಸ್ಪತ್ರೆ ಇದ್ದರೂ ಕೂಡ ಡಾಕ್ಟರುಗಳು ಅಲ್ಲಿಗೆ ಹೋಗುತ್ತಿಲ್ಲ ಎಂದು ಹೇಳುತ್ತೀರಿ. ಶಿವಮೊಗ್ಗಾ ಜಿಲ್ಲೆಯಲ್ಲಿರತಕ್ಕ ಎಲ್ಲಾ ಡಿಸ್ಪೆನ್ಸರಿಗಳಿಗೂ ಕೂಡ ಆರೀತಿ ಆಗಿದೆ. ಆದ್ದರಿಂದ ಶಿವಮೊಗ್ಗಕ್ಕೆ ಒಂದು ಮೆಡಿಕಲ್ ಕಾಲೇಜನ್ನು ಕೊಡಬೇಕಾದ್ದು ಬಹಳ ಅಗತ್ಯವಾಗಿದೆ. ಶಿವಮೊಗ್ಗ ಜಿಲ್ಲೆ ಮಲೆನಾಡು ಪ್ರಾಂತ್ಯದಲ್ಲಿ ಅತಿ ಮುಖ್ಯವಾಗಿರತಕ್ಕ ಸ್ಥಳ. ಅಲ್ಲಿ ಜನರಲ್ ಆಸ್ಪತ್ರೆ ಇದೆ. ಆದ್ದರಿಂದ ಶಿವಮೊಗ್ಗದಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆಗೆಯಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಹಣದ ಅಡಚಣೆ ಇದೆ, ತುರ್ತುಪರಿಸ್ಥಿತಿ ಇದೆ ಎಂದು ಹಣಕಾಸಿನ ಸಚಿವರು ಹೇಳುತ್ತಿರುವಾಗ ನಮಗೆ ಬರಬೇಕಾಗಿರತಕ್ಕ ಬಾಕಿ ಹಣ 37 ಕೋಟಿ ರೂಪಾಯಿಗಳಿವೆ. ಇದನ್ನು ಏಕೆ ಬಾಕಿ ಬಿಟ್ಟಿದ್ದೀರಿ ? ನಮ್ಮ ತುಂಗಭದ್ರಾ ಸಕ್ಕರೆ ಕಾರ್ಖಾನೆಯವರು ಆರು ಲಕ್ಷ ರೂಪಾಯಿಗಳನ್ನು ಬಾಕಿ ಕೊಡಬೇಕು ಎಂದು ಸುಮಾರು 3-4 ತಿಂಗಳ ಕೆಳಗೆ ಇದೇ ಸಭೆಯಲ್ಲಿ ಮಾನ್ಯ ಹಣಕಾಸಿನ ಸಚಿವರು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಉತ್ತರಕೊಟ್ಟರು. ಯಾರು ಸಲೀಸಾಗಿ ವಾಪಸು ಕೊಡುತ್ತಾರೋ ಅವರಿಗೆ ಸಾಲ ಕೊಡಿ. ಟೈಂಗೆ ಸರಿಯಾಗಿ ವಾಪಸು ಕೊಡದಿದ್ದರೆ ಅವರ ಸ್ವತ್ತನ್ನು ಹರಾಜು ಮಾಡಿ, ದಯಾ ದಾಕ್ಷಿಣ್ಯಕ್ಕೆ ತಾವು ಮಣಿಯಬಾರದು. ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಆ 37 ಲಕ್ಷ ರೂಪಾಯಿಗಳನ್ನು ವಸೂಲು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ರಂಗೋಲಿ ಹಳ್ಳದ ಸೇತುವೆ ಮಂಜೂರಾಗಿದೆ. ಇವತ್ತಿಗೂ ಕೂಡ ಕೆಲಸ ಶುರುವಾಗಿಲ್ಲ. ರಂಗೋಲಿ ಹಳ್ಳದ ಸೇತುವೆ ಅತಿ ಮುಖ್ಯವಾಗಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೆಯೇ ಕಾಗೆ ಹಳ್ಳದ ಸೇತುವೆ ಅಂತ ಇದೆ. ಅದೂ ಕೂಡ ಅತಿ ಮುಖ್ಯವಾಗಿ ಆಗಬೇಕಾಗಿದೆ. ಅದನ್ನೂ ಮಾಡಿಸಬೇಕೆಂದು ಹೇಳುತ್ತೇನೆ.

ಸೋಷಿಯಲ್ ವೆಲ್‌ಫೇರ್ ಮಿನಿಸ್ಟರು ಇಲ್ಲಿ ಇದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಹಿಂದುಳಿದ ಪಂಗಡದವರಾದ ಬಣಜಾರರು, ಹರಿಜನರಿರತಕ್ಕ ಅರಳಿಕೊಪ್ಪ ಗ್ರಾಮಕ್ಕೆ ಕಾಲೋನಿ ಮಾಡಬೇಕೆಂದು ಎಸ್ಟಿಮೇಟ್ ಆಗಿ, ರೆಕಾರ್ಡ್ ಆಗಿದೆ. ಇದುವರೆಗೂ ಹಣ ಕೊಟ್ಟಿಲ್ಲ. ಕೂಡಲೇ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶಿವಮೊಗ್ಗದಲ್ಲಿ ಈಗ ಒಂದು ಬೆಂಕಿಕಡ್ಡಿ ತಯಾರಿಸುವ ಕಾರ್ಖಾನೆಯಿದೆ. ಈಗ ನಮಗೆ ತುರ್ತು ಪರಿಸ್ಥಿತಿ ಬೇರೆ ಬಂದಿದೆ. ಜನಗಳಿಗೆ ಕೆಲಸವೇ ಸಿಕ್ಕುತ್ತಿಲ್ಲ ಎಂತ ಹೇಳುತ್ತಿರುವ ಈ ಕಾಲದಲ್ಲಿ ಈ ಫ್ಯಾಕ್ಟರಿಯನ್ನು ನಡೆಸದೆ ಇರುವುದಕ್ಕೆ ಕಾರಣವಾದರೂ ಏನು ? ನಾವು ನಮ್ಮಲ್ಲಿ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಬೆಳಸಬೇಕು ಎನ್ನತಕ್ಕ ಅನೇಕ ಯೋಜನೆಗಳನ್ನು ಇಟ್ಟುಕೊಂಡಿರುವಾಗ, ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆಮಾಡಬೇಕೆಂದು ಹೇಳುತ್ತಿರುವಾಗ, ಹಾಲಿ ಇರತಕ್ಕ ಕಾರ್ಖಾನೆಯನ್ನು ಹೀಗೆ ಮುಚ್ಚಿರತಕ್ಕದ್ದು ಸರಿಯಾದುದಲ್ಲ. ಇದನ್ನು ಕೂಡಲೆ ನಡೆಸತಕ್ಕ ವ್ಯವಸ್ಥೆ ಮಾಡಬೇಕು ಎಂಬುದನ್ನು ತಿಳಿಸುತ್ತ ನಾನು ಈ ಹಿಂದೆ ಹೇಳಿದ ರೀತಿಯಲ್ಲಿ ರೈತನ ಮೇಲೆ ಸರ್ಕಾರದವರ ದಯೆಯಿರಬೇಕು. ಬಸವೇಶ್ವರನು ''ದಯೆಯೇ ಧರ್ಮದ ಮೂಲವಯ್ಯ'' ಎಂತ ಹೇಳಿರುವುದನ್ನು ನಮ್ಮ ಹಣಕಾಸಿನ ಸಚಿವರು ಅರಿತಿದ್ದಾರೆ. ರೈತನು ಬೆಳೆಯತಕ್ಕ ಧಾನ್ಯಗಳ ಬೆಲೆಯನ್ನು ನಿಗದಿ ಮಾಡಬೇಕು. ಇದರಿಂದ ಯಾರಿಗೂ ಅನ್ಯಾಯವಾಗುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂಬ ಭರವಸೆ ನನಗಿದೆ. ನನಗಿಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ದಯಾನಂದ ಆರ್. ಕಳ್ಳೇ (ಕಾರ್ಕಳ):— ಮಾನ್ಯ ಸಭಾಪತಿಗಳೇ, 1963–64 ನೆಯ ಸಾಲಿನ ಈ ಆಯವ್ಯಯ ಪಟ್ಟಿಯನ್ನು ವಿರೋಧಿಸುತ್ತ ನಾನು ಕೆಲವು ವಿಷಯಗಳನ್ನು ಈಗ ಹೇಳಬಯಸುತ್ತೇನೆ.

ಈ ಹಿಂದೆ ಏಕಾನಮಿ ಅಂಡ್ ರಿಸೋರ್ಸಸ್ ಸಮಿತಿಯವರ ವರದಿಯಲ್ಲಿ ಸೂಚಿಸಲಾಗಿದ್ದ ಸಲಹೆಗಳನ್ನು ಈ ಸಭೆಯು ದೀರ್ಘವಾಗಿ ಚರ್ಚೆ ಮಾಡಿತು. ಆಡಳಿತ ಸೂತ್ರ ಹಿಡಿದಿರುವ ಮಂತ್ರಿಗಳೂ ಸಹ ಮಿತವ್ಯಯದ ಸಲಹೆಗಳನ್ನು ಅನುಸರಿಸಬೇಕು ಹಾಗೂ ಅವುಗಳನ್ನು ಕಾರ್ಯರೂಪಕ್ಕೆ ತರಬೇಕು ಎಂಬ ವಿಚಾರದಲ್ಲಿ ಆ ದಿವಸ ಮಂತ್ರಿಗಳು ಅವರೂ ಸಹ ಈ ಮಿತವ್ಯಯವನ್ನು ಕಾರ್ಯರೂಪಕ್ಕೆ ತರುವುದಾಗಿ ತಿಳಿಸಿದ್ದರು. ಆದರೆ ಆ ರೀತಿ ಅವರು ಇಲ್ಲಿಯವರೆಗೆ ಯಾರೂ ಯಾವರೀತಿಯಲ್ಲೂ ಅದನ್ನು ಜಾರಿಗೆ ತಂದಂತೆ ಕೇಳಿಬರುವುದಿಲ್ಲ. ಆದರೆ ನಮಗೆ ಈಗ ಒದಗಿರತಕ್ಕ ತುರ್ತು ಪರಿಸ್ಥಿತಿಯಲ್ಲಿ ಮಿತವ್ಯಯವನ್ನು ಕಡ್ಡಾಯವಾಗಿ ಎಲ್ಲರೂ ಮಾಡಲೇ ಬೇಕು. ಇಂಥಾ ಸಮಯದಲ್ಲಾದರೂ ಜನರಿಗೆ ಒಂದು ಮಾರ್ಗದರ್ಶಕರಾಗಿರಲು ಈ ಮಂತ್ರಿಗಳು ತಮ್ಮ ಸಂಚಾರ ಹೊರಡುವುದನ್ನು ಕಡಮೆ ಮಾಡಿದ್ದರೆ ಅವರಿಂದಲಾದರೂ ಅವರು ಈ ಮಿತವ್ಯಯದ ಸಲಹೆಗಳನ್ನು ಜಾರಿಗೆ ತಂದಿದ್ದಾರೆಂತ ಜನಗಳಿಗೆ ತೋರಿಸಬಹುದಾಗಿತ್ತು. ನಮಗೆ ತುರ್ತುಪರಿಸ್ಥಿತಿ ಬಂದಿರತಕ್ಕ ಈ ಕಾಲದಲ್ಲೇ ಈ ಸಚಿವರುಗಳ ತಿರುಗಾಟ ಕಡಿಮೆಯಾಗುವುದಕ್ಕೆ ಬದಲು ದ್ವಿಗುಣವಾಗಿದೆ. ಆದರೆ ನಾನು ಮಂತ್ರಿಗಳು ಸಂಚಾರ ಮಾಡಲೇಬಾರದೆಂದು ಹೇಳುತ್ತಿಲ್ಲ. ದೇಶದಲ್ಲಿ ಅಂಥಾ ಕ್ಷಾಮಡಾಮರಗಳು ಬಂದು ಅನಿಶ್ಚಿತ ಪರಿಸ್ಥಿತಿಗಳು ಉಂಟಾಗಿದ್ದರೆ ಅಂಥಾ ಕಾಲದಲ್ಲಿ ಹೋಗಲೇ ಬೇಕು. ಆದರೆ ಈಗ ಅಂಥ ಪರಿಸ್ಥಿತಿಗಳೇನೂ ಇಲ್ಲದಿದ್ದರೂ ಕೇವಲ ಯಾವುದೋ ಕಟ್ಟಡದ ಓಪನಿಂಗ್ ಸೆರಮನಿ ಇತ್ಯಾದಿ ವಿಷಯಗಳಿಗೆಲ್ಲ ಇವರು ಹೋಗುತ್ತಿದ್ದಾರೆ. ನಾನು ಇದನ್ನು ಬಹಳವಾಗಿ ವಿರೋಧಿಸುತ್ತೇನೆ.

ಇನ್ನು ಎರಡನೇಯದಾಗಿ ಈ ಆ ಮಲೆನಾಡು ಪ್ರದೇಶದಲ್ಲಿ ಹೊರಗಡೆಯವರು ನಮ್ಮ ರಾಜ್ಯದೊಳಕ್ಕೆ ಬಂದಿದ್ದಾರೆ. ಅವರು ಕೇರಳಿಗರು. ಅವರು ಇಲ್ಲಿಗೆ ಬಂದು ನಮ್ಮ ಬೆಲೆಬಾಳತಕ್ಕ ಮರಗಳಿದ್ದ ನೂರಾರು ಎಕರೆ ಅರಣ್ಯ ಪ್ರದೇಶದಲ್ಲಿದ್ದ ಬೆಲೆಬಾಳತಕ್ಕ ಮರಗಳನ್ನೆಲ್ಲಾ ನಾಶಮಾಡಿ, ಸರ್ಕಾರಕ್ಕೆ ಅದರಿಂದ ಬರುತ್ತಿದ್ದ ಸಂಪಾದನೆಯನ್ನು ಹಾಳುಮಾಡಿ, ಆ ಅರಣ್ಯಕ್ಕೆ ಸೇರಿದ್ದ ಪ್ರದೇಶದಲ್ಲಿ ಈಗ ಅವರು ಬಗರ್ ಹುಕ್ಕುಂನಿಂದ ಜಮೀನು ಸಾಗುವಳಿ ಮಾಡುತ್ತಿದ್ದಾರೆ. ಹೀಗೆ ಕಳೆದ 7-8 ವರ್ಷಗಳಿಂದ ಆ ನರಸಿಂಹರಾಜಪುರ ತಾಲ್ಲೂಕಿನಲ್ಲಿ ಅವರು ಆ ಬಗರ್ ಹುಕ್ಕುಂ ಸಾಗುವಳಿಯನ್ನು ಅವ್ಯಾಹತವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಈ ದಿವಸ ಹೀಗೆ ಅವರು ದುರಾಕ್ರಮಣ ಮಾಡಿಕೊಂಡಿರತಕ್ಕ ಪ್ರದೇಶ ಸುಮಾರು 800 ಎಕರೆಗಳಾಗಬಹುದು. ಈ ಜಮೀನೆಲ್ಲ ಈಗ ಬಗರ್ ಹುಕ್ಕುಂ ಸಾಗುವಳಿಯಲ್ಲಿರುತ್ತದೆ. ಒಬ್ಬೊಬ್ಬನ ಹಿಡಿತದಲ್ಲೂ 30-40 ಎಕರೆಗಳ ವರೆಗೂ ಜಮೀನು ಸಾಗುವಳಿಯಾಗುತ್ತಿದೆಯೆಂದು ತಿಳಿದುಬಂದಿದೆ. ಆದರೆ ಅವರು ಹಾಗೆ ದುರಾಕ್ರಮಣ ಮಾಡಿಕೊಂಡ ವೇಳೆಯಲ್ಲಿ ಕಂದಾಯ ಮಂತ್ರಿಗಳಿಗೆ ಈ ವಿಚಾರದಲ್ಲಿ ಜನರು ಮನವಿಗಳನ್ನೊಪ್ಪಿಸಿದ್ದಾರೆ. ಆದರೆ ಇಲ್ಲಿಯವರೆಗೂ ಯಾರೂ ಯಾವ ಕಾರ್ಯಕ್ರಮವನ್ನೂ ಇದರ ಬಗ್ಗೆ ಕೈಕೊಂಡಿಲ್ಲ. ಈ ಹಿಂದೆ ಅವರು ಪ್ರಾರಂಭದಲ್ಲಿ ಬಂದಾಗ ಹಿಡಿದಿದ್ದ ಜಮೀನಿನ ವಿಸ್ತೀರ್ಣ 400-500 ಎಕ್ರೆಗಳಷ್ಟಿದ್ದುದ್ದು ಈ ದಿವಸ 800 ಎಕರೆಗಳಿಗೆ ಏರಿದೆ. ಆ ಪ್ರದೇಶದಲ್ಲಿದ್ದ ಬೆಲೆ ಬಾಳತಕ್ಕ ಮರಗಳನ್ನೆಲ್ಲ ಅವರು ಕತ್ತರಿಸಿ ಮಾರಾಟ ಮಾಡಿಕೊಂಡಿದ್ದಾರೆ. ಇದರಿಂದ ಇಲ್ಲಿಯವರೆಗೆ ಸರ್ಕಾರಕ್ಕೆ ಎಷ್ಟು ಹಣ ಲುಕ್ಸಾನಾಗಿದೆ ಎಂಬುದನ್ನು ಈ ಸಭೆಯವರೆಲ್ಲರೂ ಪರ್ಯಾಲೋಚನೆ ಮಾಡಬೇಕಾಗಿದೆ. ಒಂದಾವರ್ತಿ ಆ ಸ್ಥಳಕ್ಕೆ ಸ್ಪಾಟ್ ಇನ್ಸ್ಪೆಕ್ಷನ್‌ಗಾಗಿ ಜಿಲ್ಲಾಧಿಕಾರಿಗಳು ಬಂದಿದ್ದಾಗ ಅವರು ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರ ನೋಡಿ ಅವರು ಅವರಿಗೆ ಒಂದು ಇವಿಕ್ಷನ್ ಆರ್ಡರನ್ನು ಕೊಟ್ಟರು. ಆ ಕೂಡಲೆ ಆ ಜನರಲ್ಲಿ ಕೆಲವರು ಬೆಂಗಳೂರಿಗೆ ಬಂದು ಇಲ್ಲಿಯ ಕೆಲವು ರಾಜಕೀಯ ಮುಖಂಡರನ್ನು ಕಂಡು ಆ ಇವಿಕ್ಷನ್ ಆರ್ಡರಿಗೆ ಸ್ಟೇ ತೆಗೆದುಕೊಂಡ ಪ್ರಸಂಗ ಕಂಡುಬರುತ್ತಿದೆ. ಈ ಹಿಂದೆ ಒಂದಾವರ್ತಿ ರೆವಿನ್ಯೂ ಸಬ್ ಡಿವಿಜನ್ ಆಫೀಸರವರು ಆ ಜಾಗಕ್ಕೆ ಸ್ಥಳಪರಿಕ್ಷೆಗಾಗಿ ಹೋಗಿದ್ದಾಗ ಆ ಜನರು ಇವರ ಮೇಲೆ ಕೈಮಾಡಿದ ಪ್ರಸಂಗ ಕೂಡ ಜರುಗಿವೆ. ಈ ವಿಚಾರ ಸರ್ಕಾರದವರಿಗೆ ಚೆನ್ನಾಗಿ ಗೊತ್ತಿದೆ. ಇಷ್ಟೆಲ್ಲಾ ಆಗಿದ್ದರೂ ಸರ್ಕಾರ ಯಾವ ವಿಧವಾದ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಅವರು ಅವರ ಆಕ್ರಮಣವನ್ನು ಅವ್ಯಾಹತವಾಗಿ ನಡೆಸಿಕೊಂಡು ಹೋಗುತ್ತಲೇ ಇದ್ದಾರೆ. ಅವರ ಕೈಗೆ ಅಡ್ಡಿ ಅಡಚಣಗಳೇ ಇಲ್ಲ. ಸರ್ಕಾರ ಈ ಕಡೆ ಇಷ್ಟು ನಿರ್ಬಲರಾಗಿರುವುದನ್ನು ನೋಡಿದರೆ ಈ ರಾಜ್ಯದಲ್ಲಿ ಸರ್ಕಾರ ಎಂಬುದು ಇದೆಯೋ-ಇಲ್ಲವೋ ಎಂದು ಕೇಳತಕ್ಕ ಪ್ರಸಂಗ ಉಂಟಾಗಿದೆ. ಈ ರಾಜ್ಯದಲ್ಲೇ ಹುಟ್ಟಿ-ಬೆಳೆದು ಇಲ್ಲಿಯೇ ಇರತಕ್ಕ ಜನಗಳಿಗೆ ಉಳಲು ಎರಡೆಕರೆ ಭೂಮಿಯಿಲ್ಲ - ಉಳಲಿಕ್ಕೆ ಎರಡೆಕರೆ ಭೂಮಿ ಕೊಡಿ ಎಂತ ಸರ್ಕಾರಕ್ಕೆ ದರಖಾಸ್ತ್ ಅರ್ಜಿ ಹಾಕಿಕೊಂಡರೆ ಅಂಥವರ ಅರ್ಜಿಗಳನ್ನು ಸರ್ಕಾರದವರು ನಿರಾಕರಿಸುತ್ತಾರೆ. ಹೀಗೆ ಎಲ್ಲಿಯೋ ಇದ್ದು - ಎಲ್ಲಿಂದಲೋ ಬಂದು ಯಾವ ಕಾನೂನನ್ನೂ ಕೇಳದೆ ಯಾವ ಕಟ್ಟಳೆಯನ್ನೂ ಕೇಳದೆ ಯಾವ ನಿರ್ಬಂಧವೂ ಇಲ್ಲದೆ ಇಲ್ಲಿ ಇಷ್ಟೊಂದು ಸ್ವತಂತ್ರವಾಗಿ ಆ ಜನರು ಭೂಮಿ ಆಕ್ರಮಿಸಲು ಅವಕಾಶ ಕೊಡುವುದು ಸರ್ಕಾರದವರಿಗೆ ಸರಿಯೆಂದು ಕಂಡುಬಂದರೆ ಇಲ್ಲಿರತಕ್ಕ ಜನ ಎಲ್ಲಿಗೆ ಹೋಗಬೇಕು ? ಇದನ್ನೆಲ್ಲಾ ನೋಡಿದರೆ ಇಲ್ಲಿ ಸರ್ಕಾರ ಎಂಬುದು ಇದೆಯೋ - ಇಲ್ಲವೋ ಎಂಬುದೇ ಗೊತ್ತಾಗುತ್ತಿಲ್ಲ. ಇಷ್ಟೇ ಅಲ್ಲದೆ ಆ ಜನರು ಬಂದು ನೆಲಸಿರತಕ್ಕ ಸುತ್ತ ಮುತ್ತಲೂ ಇರತಕ್ಕ ಹಳ್ಳಿಗಳಲ್ಲಿ ಆ ಹಳ್ಳಿಯವರ ಜಾನುವಾರುಗಳನ್ನು ಅವರು ಹೊರಗಡೆಗೆ ಬಿಡುವಹಾಗೇ ಇಲ್ಲ. ಅವರು ಜಾನುವಾರುಗಳನ್ನು ಹೊರಗೇನಾದರೂ ಬಿಟ್ಟರೆ ಈ ಜನಗಳು ಅವುಗಳನ್ನು ಹಿಡಿದು ತಂದು ಕಡಿದು ತಿಂದುಹಾಕಿ ಬಿಡುತ್ತಾರೆ. ಹೀಗೆ ಈ ದೌರ್ಜನ್ಯಕಾರರ ಉಪಟಳವನ್ನು ನೋಡಿ ತಡೆಯಲಾರದೆ ಪೋಲೀಸಿನವರಿಗೆ ದೂರನ್ನು ಕೊಟ್ಟಿದ್ದೂ ಆಯಿತು. ಆದರೆ ಅವರೇನೂ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲ. ನಾನು ಈ ವಿಚಾರಗಳನ್ನೇನೂ ಈ ಸಭೆಯಲ್ಲಿ ಉತ್ಪ್ರೇಕ್ಷೆಮಾಡಿ ಹೇಳುತ್ತಿದ್ದೇನೆಂದು ತಾವುಗಳು ಯಾರೂ ಭಾವಿಸಬಾರದು. ನಾನು ಸ್ವತಃ ಕಣ್ಣಾರ ನೋಡಿದ್ದನ್ನೇ ಇಲ್ಲಿ ಈಗ ಹೇಳುತ್ತಿರುವುದು. ತತ್ಸಂಬಂಧದಲ್ಲಿ ಇಲ್ಲಿಗೆ ಒಂದೂವರೆ ತಿಂಗಳ ಕೆಳಗೆ ಕೇಸಾಗಿ ಶಿಕ್ಷೆ ಕೂಡ ಆಗಿದೆ. ಇದಾದಮೇಲೆ ಆ ಜನರು ಸ್ವಲ್ಪ ಕಂಗಾಲಾಗಿದ್ದಾರೆ. ಆದುದರಿಂದ ಈಗ ಈ ಕೃತ್ಯಗಳು ಸ್ವಲ್ಪ ಕಡಮೆಯಾಗಿವೆ. ಈಗಲಾದರೂ ಸರ್ಕಾರದವರು ಆ ಸ್ಥಳಕ್ಕೆ ಹೋಗಿ ನೋಡಲಿ. ನಾನು ಹೇಳಿದಂತೆ ಆ ಮರಮುಟ್ಟುಗಳೆಲ್ಲ ಹಾಳಾಗಿದೆಯೋ - ಇಲ್ಲವೋ ಎನ್ನುವುದು ಗೊತ್ತಾಗುತ್ತದೆ. ಆದರೆ ಈಗ ಅಲ್ಲಿಗೆ ಬಂದು ಅಕ್ರಮವಾಗಿ ನೆಲೆಸಿರತಕ್ಕ ಜನಗಳಿಗೆ ಜಮೀನಿಲ್ಲ ಎಂತ ಇದ್ದರೆ ಅವರಿಗೂ ತಲಾ ಎರಡೆಕರೆ ಜಮೀನನ್ನು ಕೊಡಿ, ಬೇಡ ಎಂತ ಹೇಳುವುದಿಲ್ಲ ಆದರೆ ಆ ರೀತಿ ಅವರಿಗೆ ಕೊಟ್ಟ ನಂತರ ಉಳಿಯುತಕ್ಕ ಜಮೀನೇನಿದೆ ಅದೆಲ್ಲವನ್ನೂ ನಮ್ಮ ಜನಗಳಿಗೆ ಯಾರ್ಯಾರಿಗೆ ಜಮೀನಿಲ್ಲವೋ ಅವರಿಗೆ ಅದನ್ನು ಹಂಚಬೇಕೆಂದು ಹೇಳುತ್ತೇನೆ.

(ಶ್ರೀ ದಯಾನಂದ ಆರ್. ಕಳ್ಳೆ)

ಇನ್ನು ಪಾನನಿರೋಧದ ವಿಷಯ : ಈ ವಿಚಾರದಲ್ಲಿ ಇದೇ ಸಭೆಯಲ್ಲಿ ಅನೇಕ ವೇಳೆ ಬೇಕಾದಷ್ಟು ಚರ್ಚೆ ನಡೆದು ಈ ವಿಚಾರ ಈಗ ತುಂಬಾ ಹಳಸಿ ನಾಥ ಬಡಿಯುತ್ತಿದೆ. ಪಾನನಿರೋಧವನ್ನು ಜಾರಿಗೆ ತರಲು ಹೊರಟ ಪ್ರಯತ್ನಗಳೆಲ್ಲ ನಿಷ್ಫಲವಾಗಿವೆ. ಆದರೂ ಆಡಳಿತ ಪಕ್ಷದವರು ತಮ್ಮ ಒಂದು ಪಕ್ಷದ ತತ್ವ ನಿಷ್ಠೆಗೆ ಕಟ್ಟುಬಿದ್ದು ಅದಕ್ಕೆ ಬಣ್ಣಹಾಕಿ ತಮ್ಮ ಒಂದು ಆ ಒಣ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಇದು ಯಶಸ್ವಿಯಾಗಿವೆ ಎಂತ ಹೇಳಿಕೊಳ್ಳುತ್ತಿರಬಹುದು. ಆದರೆ ಇದು ಯಾವರೀತಿ ಯಶಸ್ವಿಯಾಗಿದೆ ಎಂಬುದು ದೇಶದಲ್ಲಿರತಕ್ಕವರಿಗೆಲ್ಲ ಗೊತ್ತಿದೆ. ಈಗ ದೇಶಾದ್ಯಂತವೂ ನಡೆಯುತ್ತಿರುವ ಕಳ್ಳಭಟ್ಟಿ ವ್ಯವಹಾರ ನೋಡಿದರೆ ಆಡಳಿತ ಸಂಬುದಿದೆಯೋ ಎಂಬ ಅನುಮಾನ ಬರುತ್ತದೆ. ಈ ಹಿಂದೆ ಇದೇ ಸಂಬಂಧವಾಗಿ ಈ ಸಭೆಯಲ್ಲಿ ಒಂದು ಪ್ರಶ್ನೆ ಚರ್ಚೆಯಾಗುತ್ತಿದ್ದ ಕಾಲದಲ್ಲಿ ಗೃಹಮಂತ್ರಿಗಳು ಇದರ ಬಗ್ಗೆ ಬಹಳ ಲಾಘವಾಗಿ ಉತ್ತರ ಕೊಟ್ಟು ಈ ವಿಚಾರದಲ್ಲಿ ಸದಸ್ಯರು ಬಹಳ ಉತ್ಪ್ರೇಕ್ಷೆ ಮಾಡಿ ಮಾತನಾಡುತ್ತಿದ್ದಾರೆಂತ ಹೇಳಿದ್ದಾರೆ. ಅವರಿಗೆ ಈಗ ನಾನಾದರೂ ಇಷ್ಟೇ ಕೇಳುತ್ತೇನೆ—ಅವರು ನಮ್ಮ ಜೊತೆಯಲ್ಲಿ ಮಂತ್ರಿಗಳಾಗಿ ಬರುವುದು ಬೇಡ ಅವರು ಒಬ್ಬ ಸಾಮಾನ್ಯ ಪ್ರಜೆಯಂತೆ ನಮ್ಮ ಜೊತೆಯಲ್ಲಿ ಬರಲಿ ಹಗಲೇ ಹೀಗೆ ಅವರು ಈ ದರೋಡೆ ಮಾಡುತ್ತಿದ್ದಾರೆಂಬುದನ್ನು ನಾನು ತೋರಿಸುತ್ತೇನೆ. ಈ ದಿವಸ ಪೋಲೀಸಿನವರೇ ಈ ಕಳ್ಳಭಟ್ಟಿ ತಯಾರಿಕೆಯ ಮಾಲೀಕರಾಗಿದ್ದಾರೆ. ಅವರ ನೇತೃತ್ವದಲ್ಲೇ ಇದು ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ಈ ವಿಚಾರದಲ್ಲಿ ಜನಗಳ್ಯಾರಾದರೂ ಪೋಲೀಸಿನವರಿಗೆ ದೂರು ಕೊಡುವುದಕ್ಕೆ ಹೋದರೆ, ಆ ದೂರು ಕೊಡಲಿಕ್ಕೆ ಹೋದವನನ್ನೇ ಅವರು ಹೆದರಿಸಿ ಓಡಿಸಿಬಿಡುತ್ತಿದ್ದಾರೆಯೇ ವಿನಾ ಅವರು ಹೋಗಿ ಆ ಕಳ್ಳಭಟ್ಟಿ ತಯಾರಿಸತಕ್ಕವರನ್ನೆಂದೂ ಹಿಡಿದಿಲ್ಲ ; ಹಿಡಿಯುವುದಕ್ಕೂ ಹೋಗಿಲ್ಲ.

ಈ ಸಮಯದಲ್ಲಿ ಪಾನನಿರೋಧ ಜಾರಿಗೆ ಬಂದಿರುವುದರಿಂದ ನಿರ್ಗತಿಕರಾದ ಜನರನ್ನು ಮರೆಯುವುದು ಬೇಡ. ದೇಶದ ಹಿತದೃಷ್ಟಿಯಿಂದ ಬಡವರ ಉದ್ಧಾರಕ್ಕಾಗಿ ಸರ್ವತ್ಯಾಗ ಮಾಡಬೇಕು. ಸಾಮಾನ್ಯವಾಗಿ ಅಂಥವರಿಗೆ ಸಮಾಜದಲ್ಲಿ ಯಾವದಾದರೂ ಒಂದು ಉದ್ಯೋಗ ಕಲ್ಪಿಸಿ ಕೊಟ್ಟಿಲ್ಲ. ಕಡೆಗೆ ಒಂದು ಅನುಕೂಲವಾದ ಜಾಗವನ್ನಾದರೂ ಕೊಡಬಹುದಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಗೆ ಈ ರೀತಿ ಸಹಾಯಮಾಡಿಲ್ಲ. ಅವರ ಕುಲಕಸಬು ಕಸಿದುಕೊಂಡಿರುವದರಿಂದ ಸಮಾಜದ್ರೋಹ ಹೆಚ್ಚಿದೆ. ಅದು ಬೂದಿ ಮುಚ್ಚಿದ ಕೆಂಡದಂತೆ ಸುಡುತ್ತಿದೆ. ಪಾನ ನಿರೋಧ ನೀತಿ ಯಶಸ್ವಿಯಾಗಿಲ್ಲ. ಯಶಸ್ವಿಯಾಗುವುದು ಸಾಧ್ಯವಿಲ್ಲ. ಆದುದರಿಂದ ಪಾನನಿರೋಧವನ್ನು ಪುನಃ ರದ್ದುಮಾಡಿ, ಈ ಬಾಬಿನಿಂದ ಬರತಕ್ಕ ಹಣದಿಂದ ದೇಶದ ಬೊಕ್ಕಸ ತುಂಬಿ, ಜನರಿಗೂ ನೆರವಾಗಬೇಕೆಂದು ಈ ಸಮಯದಲ್ಲಿ ಸೂಚಿಸುತ್ತೇನೆ.

ಅಭಿವೃದ್ಧಿ ಯೋಜನೆಗಳನ್ನು ಕೆಲವುಕಡೆ ಸ್ಥಗಿತಗೊಳಿಸಲಾಗಿದೆ. ನಮ್ಮ ಕಾರ್ಕಳ ಕ್ಷೇತ್ರದಲ್ಲಿ ಯಾವ ಕೆಲಸ ಮಾಡಿಲ್ಲ. ಕೆಲವು ಮುಖಂಡರ ಪ್ರಭಾವದಿಂದ ಬಡಜನರ ಶೋಷಣೆ ನಡೆದಿದೆ. ಕೆಲವು ಮುಖಂಡರಲ್ಲಿ ಸೇಡಿನ ಮನೋಭಾವ ಇದೆ, ನಮ್ಮ ತಾಲ್ಲೂಕಿನಲ್ಲಿ ರಸ್ತೆ ರಚನೆಗಾಗಿ ಸಾಂಕ್ಷನ್ಆದ ಕೆಲಸಗಳನ್ನು ತೆಗದುಕೊಳ್ಳದೆ ನಿಲ್ಲಿಸಲಾಗಿದೆ. ಇಂಥ ಮನೋಭಾವ ಸರಕಾರದಲ್ಲಿ ಬರಬಾರದು. ಸರಕಾರಿ ಅಧಿಕಾರಿಗಳು ಸಮತೋಲ ಮನೋಭಾವನೆಯಿಂದ ಕೆಲಸ ಮಾಡಬೇಕು. ದೇಶದ ಪ್ರಗತಿಗಾಗಿ ದುಡಿಯಬೇಕು. ನಮ್ಮ ಕಾರ್ಕಳ ತಾಲ್ಲೂಕು ಮಲೆನಾಡು ಪ್ರದೇಶವಾಗಿದೆ. ಈ ಮಲೆನಾಡು ಪ್ರದೇಶದಲ್ಲಿ ಆಂತರಿಕ ರಸ್ತೆಗಳ ಸ್ಥಿತಿ ಶೋಚನೀಯವಾಗಿದೆ. ಸರಿಯಾದ ರಸ್ತೆಗಳು ಇಲ್ಲದ ಮೂಲಕ ಸಂಚಾರಕ್ಕೆ ಅನನುಕೂಲವಾಗಿದೆ ಎಂದು ಹೇಳ ಬಯಸುತ್ತೇನೆ. ಜನರಲ್ಲಿ ಒಂದು ಆಶಾಭಾವನೆ ಇದೆ. ವ್ಯವಸಾಯಕ್ಕೆ ಹೆಚ್ಚಿನ ನೆರವು ಕೊಟ್ಟಿದ್ದೀರಿ. ಅದನ್ನು ನಾನು ಸ್ವಾಗತಿಸುತ್ತೇನೆ. ಹೆಚ್ಚಿನ ಪ್ರಮಾಣದಲ್ಲಿ ಪಂಪುಸೆಟ್ಟುಗಳ ವಿತರಣೆ ಮಾಡಬೇಕೆಂದು ಮಾಡಿದ್ದಾರೆ. ಆದರೆ ವಿತರಣೆಯ ವಿಷಯದಲ್ಲಿ ಕೆಲವು ಒಡಕು ಮಾತುಗಳು ಕೇಳಬರುತ್ತಿವೆ. ರೈತನಿಗೆ ಇವು ದೊರಕುವಂತೆ ಮಾಡಬೇಕು. ನಮ್ಮ ಕಡೆ ಸರಕಾರಿ ಅಧಿಕಾರಿಗಳು, ಬಿ.ಡಿ.ಓ; ತಹಶೀಲದಾರರು ಈ ವಿಚಾರದಲ್ಲಿ ಮನಸ್ಸು ಹಾಕುತ್ತಿಲ್ಲ, ಅದು ಸರಿಯಿಲ್ಲ, ಇದಕ್ಕೆ ಹೆಚ್ಚಿನ ಅವಕಾಶ ಕೊಡದೆ, ಆದಷ್ಟು ಬೇಗ ನೇರವಾಗಿ ರೈತನಿಗೆ ದೊರೆಯುವಂತೆ ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ರೈತನ ಸ್ಥಿತಿಯಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದಾರೆ. ನಿತ್ಯ ಬಳಕೆಯ ಪದಾರ್ಥಗಳ ಬೆಲೆ ಏರುತ್ತಿದೆ. ಆದರೆ ಭತ್ತದ ಬೆಲೆ ದಿನೇದಿನೇ ಇಳಿಯುತ್ತಿದೆ. ಆಹಾರ ಧಾನ್ಯಗಳ ಬೆಲೆಯ ವಿಚಾರದಲ್ಲಿ ಸರಕಾರದ ನೀತಿ ನ್ಯಾಯವಾದುದು ಅಲ್ಲ. ರೈತನು ಬೆಳೆದ ಆಹಾರ ಧಾನ್ಯ ಮಾರಬೇಕಾಗುತ್ತದೆ. ರೈತನು ಮಾರಾಟಮಾಡಿದನಂತರ ಬೆಲೆ ಹತೋಟಿಗೆ ತರಲಾಗುತ್ತಿದೆ. ನಿಜವಾಗಿಯೂ ಇದು ರೈತನಿಗೆ ಲಾಭವಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸದ ಒತ್ತಡದಮೇಲೆ ಹಿಂದಿನಿಂದಲೂ ಒಂದು ತಾಲ್ಲೂಕಿಗೆ ಎರಡು ಮೂರು ರಿಜಿಸ್ಟರ್ ಆಫೀಸುಗಳಿವೆ. ಹಳೇ ಮೈಸೂರು ಪದ್ಧತಿಯಂತೆ ಅಬಾಲಿಶ್‌ಮಾಡಿ ಒಂದು ತಾಲ್ಲೂಕಿಗೆ ಒಂದು ಇರುವಹಾಗೆ ಮಾಡಲು ಸರಕಾರ ನಿರ್ಣಯ ತೆಗೆದುಕೊಂಡಿದೆಯೆಂದು ತಿಳಿದು ಬಂದಿದೆ. ಇಂಥ ನಿರ್ಧಾರ ಕೈಕೊಳ್ಳುವಾಗ್ಗೆ ಕೆಲಸದ ಒತ್ತಡ ಎಷ್ಟಿದೆ, ಹೆಚ್ಚು ಉತ್ಪತ್ತಿ ಇದೆಯೇ ಎಂಬುದಕ್ಕೆ ಅಂಕಿಅಂಶಗಳನ್ನು ಗಮನಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ಕೆಲಸವಿದೆ. ಉತ್ಪತ್ತಿ ಇದೆ. ಹಳೇಮೈಸೂರು ಪ್ರದೇಶದಲ್ಲಿ ಅಷ್ಟು ಉತ್ಪತ್ತಿ ಇಲ್ಲ. ಆದ್ದರಿಂದ ಇದ್ದುದನ್ನು ಅಬಾಲಿಷ್ ಮಾಡುವುದು ಸರಿಯಲ್ಲ. ಈ ವಿಷಯ ಸರಕಾರ ಸರಿಯಾಗಿ ವಿಚಾರ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ಭಾಷಣ ಮುಗಿಸುತ್ತೇನೆ.

ಶ್ರೀ ಎಸ್. ಆವಲರೆಡ್ಡಿ (ಸಿಡ್ಲಘಟ್ಟ). —ಮಾನ್ಯ ಅಧ್ಯಕ್ಷರೇ, ನಮ್ಮ ಹಣಕಾಸಿನ ಮಂತ್ರಿಗಳು ಈ ವರ್ಷದ ಆಯವ್ಯಯ ಪಟ್ಟಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈಗಾಗಲೇ ಮಾತನಾಡಿದ ಅನೇಕ ಜನ ಮಾನ್ಯ ಮಿತ್ರರಲ್ಲಿ ಕೆಲವರು ಮೃದುವಾಗಿ ಟೀಕೆ ಮಾಡಿದ್ದಾರೆ. ನಾನು ಒಂದೆರಡು ವಿಷಯಗಳನ್ನು ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಸರಕಾರದವರು ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭಿಸಿದರು. ಮೊದಲನೇ ಮತ್ತು ಎರಡನೇ ಯೋಜನೆಗಳಲ್ಲಿ ದೊಡ್ಡದೊಡ್ಡ ನದಿ ಯೋಜನೆಗಳನ್ನು ಪ್ರೊಜೆಕ್ಟುಗಳನ್ನು ತೆಗೆದು ಕೊಂಡರು. ಭಾಕ್ರಾನಂಗಲ್, ದಾಮೋದರವ್ಯಾಲಿ, ನಾಗಾರ್ಜುನಸಾಗರ ಯೋಜನೆಗಳು ನಡೆಯುತ್ತಿವೆ. ನಮ್ಮ ಪ್ರದೇಶದಲ್ಲಿ ಯಾವ ದೊಡ್ಡ ಯೋಜನೆಗಳಿಲ್ಲ. ನಮ್ಮ ರಾಜ್ಯದಲ್ಲಿ ಮೈನರ್ ಇರಿಗೇಷನ್ ಮಾಡಬೇಕೆಂದು ದೇಶಾದ್ಯಂತ ಪ್ರಚಾರ ಮಾಡಿದರು. ಕೆಲವೇ ವರ್ಷಗಳಲ್ಲಿ ಕೆರೆಗಳ ದುರಸ್ತಿಮಾಡಿ ದೇಶದ ಸಂಪತ್ತು, ಉತ್ಪತ್ತಿ ಜಾಸ್ತಿಮಾಡುತ್ತಾರೆಂಬ ಆಶೆ ಬಂತು. ಆ ಪ್ರಕಾರ ಒಂದು ಪ್ಲಾನ್ ಹಾಕಬೇಕು. ಸಣ್ಣಪುಟ್ಟ ಕೆರೆಗಳ ದುರಸ್ತಿ ಮಾಡಿರುತ್ತಾರೆ, ಆದರೆ ಇದು ಸಾಕಾಗದು. ಇದಕ್ಕಾಗಿ ಒಂದು ಪ್ರೊಜೆಕ್ಟಮಾಡಿ ಎಂಜಿನಿಯರರು ಕೆಲಸ ಮಾಡಿದರೆ ಕೆರೆಗಳ ದುರಸ್ತಿಯಾಗಿ ಹೆಚ್ಚು ಜಮೀನು ನೀರಾವರಿಯಾಗುತ್ತದೆ. ತುಂಗಭದ್ರಾ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಹಾಕಿದ್ದೀರಿ. ಅಲ್ಲಿ ನಾಲೆಯ ಕೆಳಗೆ 25 ಸಾವಿರ ಎಕರೆ ಜಮೀನು ಸಾಗುವಳಿಯಾಗುತ್ತಿದೆ. ಆದರೆ ಕೆರೆಯ ಕೋಡಿಯ ಮೇಲ್ಭಾಗದಲ್ಲಿ ಸಾವಿರಾರು ಎಕರೆ ಜಮೀನು ಸಾಗುವಳಿಗೆ ಬರಲಿಲ್ಲ. ಯಾಕಂದರೆ ಜನರು ಊರು ಕಟ್ಟಿಕೊಂಡು ಅಲ್ಲಿ ನೆಲಸಿ ವ್ಯವಸಾಯ ಮಾಡಲು ಜನರು ಅಲ್ಲಿಗೆ ಹೋಗಲಿಲ್ಲ.

6-30 P.M.

ಆಹಾರದ ಉತ್ಪಾದನೆಗೆ ಹೆಚ್ಚು ಗಮನ ಕೊಟ್ಟು ಕೆರೆ, ಕಟ್ಟೆ ಅಥವಾ ತೂಬು ರಿಪೇರಿ ವಗೈರೆ ಕೆಲಸ ಮತ್ತು minor irrigation projects ತೆಗೆದುಕೊಂಡರು. ಶ್ರೀ ಎಸ್. ಎಂ. ಕೃಷ್ಣ ಅವರು ಮಾತನಾಡುವಾಗ ಅವರಾದರೂ ಒಂದೆರಡು ಒಳ್ಳೆಯ ಮಾತನ್ನು ಹೇಳುತ್ತಾರೆಂದು ನಾನು ಆಶಿಸಿದ್ದೆ. ಅವರೂ ಕೂಡ ಒಂದೇ ಸಲ "Agricultural production is no production at all when compared to the growth of the population" ಎಂದು ಹೇಳಿದರು. ವ್ಯವಸಾಯ ಬಹಳ ಕಷ್ಟವಾದ ಕೆಲಸ. ಬೇಸಾಯ, ನಿಮ್ಮ ಮನೆ ಮಕ್ಕಳೆಲ್ಲ ಸಾಯಲಿ ಎಂದು ಹೇಳುವುದುಂಟು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ರೈತರು ಭೂಮಿಯನ್ನು ಉಳುಮೆ ಮಾಡಿ, ಗೊಬ್ಬರ ಹಾಕಿ, ತಮ್ಮಲ್ಲಿದ್ದುದನ್ನು ಭೂಮಿಯಲ್ಲಿ ಹಾಕಿ ದೇವರೇ ಎಂದು ಮಳೆಗಾಗಿ ಕಾಯುತ್ತಾರೆ. ಹತ್ತಾರು ಸಲ ಮಳೆ ಹೋಗಿ, ಹತ್ತಾರು ಸಲ ರೈತ ತನ್ನ ಕಷ್ಟವನ್ನೂ ಹಾಗೂ ಹಾಕಿದ ಬಂಡವಾಳವನ್ನೂ ಹೋಗಲಾಡಿಸಿಕೊಂಡಿದ್ದಾನೆ. ಒಂದು ಸಲ ಬಂಡವಾಳವನ್ನು ಹೋಗಲಾಡಿಸಿ ಕೊಂಡರೆ ಮೂರು ಸಲ ಬೆಳೆ ಬಂದರೂ ಅವನು ಚೇತರಿಸಿಕೊಳ್ಳುವುದಕ್ಕಾಗುವುದಿಲ್ಲ. ಇಂಥ ಸ್ಥಳಗಳಲ್ಲಿ ರೈತರಿಗೆ ಅನುಕೂಲವಾಗಬೇಕು, ಅವನಿಗೆ assured water supply ಕೊಡಬೇಕೆಂದು ಒಂದು ಪ್ರೋಗ್ರಾಂ ಹಾಕಿದರು. ಇದರ ಪ್ರಕಾರ 15 ಸಾವಿರ ಬಾವಿಗಳನ್ನು ಕೊಟ್ಟರು. ಕೆಲವು ರೈತರು ಪಂಪ್‌ಗಳನ್ನು ತೆಗೆದುಕೊಳ್ಳಲು ಹಣವಿಲ್ಲದೆ ಒದ್ದಾಡುತ್ತಿದ್ದಾರೆ. ಈ ಸಲ ನಮ್ಮ ವ್ಯವಸಾಯ ಮಂತ್ರಿಗಳೂ ಮತ್ತು ಮುಖ್ಯ ಮಂತ್ರಿಗಳೂ ಸೇರಿ ಹಣಕಾಸಿನ ಸಚಿವರನ್ನು ಕರೆಸಿ ಮಾತನಾಡಿ 25 ಸಾವಿರ ಪಂಪ್‌ಸೆಟ್‌ಗಳನ್ನಾದರೂ ತರಿಸಿ ರೈತರಿಗೆ ಒದಗಿಸಬೇಕೆಂದು ಮಾಡಿದ್ದಾರೆ. ಬಾವಿಗಳನ್ನು ತೆಗೆದು ಪಂಪ್‌ಗಳ ನೀರನ್ನು ಮೇಲಕ್ಕೆತ್ತಿ ಹಾಯಿಸಿದರೆ ರೈತನುಖಾತ್ರಿಯಾಗಿ ಬೆಳೆಯನ್ನು ತೆಗೆಯುತ್ತಾನೆ. ಮತ್ತು ಅವನು ಸುಖವಾಗಿ ಜೀವನ ಮಾಡುತ್ತಾನೆ.

ಅದೇ ರೀತಿಯಲ್ಲಿ ನಮ್ಮ ಸಂಸ್ಥಾನದಲ್ಲಿ 36-37 ಸಾವಿರ ಕೆರೆಗಳಿವೆ. ಈ ಕೆರೆಗಳು ಆರು ವರ್ಷಕ್ಕೆ ಒಂದು ಸಲ ತುಂಬುತ್ತವೆ. ಆರು ವರ್ಷ ಕ್ಷಾಮವನ್ನನುಭವಿಸಿ, ತರಿಕಂದಾಯ ಕಟ್ಟಿ,

(ಶ್ರೀ ದಯಾನಂದ ಆರ್. ಕಳ್ಳೀ)

ಕೆರೆ ತುಂಬಿ ಕೋಡಿಬಿದ್ದರೆ ಆ ವರ್ಷ ಭತ್ತದ ಬೆಳೆ ತೆಗೆಯುತ್ತಾನೆ. Common well-irrigation ಜಾರಿಗೆ ತಂದು ಮಳೆಗಾಲ ಮತ್ತು ಬೇಸಿಗೆ ಕಾಲಗಳಲ್ಲಿ ಸಹ ಅಲ್ಪ ಸ್ವಲ್ಪ ಬೆಳೆ ತೆಗೆಯಲು ಅವಕಾಶವಾಗುವಂಥ ಯೋಜನೆಯೊಂದನ್ನೂ ಈವಾಗ ಸರ್ಕಾರದ ಮುಂದೆ ಇಟ್ಟಿದ್ದಾರೆ. ಇದರಿಂದಲೂ ಕೂಡ ಸಣ್ಣ ಕೆರೆಗಳ ಕೆಳಗೆ ಇರುವ ಅಚ್ಚುಕಟ್ಟುದಾರರಿಗೆ ಬಹಳ ಉಪಯೋಗವಾಗುತ್ತದೆ.

ನಮ್ಮ ಸಂಸ್ಥಾನದಲ್ಲಿ ಅನೇಕ ನದಿಗಳಿವೆ. ಇವು ನೀರಾವರಿಗೆ ಬಹಳ ಉತ್ತಮವಾಗಿವೆ. ಈ ನದಿಗಳ ದಡಗಳಲ್ಲಿರತಕ್ಕ ಜಮೀನನ್ನು ಆಬಾದಿಗೆ ತರಬೇಕಾಗಿದ್ದರೆ ಲೋಕೋಪಯೋಗಿ ಇಲಾಖೆಯವರು ಬಾವಿಗಳನ್ನು ತೆಗೆಸಿ ಪಂಪ್‌ಗಳನ್ನು ಹಾಕಿ ನೀರನ್ನೊದಗಿಸಬೇಕು.

ಬೆಂಗಳೂರಿನ ಸೂಪರಿಂಟೆಂಡಿಂಗ್ ಇಂಜನಿಯರು river valley ಸರ್ವೆ ಮಾಡಿದಾಗ ಕೋಲಾರ ಜಿಲ್ಲೆಯಲ್ಲಿಯೂ ಸರ್ವೆ ಮಾಡಿದರು. ಅವರು ಕೋಲಾರ ಜಿಲ್ಲೆಯ ವಿಷಯವನ್ನು ಹೇಳಿದ್ದಾರೆ. ನದಿಗಳು ನಮ್ಮಲ್ಲಿ ಹುಟ್ಟಿದ ಮಾತ್ರಕ್ಕೆ ನಮಗೆ ನೀರಿಲ್ಲ. ಅದು ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳನ್ನು ಬದುಕಿಸುತ್ತಿವೆ. ಉದಾಹರಣೆಗೆ ಹೇಳಬೇಕಾದರೆ ಗೋರಿಬಿದನೂರು ಹತ್ತಿರ ಮೂಗಿನಹಳ್ಳಕ್ಕೆ ಒಂದು ಸೇತುವೆಯನ್ನು ಕಟ್ಟುತ್ತಿದ್ದರು. ಅದಕ್ಕೆ foundation ಹಾಕುವುದಕ್ಕೆ 18 ಅಡಿ ಅಗಲ, 18 ಅಡಿ ಆಳವಿರುವ ಬಾವಿಯನ್ನು ತೆಗೆದಾಗ ಅದರಲ್ಲಿ ತುಂಬುತ್ತಿದ್ದ ನೀರನ್ನು ಹೊರತೆಗೆಯಲು 25 h. p. capacity ಇರುವ ಎರಡು ಮೋಟರುಗಳನ್ನು ಇಟ್ಟು ರಾತ್ರಿ ಹಗಲು ಕೆಲಸ ಮಾಡಿದರೂ ಒಂದು ಅಂಗುಲ ನೀರೂ ಕಡಮೆಯಾಗಲಿಲ್ಲ. ಸೇತುವೆ ಕಟ್ಟುವ ಸ್ಥಳವನ್ನು ಬದಲಾಯಿಸಿದರೆ ಈ ಬಾವಿಯಿಂದ 250 ಎಕರೆಗೆ ನೀರು ದೊರೆಯುತ್ತದೆ ಆ ಬಾವಿಗೆ ಖರ್ಚು ಆಗಿರುವುದು 500 ರೂಪಾಯಿ ಇರಬಹುದು. ಆದ್ದರಿಂದ ಈ ಬಗ್ಗೆ ಯೋಚಿಸಿ ಎಂದು ಹೇಳಿದಾಗ ಅದಕ್ಕೆ ಸಂಬಂಧಪಟ್ಟ ಇಂಜಿನಿಯರು ಬಹಳ ಆಶಾಭಾವನೆಯಿಂದ ಮೇಲಧಿಕಾರಿಗಳಿಗೆ ಬರೆದರು. ಸ್ವಲ್ಪ ಕಾಲದ ನಂತರ ಮಳೆ ಬಿದ್ದು ಎಲ್ಲ ಹೊಡೆದುಕೊಂಡು ಹೋಯಿತು, ಅಲ್ಲಿ ಸೇತುವೆಯನ್ನು ಕಟ್ಟಿದರು. ಇಂಥ ನೀರಿನ ಅನುಕೂಲತೆಯಿರುವ ನದಿಗಳು ಕೋಲಾರ ಜಿಲ್ಲೆಯಲ್ಲಿವೆ. ಪಾಪಘ್ನಿ, ಚಿತ್ರಾವತಿ, ಕುಶಾವತಿ, ಪಾಲಾರ್, ಪೆನ್ನಾರ್, ಈ ಐದು ನದಿಗಳಲ್ಲಿ ಬರುವ ನೀರನ್ನು ಉಪಯೋಗಿಸಿಕೊಂಡರೆ 20 ಸಾವಿರ ಎಕರೆ ಜಮೀನಿಗೆ ನೀರು ಸರಬರಾಜು ಆಗುತ್ತದೆ. ಇದರ ಖರ್ಚು ಸುಮಾರು 68 ಲಕ್ಷ ರೂಪಾಯಿಗಳು. ಇಷ್ಟು ಹಣವನ್ನೂ ಒಂದೇ ವರ್ಷ ಕೊಡಬೇಕಾಗಿಲ್ಲ. ಮೂರು ವರ್ಷಕ್ಕೆ ಭಾಗ ಮಾಡಿ ಆ ಹಣವನ್ನು ಉಪಯೋಗಿಸಿದರೆ ಕೋಲಾರ ಜಿಲ್ಲೆಗೆ ಕ್ಷಾಮ ಬರುವುದಿಲ್ಲ; ಸಕಾಲದಲ್ಲಿ ಬೆಳೆಗಳು ಖಾತ್ರಿಯಾಗಿ ಆಗುತ್ತವೆ.

ದೇಶದಲ್ಲಿ ನಮ್ಮಲ್ಲಿ ಭೂಕಂದಾಯ ಜಾಸ್ತಿ ಬರುವಂಥಾದ್ದನ್ನೂ dry areasಗಾಗಿ ಮೀಸಲಾಗಿಡಬೇಕು. ನಮ್ಮ ಸಂಸ್ಥಾನವನ್ನು ಮೂರು ವಿಭಾಗಗಳಾಗಿ ಮಾಡಬಹುದು. I will divide the area into three blocks–Malnad area where we get heavy rains; Semi-malnad area where it rains to the extent of 45–50 inches; dry areas where we do not get rains at all. This area extends up to Bijapur.

Dry areas ಎನಿದೆ ಅವುಗಳನ್ನು intensive ಆಗಿ ಅಭಿವೃದ್ಧಿ ಮಾಡಬೇಕಾಗಿದ್ದರೆ, it is only through irrigation wells and tube wells, ಈಗ ಕಂದಾಯದಿಂದ ಹೆಚ್ಚಾಗಿ ಬರುವ ನಾಲ್ಕು ಕೋಟಿ ರೂಪಾಯಿ ಬರುವಂಥಾದ್ದನ್ನು ಈ ಕಾರ್ಯಕ್ಕಾಗಿ ಮೀಸಲಾಗಿಡಬೇಕು. ಇದರ ಜೊತೆಗೆ ಕೇಂದ್ರ ಸರ್ಕಾರದಿಂದಲೂ ನಾಲ್ಕು ಕೋಟಿ ರೂಪಾಯಿಗಳನ್ನು ಪಡೆಯಬೇಕು. ಪ್ರತಿಯೊಂದು ಕಡೆಯೂ ಬಾವಿಗಳನ್ನು ತೆಗೆದು ಪಂಪ್‌ಗಳನ್ನು ಹಾಕುವ ತನಕ ನಾವು ಈ ಯೋಜನೆಯನ್ನು ಬಿಡಬಾರದು. ಹನಿಕೊಡಿದರೆ ಹಳ್ಳ ಎಂದು ಹೇಳುತ್ತಾರೆ. ಪ್ರತಿಯೊಬ್ಬ ರೈತನೂ ತನಗೆ ಬೇಕಾದ ಆಹಾರ ಪದಾರ್ಥಗಳನ್ನು ಬೆಳೆದುಕೊಂಡರೆ, ಅದರಿಂದ ಅವನಿಗೆ ಹಣವೂ ದೊರೆತು, ಅವನ ಮನೆ ಮಕ್ಕಳೆಲ್ಲ ಸುಖವಾಗಿರುತ್ತಾರೆ. ನಾವು ಅವನಿಗೆ ಸಾಲ ಕೊಡಬೇಕಾಗಿಲ್ಲ. ಈ ವ್ಯವಸ್ಥೆಯನ್ನು ಮಾತ್ರ ಮಾಡಿಕೊಡಬೇಕು.

ಈ ವರ್ಷದ ಬಡ್ಜೆಟ್ಟಿನಲ್ಲಿ irrigation wells and pump setsಗಾಗಿ ಒಂದು ಕೋಟಿ 65 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಈ ಬಗ್ಗೆಯಾದರೂ ಒಂದು ಒಳ್ಳೆಯ ಮಾತನ್ನು ನಮ್ಮ ಸ್ನೇಹಿತರು ಆಡಬೇಡವೇ ? ಬಯ್ಯುವುದಕ್ಕೆ ಸಹ ಲೆಕ್ಕವಿಲ್ಲ.

ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಮಾತನಾಡುವುದಿಲ್ಲ. ನಮ್ಮ ಸರ್ಕಾರ ಮಾಡಬೇಕಾದ ಕರ್ತವ್ಯ ಮಾಡಿದೆ. ಹಳ್ಳಿಯಿಂದ ನಗರಗಳವರೆಗೂ ಶಾಲೆಗಳಾಗಿವೆ. ಕೇವಲ ಎರಡು ವರ್ಷಗಳ ಕೆಳಗೆ ಈ ತರಹ ಕ್ರಮ ಜಾರಿಯಲ್ಲಿರಲಿಲ್ಲ. ಈಗ ಬಂದಿದೆ. ಜನಜಾಗೃತರಾಗಿದ್ದಾರೆ, ಬುದ್ಧಿವಂತ ರಾಗಿದ್ದಾರೆ. ಮಕ್ಕಳನ್ನು ಶಾಲೆಗಳಿಗೆ ಕಳಿಸುವುದನ್ನು ಅರಿತಿದ್ದಾರೆ. ಇತ್ತೀಚೆಗೆ ನಮ್ಮ ಸರ್ಕಾರದ ನೀತಿಯ ಪ್ರಕಾರ ಒಂದೊಂದು ಹೋಬಳಿಯಲ್ಲಿಯೂ ಎರಡು ಮೂರು ಹೈಸ್ಕೂಲುಗಳಾಗಿರುವ ಸ್ಥಳಗಳು ಇವೆ. ಅನೇಕ ಹೈಸ್ಕೂಲುಗಳಲ್ಲಿ ಬಾಲಕರಸಂಖ್ಯೆ ಜಾಸ್ತಿ ಇದೆ. ನಮ್ಮ ಸರ್ಕಾರದವರು ಬಹಳ ಮಾಡಬೇಕಾದ್ದಿಲ್ಲ. ಇಂಥ ಹೈಸ್ಕೂಲುಗಳಿಗೆ ಒಂದೆರಡು ರೂಮುಗಳನ್ನು ಹಾಕಿಕೊಟ್ಟರೆ, ಅನುಕೂಲವಾಗುತ್ತದೆ. ಅನೇಕ ಶಾಲೆಗಳಲ್ಲಿ ಸೀಟು ಸಿಕ್ಕುವುದೇ ಕಷ್ಟವಾಗಿದೆ. ಸರಿಯಾದ ಉಪಾಧ್ಯಾಯರುಗಳಿಲ್ಲವೆಂದು ನಮ್ಮ ಎದುರು ಪಕ್ಷದ ನಾಯಕರು ಟೀಕೆ ಮಾಡಿದ್ದಾರೆ. ಅದು ಸ್ವಲ್ಪಮಟ್ಟಿಗೆ ನಿಜವಿದೆ. ಅದನ್ನು ನಾವು ತಿದ್ದಿಕೊಳ್ಳುತ್ತೇವೆ. ಉಪಾಧ್ಯಾಯರು ಇಲ್ಲದೆಹೋದರೆ ಅದಕ್ಕೆ ಇಲಾಖೆಯವರು ತಕ್ಕ ಏರ್ಪಾಡು ಮಾಡುತ್ತಾರೆ. ಇದು ಬೇಗ ಕಾರ್ಯಗತವಾಗಿ ಒಳ್ಳೆಯ ಉಪಾಧ್ಯಾಯರು ದೊರಕುತ್ತಾರೆಂದು ಇಷ್ಟು ಮಾತ್ರ ಹೇಳುತ್ತೇನೆ.

ಆರೋಗ್ಯದ ವಿಚಾರದಲ್ಲಿ ಹೇಳಬೇಕಾಗಿಲ್ಲ. ಆರೋಗ್ಯ ಚೆನ್ನಾಗಿ ಉತ್ತಮವಾಗಿದೆ.

ಕೈಗಾರಿಕೆಗಳ ವಿಷಯದಲ್ಲಿ ನಮ್ಮ ಸರ್ಕಾರದ ತತ್ವವೇನೆಂದರೆ ಜಮೀನಿನ ಮೇಲೆ ಬಿದ್ದಿರುವ ಭಾರ, ಮತ್ತು ಜನಸಂಖ್ಯೆಯ ಒತ್ತಡವನ್ನು ಕೈಗಾರಿಕೆಗಳ ಕಡೆಗೆ ತಿರುಗಿಸಿ ಆ ಭಾರವನ್ನು ಕಡಮೆ ಮಾಡೋಣವೆಂದು ಕೇಂದ್ರ ಸರ್ಕಾರ ಯೋಚನೆ ಮಾಡಿದೆ, ನಮ್ಮ ರಾಜ್ಯ ಸರ್ಕಾರವೂ ಯೋಚನೆ ಮಾಡಿದೆ.

ಈ ವರ್ಷ ಇಂಡಸ್ಟ್ರಿಯಲ್ ಎಕ್ಸ್‌ಪಾನಷನ್ನಿಗೆ ಒದಗಿಸಿರುವಹಣ ತೀರಕಡಿಮೆಯಾಗಿದೆ. ಸರಕಾರ ಈ ವಿಚಾರದಲ್ಲಿ ಮುಂಜಾಗ್ರತೆಯಿಂದ ನಡೆದುಕೊಂಡಿಲ್ಲ, ಸಣ್ಣ ಕೈಗಾರಿಕೆಗೆ ವಿದ್ಯುತ್ ಶಕ್ತಿ ಪೂರೈಕೆ ಅಗತ್ಯ. ಆದರೂ ಸಹ ವಿದ್ಯುತ್ ಶಕ್ತಿ ಒದಗಿಸುವ ಏರ್ಪಾಡು ಮಾಡಲಿಲ್ಲ, ಶರಾವತಿ ವಿದ್ಯುತ್ ಯೋಜನೆಯಿಂದ ಸ್ವಲ್ಪ ಮುಂಚಿತವಾಗಿಯೇ ಪಾವರ್ ಸಿಕ್ಕುತ್ತದೆಂದು ಭಾವಿಸಲಾಗಿತ್ತು. ಇನ್ನು ಕೆಲವೇ ದಿವಸಗಳಲ್ಲಿ ಯೋಜನೆ ಕೆಲಸ ಮುಗಿದು ವಿದ್ಯುತ್ ಶಕ್ತಿ ದೊರೆಯುತ್ತದೆಂಬ ಆಶೆ ಇದೆ.

ಆಮೇಲೆ ಪಿಡಬ್ಲೂಡಿ ಇಲಾಖೆ. ರೋಡ್, ಬ್ರಿಜಿಸ್, ಬಿಲ್ಡಿಂಗ್ ಮುಂತಾದ ಅನೇಕ ಕೆಲಸಗಳು ಈ ಇಲಾಖೆ ಮುಖಾಂತರ ಆಗಬೇಕಾಗಿದೆ. ಒಂದೊಂದು ತಾಲ್ಲೂಕಿಗೆ 300 ಮೈಲಿ ರಸ್ತೆಯಾಗ ಬೇಕಾಗಿತ್ತು. ರಸ್ತೆ ಮಾಡಿ ಕೊಡದೇ ಇರುವುದರಿಂದ ಟೀಕೆಗೆ ಗುರಿಯಾಗಿದೆ. ರಸ್ತೆ ಇಲ್ಲದ ಮೂಲಕ ರೈತನಿಗೆ ಕಷ್ಟವಾಗುತ್ತಿದೆ. ಮುಖ್ಯವಾಗಿ ಹಳ್ಳಿಗಾಡಿನಲ್ಲಿ ರಸ್ತೆ ಮಾಡಬೇಕು. ಈಗ ತುರ್ತು ಪರಿಸ್ಥಿತಿ ಇದೆ ಎಂದು ರಸ್ತೆ ಅಭಿವೃದ್ಧಿ ಕೆಲಸ ನಿಲ್ಲಿಸಬಾರದು. ರಸ್ತೆ ಕಾಮಗಾರಿಗಾಗಿ ಇನ್ನು ಹೆಚ್ಚು ಹಣ ಒದಗಿಸಬೇಕು. ನಾಷನಲ್ ಹೈವೇಜ್ ಅಭಿವೃದ್ಧಿಯಾಗುತ್ತಾ ಇದೆ. ಚಿಕ್ಕ ಬಳ್ಳಾಪೂರ ಮೇಲಿಂದ ಹೋಗುವ ಬೆಂಗಳೂರು-ಬಳ್ಳಾರಿ ರಸ್ತೆ ಚೆನ್ನಾಗಿಲ್ಲ. ಈ ರಸ್ತೆ ದುರಸ್ತಿ ಕೆಲಸ ನಡೆಯಬೇಕಾಗಿದೆ. ಈ ಕೆಲಸಕ್ಕಾಗಿ ಇನ್ನು ಹೆಚ್ಚು ಹಣ ಒದಗಿಸುವದು ಅಗತ್ಯ. ರಸ್ತೆ ವಿಷಯದಲ್ಲಿ ಕೇಂದ್ರ ಸರಕಾರದಿಂದ ಹಣ ಬರುವದರಿಂದ ಮಾನ್ಯ ಮಂತ್ರಿಗಳು ಹೆಚ್ಚಿನ ಆಸಕ್ತಿ ವಹಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೋ-ಆಪರೇಟಿವ್ ಡಿಪಾರ್ಟಮೆಂಟ್. ಈ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ನಡೆದಿದೆ. ಸಹಕಾರಿ ಸಂಘಗಳಲ್ಲಿ ಜನರಲ್ ಬಾಡಿ ಮೀಟಿಂಗ ಆಗಬೇಕು, ಆಫೀಸ್ ಬೇರರ್ಸ್ ಅಪಾಯಿಂಟ್ ಮೆಂಟ್ ಆಗಬೇಕು. ಅದಕ್ಕೆ ಸಕಾಲದಲ್ಲಿ ಸರಕಾರ ನಾಮಿನೇಟ್ ಮಾಡಬೇಕೆಂದು ಇದೆ. ಆದರೆ ಅನೇಕ ಸಹಕಾರಿ ಸಂಘಗಳಲ್ಲಿ ಜನರಲ್ ಬಾಡಿ ಮೀಟಿಂಗ್ ಆಗಿಲ್ಲ. ಮೂರು ತಿಂಗಳಾದರೂ ನಾನ್ ಆಫಿಷಿಯಲ್ಸ್ ಬಂದಿಲ್ಲ, ಈ ರೀತಿ ನಡೆದರೆ ರಿಜಿಸ್ಟ್ರಾರ್ ಅವರು ಏನು ಮಾಡುತ್ತಾರೆ? ಮೇಲಿನಿಂದ ಇಂಟರ್‌ಫಿರನ್ಸ್ ಬಹಳ ಆಗಿದೆ ಎಂದು ಕೇಳಿದ್ದೇನೆ. ಚಿಕ್ಕಬಳ್ಳಾಪೂರದಲ್ಲಿ ಸಹಕಾರಿ ಸಂಘಕ್ಕೆ ನಾಮಿನೇಷನ್ ಆಗಿದೆ. ಆದರೆ ಮೀಟಿಂಗ ಆಗಿಲ್ಲ. ಮೀಟಿಂಗ್ ಕಾಲ್‌ಫಾರ್ ಮಾಡಿ ಅಂದರೂ ಮಾಡಿಲ್ಲ. ಈ ಸಹಕಾರಿ ಸಂಘಗಳ ಆಡಳಿತದಲ್ಲಿ ಬಿಗಿ ಇರಬೇಕು.

ನಾನು ಸೆರಿಕಲ್ಚರ್ ಏರಿಯಾದಿಂದ ಬಂದವನಾಗಿದ್ದೇನೆ. ಸೆರಿಕಲ್ಚರ್ ವಿಚಾರದಲ್ಲಿ ಎರಡು ಮಾತು ಹೇಳಲಿಚ್ಛಿಸುತ್ತೇನೆ. ಡೆವಲಪ್‌ಮೆಂಟ್ ವಿಷಯದಲ್ಲಿ ಹೇಳುವುದಾದರೆ ಅಭಿವೃದ್ಧಿ ಸಾಕಷ್ಟು ಆಗಿಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯ. ರೈತರು ಕಷ್ಟ ಪಟ್ಟು ರೇಷ್ಮೆ ಗೂಡು ಬೆಳೆಸುತ್ತಾರೆ. ಅವರ ಜೀವನ ಅದರ ಮೇಲೆ ಅವಲಂಬಿಸಿರುತ್ತದೆ. ಸರಿಯಾಗಿ ಇನ್‌ಸ್ಪೆಕ್ಷನ್ ನಡೆಯುವದಿಲ್ಲ ಹತ್ತು

(ಶ್ರೀ ದಯಾನಂದ ಆರ್. ಕಳ್ಳೀ)

ಹಳ್ಳಿಗಳನ್ನು ಒಬ್ಬ ಸಬ್‌ಇನ್‌ಸ್ಪೆಕ್ಟರ್ ಹೇಗೆ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ರೋಗ ರುಜಿನ ಬಾರದಂತೆ ನೋಡಿಕೊಳ್ಳಬೇಕಾಗುತ್ತದೆ. ಒಳ್ಳೆ ಬಿತ್ತನೆ ಒದಗಿಸಬೇಕು ಪ್ರತಿಯೊಂದು ತಾಲ್ಲೂಕಿಗೆ ಒಂದು ಸೆಂಟರ್ ಪ್ರಾರಂಭಿಸಬೇಕು. ಜಾಸ್ತಿ ಬೇಡಿಕೆ ಇದ್ದರೆ ಒಂದು ತಾಲ್ಲೂಕಿಗೆ ಎರಡು ತೆಗೆಯಬಹುದು ಸರಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದರು ಸಾಕಷ್ಟು ಬಿತ್ತನೆ ಒದಗಿಸುತ್ತಿಲ್ಲ. ಖಾಸಗೀಯವರಿಗೆ ಈ ಕೆಲಸ ಕೊಟ್ಟರೆ ಲಾಭ ದೊರೆಯುತ್ತದೆ ಎಂದ ನಾನು ಭಾವಿಸುತ್ತೇನೆ. ಸರಕಾರ ಇದನ್ನು ಯೋಚನೆ ಮಾಡಬೇಕು ಎಂದು ಹೇಳಿ ನನ್ನ ಮಾತ ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ-ನಾರ್ಥ್).-ಮಾನ್ಯ ಸಭಾಪತಿಗಳೇ, 1963-64ನೇ ಸಾಲಿನ ಬಜೆಟ್ ಮೇಲೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಲಿ ಚ್ಛಿಸುತ್ತೇನೆ. 1961-62 ನೇ ಇಸವಿಯಲ್ಲಿ 91 ಕೋಟಿ ವರಮಾನವಿತ್ತು. ಕಳೆದ ವರ್ಷ 99.70 ಕೋಟಿ ಎಂದು ಅಂದಾಜು ಮಾಡಿ ಕೊನೆಗೆ ರಿವೈಜ್ಡ್ ಬಜೆಟ್‌ನಲ್ಲಿ 95 ಕೋಟಿಗೆ ಇಳಿಸಿದೆ. ಈ ಇಳು ವರಿಗೆ ಕಾರಣ ಅಂದರೆ 9 ಕೋಟಿ ತೆಗೆದು ಹಾಕಿದ್ದಾರೆ, ಭದ್ರಾವತಿ ಕಾರ್ಖಾನೆಯಿಂದ ಬರತಕ್ಕಂಥ 7½ ಕೋಟಿ ಮತ್ತು ಕೋಲಾರ ಚಿನ್ನದ ಗಣಿಯಿಂದ ಬರತಕ್ಕ 1½ ಕೋಟಿ ಬಿಟ್ಟು 95 ಕೋಟಿ ಎಂದು ರಿವೈಜ್ಡ್ ಬಜೆಟ್‌ನಲ್ಲಿ ಎಸ್ಟಿಮೇಟು ಮಾಡಿದ್ದಾರೆ ಬಹುಶಃ ಇದನ್ನು ಸೇರಿಸಿದರೆ 104 ಕೋಟಿಯಾಗು ತ್ತದೆ. ಇದರಿಂದ 5ಕೋಟಿ ವರಮಾನ ಜಾಸ್ತಿ ಬಂದಿದೆ. ಎಂದುಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಈ ವರ್ಷ ಕೂಡ 99.12 ಕೋಟಿ ನಿರೀಕ್ಷಣೆ ಮಾಡಿದ್ದಾರೆ. ಆದರೆ ಇದು 110 ಕೋಟಿಗಿಂತ ಜಾಸ್ತಿ ಹೋಗುತ್ತದೆಂದು ನಾನು ಭಾವಿಸುತ್ತೇನೆ. ಈ ವರ್ಷ ಕೂಡ ಕೋಲಾರ ಗೋಲ್ಡ್ ಫೀಲ್ಡ್‌ದಿಂದ ಬರತಕ್ಕ 3.91 ಲಕ್ಷ ರೈಟ್ ಆಫ್ ಮಾಡಿದ್ದಾರೆ. ಈ ಅಂದಾಜು ಕೂಡ 110 ಕೋಟಿಗೆ ಕಡಿಮೆ ಹೋಗುವುದಿಲ್ಲ ಎಂದು ನಾನು ಅಂದಾಜು ಮಾಡುತ್ತೇನೆ. ಸೆಂಟ್ರಲ್ ಟಾಕ್ಸಸ್ ಎಷ್ಟಾಗುತ್ತದೆ ಎನ್ನುವುದನ್ನು ಎಕ್ಸಪೆಕ್ಟ ಮಾಡದೇ ಅಂದಾಜುಮಾಡಿದ್ದಾರೆ, ಬಡ್ಜೆಟ್ಟು ಈ ರೀತಿಯೇ ಇರಬೇಕು. ಈಗ ಮಂಡಿಸಿದ ರೀತಿ ಬಜೆಟ್ಟನ್ನು ನಾನು ಒಪ್ಪುತ್ತೇನೆ.

ಸಾಧಾರಣವಾಗಿ ಏತಕ್ಕೆ ಡಿಫಿಸಿಟ್ ತೋರಿಸುತ್ತಾರೆಂದರೆ, ಹಾಗೆ ತೋರಿಸಬೇಕಾದ್ದು ಸರ ಕಾರದ ಕರ್ತವ್ಯ; ಅದನ್ನು ಮಾಡಿದ್ದಾರೆ. ನಾವು ಈ ವಿಷಯದಲ್ಲಿ ಸ್ವಲ್ಪ ಆಶಾವಾದಿಗಳಾಗಿರಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೊದಲನೆ ಅಂಕಿಅಂಶದಲ್ಲಿ ತಾವು General Economic Trends ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ನಾನು ಈ ಬಜೆಟ್ಟಿನ ಬಗ್ಗೆ ಹೇಳುವುದಾದರೆ ನಿಜವಾಗಲೂ ಈ ತುರ್ತು ಪರಿಸ್ಥಿತಿಗೆ ಅನುಗುಣವಾಗಿ ಯಾವ ಒಂದು ರೀತಿಯ ಬಜೆಟ್ ತರಬೇಕಾಗಿತ್ತೋ ಆ ರೀತಿ ತಂದಿಲ್ಲ ಎಂದು ವಿಷಾ ದದಿಂದ ಹೇಳಬೇಕಾಗಿದೆ. ತಮ್ಮ ಅಂಕಿ ಅಂಶದ ಪ್ರಕಾರ ಅಕ್ಕಿ ಬೆಳೆಯುವವರಿಂದಲೂ ಸುಮಾರು 47,791 ಎಕರೆ ಜಾಸ್ತಿಯಾಗಿದ್ದರೂ ಕೂಡ, ಕೇವಲ 30,794 ಟನ್‌ಗಳ ಬೆಳೆ ಜಾಸ್ತಿಯಾಗಿದೆಯಂತ ತಮ್ಮ ಅಂಕಿ ಅಂಶದ ಮುಖಾಂತರ ಕೊಟ್ಟಿದ್ದೀರಿ. ಇದೇ ರೀತಿ ಜೋಳದ ಬಗ್ಗೆಯೂ ತಾವು 49,143 ಎಕರೆ ಜಾಸ್ತಿಯಾಗಿದ್ದರೂ 2,11,731 ಟನ್‌ಜಾಸ್ತಿ ಬೆಳೆದಿದೆಯೆಂದು ತೋರಿಸಿದೆ. ಆದರೆ ಎರಡು ಬೆಳೆಗ ಳಿಗೆ ಮಾತ್ರ ಬಹಳ ಏಟುಬಿದ್ದಿದೆಯೆಂದು ಅರ್ಥವಾಗುತ್ತದೆ. ಒಂದು ಕಡ್ಲೆಕಾಯಿ, ಮತ್ತೊಂದು ಹತ್ತಿ, ನಾವೂಕೂಡತುರ್ತು ಪರಿಸ್ಥಿತಿಗೆ ಹೊಂದಾಣಿಕೆಯಾಗಿ ಮಾಡಬಹುದು. ಅಕ್ಕಿಯನ್ನು ಪರದೇಶಗಳಿಂದ ತರಿಸಿಕೊಳ್ಳುತ್ತಾ ಇದ್ದೇವೆ, ಸುಮಾರು 100 ಕೋಟಿ ರೂಪಾಯಿ ಅಕ್ಕಿಯನ್ನು ತರಿಸಿಕೊಳ್ಳುತ್ತಾ ಇದ್ದೇವೆ. ಹಾಗೆಯೇ ಹತ್ತಿ ತರಿಸಿಕೊಳ್ಳುತ್ತಾ ಇದ್ದೇವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಹತ್ತಿಯಲ್ಲಿ 1,58,062 ಎಕರೆಯಲ್ಲಿ ಜಮೀನು ಮಾಡಿಯೇ ಇಲ್ಲ, ಆದರೂ ಕೂಡ 66,218 ಕೋಟಿ ನಷ್ಟ. ಬೆಳೆ ಹೆಚ್ಚಾಗಿ ಬೆಳೆದಿದ್ದಾರೆ, ಇದು imported goods, ಇದಕ್ಕೆ ಹೆಚ್ಚಿನ ಗಮನ ಕೊಡುವ ಅಗತ್ಯವಿದೆ, ಅದಕ್ಕೆ ಒಂದು ಕಾರಣವನ್ನು ಕೊಟ್ಟಿಲ್ಲ. ಇದರ ಬಗ್ಗೆ ಸೂಕ್ತ ಗಮನಕೊಡ ಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಜೊತೆಗೆ ನೀವು ಕೃಷಿಗಾರರಿಗೆ ಏನು ಸೌಲಭ್ಯಗ ಳನ್ನು ಕೊಟ್ಟಿದ್ದೇವೆಂದು ಹೇಳುತ್ತಿರೋ ಅದಕ್ಕೆ ಬೆಳೆಯಾಗಿರತಕ್ಕಂಥಾದ್ದು ಬಹಳ ಕಡಿಮೆಯಾಗಿದೆ. ನೀವು ಹೆಚ್ಚಿನ ಸೌಲಭ್ಯ, ಸೌಕರ್ಯಗಳನ್ನು ಕೊಡುತ್ತೇವೆ ಅನ್ನುವುದಕ್ಕೂ ಬೆಳೆ ಕಡಿಮೆಯಾಗುವುದಕ್ಕೂ ಏನು ಕಾರಣ ಎಂಬ ಬಗ್ಗೆ ಸರಿಯಾದ ಹೋಲಿಕೆಯಾಗುವುದಿಲ್ಲ. ತಮ್ಮ ಅಂಕಿ ಅಂಶಗಳು ಹಿಂದೆ ಬಿದ್ದಿವೆ.

ಇಂಡಸ್ಟ್ರಿಯಲ್ ಕರ್ಸರ್ವಿನಲ್ಲಿ ಕೂಡ ತಾವು ಕೊಡುವ ಅಂಕಿ ಅಂಶಗಳಿಂದ ಪ್ರೊಡಕ್ಷನ್ ಗಣನೀಯವಾಗಿ ಹೆಚ್ಚಿಲ್ಲ. ಎಲ್ಲೋ ಕೇವಲ ಸಾವಿರಗಟ್ಲೆ ಹೆಚ್ಚಿದೆ. ಅದು ನಿಜವಾಗಿ ಅಂದಾಜು ಮಾಡುವಂಥ ಅಂಕಿ ಅಂಶವಲ್ಲ. ಕೋಲಾರ ಗೋಲ್ಡ್ ಫೀಲ್ಡಿನಿಂದ ಕಳೆದ ವರ್ಷಕ್ಕಿಂತಲೂ ಚಿನ್ನ ಜಾಸ್ತಿ ಬಂದಿದೆಯೆಂದು ಹೇಳಿದ್ದೀರಿ ; ಆದರೆ ಅದು ಕೇವಲ 14 ಕಿಲೋಗ್ರಾಂ 1960-61 ರಲ್ಲಿ 4,925 ಕಿಲೋಗ್ರಾಂ ಬಂದಿದೆ, ಈಸಾರಿ 4,935 ಕಿಲೋಗ್ರಾಂ ಬಂದಿದೆ. ಅಲ್ಲಿಗೆ ಕೇವಲ 14 ಕಿಲೋಗ್ರಾಂ ಜಾಸ್ತಿ ಬಂದಿದೆ. ಇದನ್ನು ಹೇಳುವುದಕ್ಕೆ ಕೂಡ ಸ್ವಾರಸ್ಯವಾದ ಅಂಕಿ ಅಂಶವಲ್ಲ.

ತಾವು ಖರ್ಚು ಬಾಬ್ತಿನಲ್ಲಿ 798 ಕೋಟಿ ರೂಪಾಯಿ ಖರ್ಚಿಗೆ ಅಂದಾಜು ಮಾಡಿದ್ದೀರಿ. ಇದರಲ್ಲಿ ತಾವು ಈ ತುರ್ತು ಪರಿಸ್ಥಿತಿಯಲ್ಲಿ ಯಾವ ಒಂದು ಪದಾರ್ಥಗಳಿಗೆ ಹೆಚ್ಚಿನ ಆಸಕ್ತಿ ವಹಿಸಬೇಕೋ, ಅವುಗಳ ಬಗ್ಗೆ ಆಸಕ್ತಿ ವಹಿಸಿಲ್ಲ. ಸಾಧಾರಣವಾಗಿ imported goods ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು ; ತುರ್ತು ಪರಿಸ್ಥಿತಿಗೆ ಇದು ಬಹಳ ಅಗತ್ಯ. ಅಗ್ರಿಕಲ್ಚರ್ ಬಾಬಿಗೆ ಕಳೆದ ವರ್ಷಕ್ಕಿಂತ ಸ್ವಲ್ಪ ಹೆಚ್ಚು ಖರ್ಚು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಆದರೆ ಅದರ ಬಗ್ಗೆ ಹೆಚ್ಚು ಗಮನ ಕೊಡದೆ ಇರುವುದು ಇಲ್ಲಿ ಅಂಕಿ ಅಂಶಗಳ ಮುಖಾಂತರ ಗೊತ್ತಾಗುತ್ತದೆ. ನಮ್ಮ ರಾಜ್ಯದ *per capita* income, 1950-51 ರಲ್ಲಿ 225.8, 1956-57 ರಲ್ಲಿ 262, 1960-61 ರಲ್ಲಿ 311 ಎಂದು ಹೇಳಿದ್ದೀರಿ. ತಾವು ನಮಗೆ ಈ ರೀತಿಯಲ್ಲಿ ಹೇಳಿಬಿಟ್ಟರೂ, ತಮ್ಮ ಸರ್ಕಾರದ ಪ್ರಕಟಣೆಯಲ್ಲಿ ಬಹಳ ವ್ಯತ್ಯಾಸವಾಗಿದೆ. ಶ್ರೀ ಬಿ. ಎಲ್. ಗೌಡರು ಈ ಬಜೆಟ್ಟಿನ ಮೇಲೆ ಮಾತನಾಡುತ್ತಾ ಅವರು ಹೇಳಿದ ಅಂಕಿ ಅಂಶಗಳನ್ನು verify ಮಾಡುವುದಾದರೆ, ಅದಕ್ಕೂ ಇದಕ್ಕೂ ವ್ಯತ್ಯಾಸವಿದೆ. ಅಂಕಿ ಅಂಶಗಳನ್ನು ಕೊಡುವ ಸಂಧರ್ಭದಲ್ಲಿ ಅವುಗಳನ್ನು ಬಹಳ ಖಚಿತವಾಗಿ ಕೊಡಬೇಕು ನಮಗೆ ಕೊಟ್ಟಿರುವುದೂ, ತಾವು ಇಟ್ಟುಕೊಂಡಿರುವುದೂ ವ್ಯತ್ಯಾಸಕ್ಕೆ ಒಳಗಾಗಬಾರದು. ತಾವು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 10 ಲಕ್ಷ ಟನ್ ಆಹಾರ ಹೆಚ್ಚಿಗೆ ಬೆಳೆಯುವ ಅಭಿಪ್ರಾಯ ಇಟ್ಟಿದ್ದೀರಿ. 1961-62 ರಲ್ಲಿ 0.63 ಲಕ್ಷ ಟನ್ ಹೆಚ್ಚು ಉತ್ಪತ್ತಿಯಾಗಿದೆಯೆಂದು ಹೇಳಿದ್ದರೂ, 1962-63 ರಲ್ಲಿ 1.40 ಲಕ್ಷ ಟನ್ ಹೆಚ್ಚು ಅಂದಾಜು ಮಾಡಿದ್ದೀರಿ, 1.40 ಲಕ್ಷ ಟನ್ ಹೆಚ್ಚಾಗಿ ಬರುತ್ತದೆಂದು ಖಚಿತವಾಗಿ ಹೇಳಿಲ್ಲ. ತಾವು ಮುಂದಿನ ವರ್ಷಕ್ಕೆ, 1963-64 ಕ್ಕೆ ಎರಡು ಲಕ್ಷ ಟನ್ ಹೆಚ್ಚಾಗಿ ಬರುತ್ತದೆಂದು ಅಂದಾಜು ಹಾಕಿಕೊಂಡಿದ್ದೀರಿ. ಆದ್ದರಿಂದ ಇನ್ನುಳಿದ ಯೋಜನೆ ಎರಡು ವರ್ಷಗಳಿಗೆ ಹೆಚ್ಚಿಗೆ production ಎಕ್ಸ್‌ಪೆಕ್ಟ್ ಮಾಡಬೇಕು. ಪಂಚ ವಾರ್ಷಿಕ ಯೋಜನೆಯಲ್ಲಿ ತಾವು ಏನು ಒಂದು ಟಾರ್ಗೆಟ್ ಮುಟ್ಟಬೇಕೆಂದು ಮಾಡಿಕೊಂಡಿದ್ದೀರೋ, ಅದನ್ನು ಮುಟ್ಟುವುದಕ್ಕಾಗುವುದಿಲ್ಲವೆಂದು ತಮ್ಮ ಅಂಕಿ ಅಂಶಗಳ ಮುಖಾಂತರ ಸಿಕ್ಕಿ ಹಾಕಿಕೊಂಡು ಹೇಳಿದ್ದಾಗಿದೆ. ಈ ವರ್ಷ Agriculture schemes ಗೆ ಖರ್ಚು ಮಾಡುವ ಅಮೌಂಟ್ 139 ಕೋಟಿ ಇಷ್ಟು ಖರ್ಚು ಮಾಡಿದರೂ ನಿಮ್ಮದು ಒಂದು ಟಾರ್ಗೆಟ್ ಏನಿದೆ ಅದನ್ನು ಮುಟ್ಟುವ ಹಾಗಿಲ್ಲವೆಂದು ತಾವೇ ಅಂಕಿ ಅಂಶಗಳ ಮೂಲಕ ವ್ಯಕ್ತಪಡಿಸಿದ್ದೀರಿ. ಎಲ್ಲೆಲ್ಲಿ ವ್ಯತ್ಯಾಸಗಳು ಇರುತ್ತವೆಯೋ ಅವುಗಳನ್ನು ಸರಿಪಡಿಸಬೇಕು, ಇದಕ್ಕೆ ಹೆಚ್ಚು ಆಸಕ್ತಿ ವಹಿಸಿ ಎಲ್ಲೆಲ್ಲಿ ಅನ್ಯಾಯ ನಡೆಯುತ್ತಿದೆಯೋ ಅದನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ತಾವು ಕೋ-ಆಪರೇಟೀವ್ ಸೊಸೈಟಿಗಳಿಗೆ 25 ಕೋಟಿ ರೂಪಾಯಿ short and medium term ರೂಪದಲ್ಲಿ ಲೋನ್ ಕೊಡುವುದಕ್ಕೆ ಪ್ರಯತ್ನಪಡುತ್ತಿದ್ದೀರಿ. ನಿಜವಾಗಿಯೂ ಇದು ಸ್ವಾಗತಾರ್ಹ. ಆದರೆ ಈ ಸಂದರ್ಭದಲ್ಲಿ ಡಿಫಾಲ್ಕೇಷನ್ ಮಾಡದ ಯಾವ ಸೊಸೈಟಿಯು ಇಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ, ಮೆಂಬರಲ್ಲದವರಿಗೆ ಸೊಸೈಟಿಗಳಲ್ಲಿ ಲೋನ್ ಸ್ಯಾಂಕ್ಷನ್ ಆಗಿಬಿಟ್ಟಿದೆ. ಇದು ಯಾವ ಪ್ರಭಾವವೂ ಇಲ್ಲದೆ ಆಗುತ್ತದೆಯೇ. ಅದನ್ನು ವಸೂಲು ಮಾಡುವುದಕ್ಕೆ ಕ್ರಮ ಏನಾದರೂ ಹಾಕಿದ್ದೀರಾ ? ಕೆಲವು ಕಡೆ ಸತ್ತವರಿಗೆ ಸಾಲ ಕೊಟ್ಟಿರುವುದು ಕೇಳಿ ಬರುತ್ತದೆ. ಒಂದೇ ಒಂದು ತಾಲ್ಲೂಕಿನಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಟಿ. ನರಸೀಪುರ ತಾಲ್ಲೂಕಿನಲ್ಲಿ 4 ಲಕ್ಷ ರೂಪಾಯಿ ಹೊರಟು ಹೋಗಿದೆ, ಪತ್ತೆ ಇಲ್ಲ. ಇಂಥ ಒಂದು ಅವ್ಯವಸ್ಥೆಯಾದರೆ ಸರಕಾರಕ್ಕೆ ಏನು ಹೇಳೋಣ. ಸರ್ಕಾರದವರು ತಮಗೆ ಬೇಕಾದವರಿಗೆ ಸಹಾಯ ಮಾಡಬೇಕೆಂದಿದ್ದಾರೆ. ಒಂದು ಕೋಟಿ ರೂಪಾಯಿ Charged Head ನಲ್ಲಿ ಇಟ್ಟುಕೊಂಡುಬಿಡಿ. ಆಡಳಿತ ಪಕ್ಷದ ಜನಗಳಿಗೆ ಸಹಾನು ಭೂತಿ ತೋರಿಸಬೇಕಾಗುತ್ತದೆ; ಏಕೆಂದರೆ ಅವರು ಹಾಗೆ ಕಷ್ಟಪಟ್ಟಿದ್ದಾರೆ. ಜೈಲು ವಾಸ ಅನುಭವಿಸಿದ್ದಾರೆ. ಅವರಿಗೆ ಸಹಾನು ಭೂತಿ ತೋರಿಸಿ ಸಹಾಯ ಮಾಡಬೇಕು. ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಒಂದು ಕೋಟಿ ರೂಪಾಯಿ Charged Head ಗೆ ಹಾಕಿಬಿಡಿ, ನಮ್ಮದು ಅಭ್ಯಂತರವಿಲ್ಲ. ನಿಮ್ಮ ಪಕ್ಷಕ್ಕೆ ನಿಮ್ಮ ಸರ್ಕಾರ ಸಹಾಯ ಮಾಡುವ ಮೇಲ್ಪಂಕ್ತಿ ಹಾಕಿದರೆ, ಮುಂದೆ ಇನ್ನೊಂದು ಪಾರ್ಟಿಯವರು ಅಧಿಕಾರಕ್ಕೆ ಬಂದಾಗ ಅವರ ಪಕ್ಷದವರಿಗೂ ಸಹಾಯ ಮಾಡುವುದಕ್ಕೆ ಅವಕಾಶವಿರುತ್ತದೆ. ಆದರೆ Administration Weak ಆಗುವ ರೀತಿಯಲ್ಲಿ, ಈ ತರಹ ಸೊಸೈಟಿಗಳಿಗೆ ಹಣ ಹಂಚಿ, ದುರ್ವಿನಿಯೋಗ ಮಾಡಿಸಬೇಡಿ, ಈ ಮೋಸಕ್ಕೆ ಮೊದಲು

(ಶ್ರೀ ಬಿ. ಕೆ. ಪುಟ್ಟಯ್ಯ)

ಕೊನೆಯಿಲ್ಲದ ಹಾಗಾಗುತ್ತದೆ. ಪ್ರತಿಯೊಂದು ಇಲಾಖೆಯಲ್ಲಿಯೂ ಹಣ ಅನ್ಯಾಯವಾಗಿ ಹೋಗುತ್ತಾ ಇದೆ. ಜನತೆ ತಾವು ಏನು ಅಂದಾಜು ಮಾಡಿದ್ದಾರೋ, ತಮಗೆ ಅದಕ್ಕಿಂತಲೂ ಜಾಸ್ತಿ ಹಣ ಕೊಟ್ಟಿದ್ದಾರೆ, 5—6 ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ತಾವು ಅವರು ಕೊಟ್ಟ ಹಣ ವನ್ನು ಖರ್ಚು ಮಾಡುವ ರೀತಿಯಲ್ಲಿ ಅವರ ಪ್ರೀತಿ ವಿಶ್ವಾಸವನ್ನು ಗಳಿಸಬೇಕು. ತಮ್ಮಿಂದ ಎಷ್ಟು ಪ್ರೀತಿ ವಿಶ್ವಾಸ ಜನತೆಗೆ ಹೋಗಬೇಕೋ ಅಷ್ಟು ಜನತೆಗೆ ಹೋಗುತ್ತಾ ಇಲ್ಲ. ಈ ದೃಷ್ಟಿಯಿಂದ ಕೂಡ ತಾವು ಆಲೋಚನೆ ಮಾಡಬೇಕು. Long term ಲೋನಿಗೆ 1.45 ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ, ಬಹಳ ಸಂತೋಷ. ಆದರೆ ಇದನ್ನು ಬೇಗನೆ ನಿಜವಾದ ವ್ಯಕ್ತಿಗೆ ಸೇರಿಸ ಬೇಕು ಎಂದು ಒತ್ತಿ ಹೇಳುತ್ತೇನೆ.

Minor irrigation ಬಗ್ಗೆ ತಾವು 3.5 ಕೋಟಿಯನ್ನು ಪ್ರೊವೈಡ್ ಮಾಡಿದ್ದೀರಿ.

Mr. SPEAKER.—The House will now adjourn and meet again to-morrow at 12-30 P. M.

The House adjourned at Seven of the Clock to meet again at Thirty Minutes Past Twelve of the Clock on Friday, the 8th March 1963.